ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರಮಾಸ ಪತ್ರಿಕೆ

ಜನವರಿ 2021

ಬೆಲೆ ರೂ.5/-




"ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ"





ತಿರುಮಲೆಯಲ್ಲಿ 30-12-2020 ರಂದು ನಡೆದ ಸ್ವಾಮಿಯವರ
ಪ್ರಣಯಕಲಹ ಮಹೋತ್ಸವ ದೃಶ್ಯಗಳು



ತಿರುಮಲೆಯಲ್ಲಿ 25-12-2020 ರಂದು ವೈಕುಂಠ ಏಕಾದಶಿಯಂದು
ಸ್ವಾಮಿಯವರಿಗೆ ವೈಭವವಾಗಿ ನಡೆದ "ಸ್ವರ್ಣರಥೋತ್ಸವ" ದೃಶ್ಯಗಳು



ತಿರುಮಲೆಯಲ್ಲಿ 26-12-2020 ರಂದು ಶಾಸ್ತ್ರೋಕ್ತವಾಗಿ
ನಡೆದ ವೈಕುಂಠದ್ವಾದಶಿ ಚಕ್ರಸ್ನಾನ



ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರಿಗೆ ಚಿನ್ನದ ಆಭರಣಗಳನ್ನು 30-12-2020 ರಂದು
ತಿ.ತಿ.ದೇ. ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ.ಬಸಂತ್ ಕುಮಾರ್, ಐ.ಎ.ಎಸ್.,
ರವರಿಗೆ ಶ್ರೀ ಶ್ರೀ ಶ್ರೀ ದೊಡ್ಡಜೀಯರ್ ಸ್ವಾಮಿಯವರು ನೀಡುತ್ತಿರುವ ದೃಶ್ಯ



ದೆಹಲಿಯಲ್ಲಿರುವ ಸ್ವಾಮಿಯವರ ಆಲಯಕ್ಕೆ "ಗುಡಿಕೋ ಗೋವು" ಎಂಬ
ಕಾರ್ಯಕ್ರಮದ ಸಂದರ್ಭವಾಗಿ ಹಸು ಮತ್ತು ಕರುವನ್ನು 29-12-2020 ರಂದು
ನೀಡುತ್ತಿರುವ ತಿ.ತಿ.ದೇ. ಅಧ್ಯಕ್ಷರು ಮತ್ತು ಕಾರ್ಯನಿರ್ವಹಣಾಧಿಕಾರಿ ಯವರು

# ಭಗವದ್ಗೀತೆ

ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್।
ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್॥

(ಅಧ್ಯಾಯ - 1, ಶ್ಲೋಕ - 19)



## ತಾತ್ಪರ್ಯ

ಓ ಧೃತರಾಷ್ಟ್ರ ಕೇಳು, ಆ ಗದ್ದಲವು ಭೂಮಿಯಲ್ಲಿಯೂ ಆಕಾಶದಲ್ಲಿಯೂ ತುಂಬಿ ಪ್ರತಿಧ್ವನಿಯನ್ನು ಹಬ್ಬಿಸಿ ಕೌರವರ ಎದೆ ಬಿರಿಯುವಂತೆ ಮಾಡಿತು.



ಹದಿನಾಲ್ಕು ಲೋಕವನಾಳುವ ತಂದೆಗೆ।
ಮುದದಿಂದ ನಾನೊಬ್ಬ ಭಾರವಾದೆನೆ

ಸುರಗಿರಿಯು ಶರಧಿಯೊಳು ಕಡೆವಾಗ ಮುಣುಗಲು।
ಭರದಿಂದ ಪೋಗಿ ಬೆನ್ನಾಂತು ಪೊತ್ತೆ॥
ಧರಣಿಯು ಮೊರೆಯಿಡಲು ತೆರಳಲ್ಲಿ ಬಂದು।
ಭೂತರುಣಿಯನು ಸೆರೆಬಿಡಿಸಿ ಉಳುಹಿಕೊಳ್ಳಲಿಲ್ಲವೆ

ಸುರಪತಿ ಮುನಿದೇಳು ಹಗಲಿರುಳು ಮಳೆಗರೆಯೆ।
ಬೆರಳಲ್ಲಿ ಧರಿಸಿ ತುರುಗಳ ಕಾಯ್ದೆ॥
ವರಮುನಿ ಅಶನವನು ಬೇಡಲು ಬೆದರಿ ನರ।
ನರಸಿ ನಿನ್ನ ಕರೆಯೆ ಕರುಣದಲಿ ಪಾಲಿಸಿದೆ॥

ಜಲಜಾಕ್ಷ ಬೆಟ್ಟವನು ಪೊತ್ತು ಬಳಲಿದಾಗ।
ಸಲಹಬೇಕೆಂದು ಬೇಸರಿಸಲಿಲ್ಲಾ॥
ಸುಲಭದಲಿ ಶೇಷಾ ಚಲವಾಸನಾಗಿಪ್ಪ।
ಒಲಿದೆನ್ನ ರಕ್ಷಿಸೋ ವಿಜಯವಿಠ್ಠಲನೆ॥

-ಶ್ರೀ ವಿಜಯದಾಸರು

(ಆರನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಅಭಿಮುಖಭಾವ ಸಂಪದಭಿಸಂಭವಿನಾಂ ಭವಿನಾಂ ಕ್ವಚಿದುಪಲಕ್ಷಿತಾ ಕ್ವಚಿದಭಂಗುರಗೂಢಗತಿಃ।**
**ವಿಮಲರಸಾವಹಾ ವೃಷಗಿರೀಶದಯೇ ಭವತೀ ಸಪದಿ ಸರಸ್ವತೀವ ಶಮಯತ್ಯ ಘಮಪ್ರತಿಘಮ್ ॥೫೨॥**

ಅತಿಕೃಪಣನೂ ಕೂಡ ಪರಮಾತ್ಮನ ದಯೆಯಿಂದ ಅತ್ಯಂತ ಧನಿಕನಾಗುವನೆಂದು ಹಿಂದಿನ ಪದ್ಯದಲ್ಲಿ ನಿರೂಪಿಸಿ, ಈ ಪದ್ಯದಲ್ಲಿ ದಯೆಯ ಕಟಾಕ್ಷದಿಂದ ಪವಿತ್ರವಾದ ಸರಸ್ವತೀ ನದಿಯಲ್ಲಿ ಸ್ನಾನ ಮಾಡಿದವನು ಕೂಡಲೇ ಪಾಪಗಳಿಂದ ಮುಕ್ತನಾಗುವಂತೆ ಪಾಪರಹಿತನಾಗುವನೆಂದು ತಿಳಿಸುತ್ತಾ ದಯೆಯನ್ನು ಸರಸ್ವತೀನದಿಗೆ ಹೋಲಿಸಿ ವರ್ಣಿಸುತ್ತಾರೆ.

ಸರಸ್ವತೀ ನದಿಯ ಕೆಲವು ಕಡೆ ಪ್ರಕಟವಾಗಿದ್ದರೂ ಕೆಲವು ಕಡೆ ಗುಪ್ತಗಾಮಿನಿ. ಪವಿತ್ರವಾದ ಆ ನದಿಯು ತನ್ನ ಸಾನಿಧ್ಯವನ್ನು ಹೊಂದಿದವನನ್ನು ತಾನು ಪ್ರತ್ಯಕ್ಷವಾಗಿರಲಿ, ಪರೋಕ್ಷವಾಗಿರಲಿ, ಪಾಪರಹಿತನನ್ನಾಗಿ ಮಾಡುತ್ತದೆ. ಲೋಕದಲ್ಲಿ ಪರೋಪಕಾರಿಯಾದವನು ಎದುರಿಗಿದ್ದೇ ಉಪಕಾರವನ್ನು ಮಾಡಬೇಕೆಂದು ನಿಯಮವಿಲ್ಲ. ಪರೋಕ್ಷವಾಗಿ ಉಪಕರಿಸುವುದೇ ಉತ್ತಮ ಮಾರ್ಗ, ಅಂಥವನು ಎದುರಿಗಿದ್ದರೆ ಕೇಳಬೇಕಾದುದೇನು ಅದರಂತೆ ಓ ದಯೆಯೇ! ನೀನು ಕೂಡ ನಿನ್ನ ಕಟಾಕ್ಷಕ್ಕೆ ಗೋಚರನಾದವನನ್ನು ಕೆಲವು ವೇಳೆ ಅವನಿಗೆ ಗೋಚರವಾಗಿಯೂ, ಕೆಲವು ವೇಳೆ ಅವನಿಗೆ ಗೋಚರವಾಗದೆಯೂ ವಿಳಂಬವಿಲ್ಲದೆ ಪಾಪರಹಿತನನ್ನಾಗಿ ಮಾಡುವೆ.

ಹಿಂದೆಯೇ ತಿಳಿಸಿರುವಂತೆ ದಿವ್ಯ ಮಂಗಳವಿಗ್ರಹ ಸೇವೆಯೆಂದೂ ದಿವ್ಯಾತ್ಮಸ್ವರೂಪ ಸಾಕ್ಷಾತ್ಕಾರವೆಂದೂ ಭಗವತ್ಸೇವೆಯು ಎರಡು ವಿಧವಾಗಿರುತ್ತದೆಯಲ್ಲವೆ! ಸದಾಚಾರ್ಯ ಸಂಪತ್ತಿನ ಮೂಲಕ ದಯಾದೇವಿಯ ಕಟಾಕ್ಷಕ್ಕೆ ಪಾತ್ರರಾದವರಿಗೆ ಮಾತ್ರ ಮೇಲೆ ಹೇಳಿದ ಎರಡು ವಿಧವಾದ ಭಗವತ್ಸೇವಾರೂಪವಾದ ಅಭಿಮುಖ್ಯ ಸಂಪದವು ದೊರೆತಕೂಡಲೇ ಅವರ ಸಮಸ್ತಪಾಪಗಳೂ ಪರಿಹೃತವಾಗುವುವೆಂಬುದು ಇಲ್ಲಿ ವಿವಕ್ಷಿತವಾದುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು



# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ
ಮಾರ್ಗಶಿರ - ಪುಷ್ಯ ಮಾಸ ಸಂಚಿಕೆ

ಸಂಪುಟ - 51 ಜನವರಿ 2021 ಸಂಚಿಕೆ - 8

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಮಕರ ಸಂಕ್ರಮಣ | - ಶ್ರೀಮತಿ ಕೆ.ವಿ. ಪದ್ಮಾವತಿ | 7 |
| ಬನಶಂಕರಿ ಕ್ಷೇತ್ರದಲ್ಲಿ ಬನದ ಹುಣ್ಣಿಮೆ | - ಶ್ರೀಮತಿ ಬಿ. ಎಸ್. ಪಾರಿಜಾತ | 10 |
| ಮಾಸಾನಾಂ ಮಾರ್ಗಶೀರ್ಷೋಽಸ್ಮಿ | -ಡಾ ॥ ಎನ್. ಕೆ. ರಾಮಶೇಷನ್ | 12 |
| ಗಡಿದಂ ವೆಂಕಟೇಶ್ವರ ಮತ್ತು ಮಿಟ್ಟೇಮರಿ ಶ್ರೀ ನರಸಿಂಹ ದೇವಾಲಯ | - ಕೆಂಗೇರಿ ಚಕ್ರಪಾಣಿ | 16 |
| ಬಾಲ ಪ್ರಪಂಚಕ್ಕೆ ಪೋಪು ಹೋಗೋಣ ಬಾರೋ ರಂಗ | - ಶ್ರೀಮತಿ ವಿ. ರೇವತಿ | 19 |
| ದಾಸಸಾಹಿತ್ಯದಲ್ಲಿ ನಾಮಸ್ಮರಣೆ | - ಡಾ॥ ವಾಸುದೇವ ಅಗ್ನಿಹೋತ್ರಿ | 23 |
| ಪದಬಂಧ | - ಪಿ. ಜಿ. ಶ್ರೀನಿವಾಸನ್ | 26 |
| ತ್ಯಾಗರಾಜರು ಕರ್ನಾಟಕ ಸಂಗೀತದ ಮೇರು ಪರ್ವತ | - ಶ್ರೀಮತಿ ಗಿರಿಜಾ ಎಸ್.ದೇಶಪಾಂಡೆ | 31 |
| ಜ್ಞಾನ ತಪಸ್ವಿ ಜಿತಾಮಿತ್ರ ತೀರ್ಥರು | -ಡಾ ॥ ಗುರುರಾಜ ಪೋಶೆಟ್ಟಿಹಳ್ಳಿ | 32 |
| ಕೃಷ್ಣಕಥೆಯನ್ನು ನುಡಿದ ಕುಮಾರವ್ಯಾಸ | - ಡಾ॥ ಪ್ರದೀಪಕುಮಾರ ಹೆಬ್ರಿ | 34 |
| ಅಗಸ್ತ್ಯ ಮಹಾಮುನಿಗಳು | - ಡಾ ॥ ಸಿ. ಎಸ್. ಊರ್ಮಿಳಾ | 39 |
| ಆಯುರ್ವೇದ ದಿವ್ಯೌಷಧ ತ್ರಿಕಟುಚೂರ್ಣ | - ಶ್ರೀಮತಿ | 42 |
| ಶ್ರೀ ಅಕ್ಷೋಭ್ಯ ತೀರ್ಥರ ಆರಾಧನೆ | - ತೀರ್ಥಹಳ್ಳಿ ಅನಂತ ಕಲ್ಲಾಪುರ | 45 |
| ಶ್ರೀ ಗುರುಪ್ರಾಣೇಶ ವಿಠಲದಾಸರು | - ಡಾ ॥ ರಾಮಚಂದ್ರ ದಾಸ್ ಸಿ.ಜೆ. | 47 |
| ಸಂಸ್ಕೃತ ಕಲಿಯೋಣ.. | - ಕಾಶಿ ಕೃಷ್ಣಾಚಾರ್ಯ | 49 |
| ಪುಸ್ತಕಾವಲೋಕನ | - ಪ್ರಣವ | 50 |
| ನೀತಿ ಕಥೆ - ದುರಾಸೆಯ ಫಲ | - ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರಕಥೆ - ಶ್ರೀ ಗೋದಾ ಕಲ್ಯಾಣ | - ಶ್ರೀಮತಿ ಆರ್. ಕೃಷ್ಣವೇಣಿ | 52 |
| ಕ್ವಿಜ್ | - ಶ್ರೀಮತಿ ಸೂರ್ಯವಂಶಿ | 54 |


ಮುಖಚಿತ್ರ - ಶ್ರೀ ವೆಂಕಟೇಶ್ವರ ಸ್ವಾಮಿ ಮೂಲವಿಗ್ರಹ, ತಿರುಮಲೆ
ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರ ಮೂಲ ವಿಗ್ರಹ , ತಿರುಚಾನೂರು

**ಗೌರವ ಸಂಪಾದಕರು**
ಡಾ ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ



# ಸಂಕ್ರಾಂತಿ - ಗೋಮಾತೆ

ಮಕರ ಸಂಕ್ರಾಂತಿ ಎಂದರೆ ಸಂಭ್ರಮದ ಹಬ್ಬ, ಸಂಕ್ರಾಂತಿಯ ಆಚರಣೆಗಳನ್ನು ದೇಶದಾದ್ಯಂತ ವಿವಿಧ ಹೆಸರುಗಳಿಂದ ಆಯಾ ಪ್ರಾಂತ್ಯಗಳಲ್ಲಿರುವ ಪದ್ಧತಿಗಳ ಮೂಲಕ ಆಚರಿಸುತ್ತಾರೆ. 'ಸಂಕ್ರಮಣ' ಅಂದರೆ ಬದಲಾವಣೆ ಎಂದರ್ಥ. ಸೂರ್ಯನು ದ್ವಾದಶರಾಶಿಗಳಲ್ಲಿ ಸಂಚರಿಸುತ್ತಾ ಮಕರ ರಾಶಿಗೆ ಪ್ರವೇಶಿಸುತ್ತಾನೆ, ಇದನ್ನೇ ಮಕರ ಸಂಕ್ರಾಂತಿ ಎಂದು ಕರೆಯುತ್ತೇವೆ. ಇದು ಜನವರಿ ತಿಂಗಳಿನಲ್ಲಿ, ಅಂದರೆ ಪುಷ್ಯಮಾಸ, ಹೇಮಂತ ಋತುವಿನಲ್ಲಿ ಸಂಭವಿಸುತ್ತದೆ. ಆ ದಿನದಿಂದ ಸೂರ್ಯನು ಉತ್ತರಾಯಣದಲ್ಲಿ ಅಡಿಯಿರಿಸುತ್ತಾನೆ. ಆಗ ಸ್ವರ್ಗದ ಬಾಗಿಲು ತೆರೆದುಕೊಳ್ಳುತ್ತವೆ ಎಂದು ಪುರಾಣಗಳು ತಿಳಿಸುತ್ತವೆ.

ನಮ್ಮ ದಕ್ಷಿಣಾದಿ ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಇದು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ. ಉತ್ತರದಲ್ಲೂ ಬೈಸಾಕಿ ಎಂಬ ಹೆಸರಿನಲ್ಲಿ ಆಚರಿಸುತ್ತಾರೆ.ದಕ್ಷಿಣದ ರಾಜ್ಯಗಳಲ್ಲಿ ಈ ಹಬ್ಬವನ್ನು ಭೋಗಿ, ಸಂಕ್ರಾಂತಿ, ಕರಿ ಹಬ್ಬ ಅಥವಾ ಕನುಮ ಹಬ್ಬ ಎಂದು ಮೂರು ದಿನಗಳ ಕಾಲ ಆಚರಿಸುವುದು ಸಂಪ್ರದಾಯವಾಗಿದೆ. ಈ ಮೂರೂ ದಿನಗಳಲ್ಲಿ ಮನೆಯ ಮುಂದೆ ವಿವಿಧ ರಂಗೋಲಿಗಳನ್ನು ಬಿಡಿಸುವುದು ಹೆಂಗಳೆಯರಿಗೆ ಸಂಭ್ರಮದ ಕೆಲಸ. ಆ ದಿನದಲ್ಲೇ ಹಲವೆಡೆ ರಂಗೋಲಿ ಸ್ಪರ್ಧೆಯನ್ನೂ ಆಯೋಜಿಸಿರುತ್ತಾರೆ. ಆ ರಂಗೋಲಿಯ ಮೂಲಕ ಸೂರ್ಯದೇವನನ್ನು ಸ್ವಾಗತಿಸಿ ವಿಧವಾದ ಹುಗ್ಗಿಯನ್ನು ಮಾಡಿ ದೇವರಿಗೆ ಅರ್ಪಿಸುವುದೂ ವಾಡಿಕೆ, ಈ ಹಬ್ಬವನ್ನು ಪೊಂಗಲ್ ಎಂದು ಕರೆಯುತ್ತಾರೆ.

ಹೊಸ ಬೆಳೆಗಳನ್ನು ಬೆಳೆದು ಅವುಗಳನ್ನು ಮೊದಲು ದೇವರಿಗೆ ಅರ್ಪಿಸಿ ನಂತರ ನಾವು ಸೇವಿಸುವುದು ಈ ಹಬ್ಬದ ವಿಶೇಷವಾಗಿದೆ. ಹಾಗೆ ಸಂಕ್ರಾಂತಿಯಂದು ಸಕ್ಕರೆ ಅಚ್ಚುಗಳನ್ನು ಹಾಕಿ ಬೆಲ್ಲ, ಒಣಕೊಬ್ಬರಿ, ಹುರಿಗಡಲೆ, ಬಿಳಿ ಎಳ್ಳು ಮುಂತಾದವುಗಳನ್ನು ಮಿಶ್ರಣ ಮಾಡಿ ಕಬ್ಬು ಬಾಳೆಹಣ್ಣು, ಎಲಚಿ ಹಣ್ಣು ಮುಂತಾದವುಗಳನ್ನು ಬಂಧು ಬಾಂಧವರಿಗೆ ಸ್ನೇಹಿತರಿಗೆ ಹಂಚುವುದು ಈ ಹಬ್ಬದ ಮುಖ್ಯ ಆಚರಣೆಯಾಗಿದೆ. ಹೊಸದಾಗಿ ಬೆಳೆದಿರುವ ಮೇಲಿನ ಎಲ್ಲ ಪದಾರ್ಥಗಳನ್ನು ಮೊದಲು ದೇವರಿಗೆ ಅರ್ಪಿಸಿ ಎಲ್ಲರೊಂದಿಗೆ ಹಂಚಿಕೊಂಡು ಸ್ವೀಕರಿಸುವುದು ವಾಡಿಕೆ. ಹಾಗೇ ಈ ಮೂಲಕ ಸ್ನೇಹ ಬಾಂಧವ್ಯಗಳನ್ನು ಮತ್ತಷ್ಟು ಒಳಪಡಿಸಿಕೊಳ್ಳುವುದು ಈ ಹಬ್ಬದ ಮುಖ್ಯ ಉದ್ದೇಶವಾಗಿದೆ. ಹಾಗೆ ಮನೆಯಲ್ಲಿ ಪುಟ್ಟ ಮಕ್ಕಳಿದ್ದರೆ ಅವರಿಗೆ ಸಕ್ಕರೆಯಲ್ಲಿ ಮಣಿಗಳನ್ನು ತಯಾರಿಸಿ ಸಂಜೆ ಅದರಿಂದ ಸರವನ್ನು ತಯಾರಿಸಿ ಮಕ್ಕಳಿಗೆ ಹಾಕಿ ಎಲಚಿ ಹಣ್ಣು, ಕಬ್ಬನ್ನು ಚಿಕ್ಕ ಚಿಕ್ಕ ಚೂರುಗಳನ್ನಾಗಿ ಮಾಡಿ ಅವರಿಗೆ ಎರೆದು ಸಂಭ್ರಮಿಸುವುದು ಈ ಹಬ್ಬದ ಮತ್ತೊಂದು ಮುಖ್ಯ ಭಾಗವಾಗಿದೆ.

ಆಂಧ್ರದಲ್ಲಿ ಸಂಕ್ರಾಂತಿಯ ಆಚರಣೆ ಸ್ವಲ್ಪ ಭಿನ್ನವಾಗಿದೆ. ಅಂದು ಅವರು ಗತಿಸಿದ ಹಿರಿಯರ ಹೆಸರಿನಲ್ಲಿ ತಿಲತರ್ಪಣವನ್ನು ನೀಡುತ್ತಾರೆ. ಅರಿಶಿನದ ಗಿಡ , ಹೊಸ ಬಟ್ಟೆಗಳನ್ನು ಅವರಿಗೆ ಅರ್ಪಿಸುತ್ತಾರೆ.

ಎಲ್ಲೆಡೆ ಹಸುಗಳಿಗೆ ಕಿಚ್ಚು ಹಾಯಿಸುವುದು ಮಾತ್ರಾ ಒಂದೆ ರೀತಿಯಲ್ಲಿರುತ್ತದೆ, ಏಕೆಂದರೆ ನಮ್ಮ ದೇಶ ಕೃಷಿಗೆ ಮಹತ್ವ ನೀಡಿರುವ ದೇಶವಾದ್ದರಿಂದ, ಹಸುಗಳಿಗೆ ಎತ್ತುಗಳಿಗೆ ಕಿಚ್ಚುಹಾಯಿಸುವುದು ಸಂಪ್ರದಾಯ. ಅವುಗಳಿಗೆ ಚೆನ್ನಾಗಿ ಅಲಂಕರಿಸಿ, ಅವುಗಳನ್ನು ಸಂಜೆಯಾಗುತ್ತಿದ್ದಂತೆ ಕೋಲಾಹಲದ ನಡುವೆ ಕಿಚ್ಚು ಹಾಯಿಸುತ್ತಾರೆ. ಇದಕ್ಕೆ ವೈಜ್ಞಾನಿಕ ಕಾರಣವೂ ಇಲ್ಲದಿಲ್ಲ ಹಸುಗಳಿಗೆ, ಎತ್ತುಗಳಿಗೆ ಛಳಿಗಾಲದಲ್ಲಿ ಅವುಗಳ ಮೈಮೇಲೆ ಹರಡುವ ಸಣ್ಣ ಸಣ್ಣ ಕ್ರಿಮಿಗಳಿಂದ ಕಾಪಾಡಲು ಈ ಕಿಚ್ಚು ಹಾಯಿಸುವ ಪ್ರಕ್ರಿಯೆ ಉಪಯೋಗವಾಗುತ್ತದೆ. ಹಾಗೆಯೇ ಮೂರನೆಯ ದಿನವಾದ ಕರಿಹಬ್ಬ ಅಥವಾ ಕನುಮ ಹಬ್ಬದಂದು ಕೂಡಾ ಈ ಕಿಚ್ಚು ಹಾಯಿಸುವ ಸಂಪ್ರದಾಯವಿದೆ. ಹೀಗೆ ಸಂಕ್ರಾಂತಿಯ ಆಚರಣೆ ಭಿನ್ನವಾದರೂ ಸಂಭ್ರಮ ಪಡುವುದು ಒಂದೇ ರೀತಿಯಲ್ಲಿರುತ್ತದೆ.

ಹಾಗೇ ತಿ.ತಿ.ದೇ, ಹಸುಗಳನ್ನು ಕಾಪಾಡಿ ಬೆಳೆಸುವ ನಿಟ್ಟಿನಲ್ಲಿ 'ಗುಡಿಕೋ ಗೋವು' (ಗುಡಿಗೆ ಒಂದು ಗೋವು) ಎಂಬ ಯೋಜನೆಯನ್ನು ಹಮ್ಮಿಕೊಂಡಿದೆ. ಅದರ ಪ್ರಕಾರ ಎಲ್ಲಾ ಗುಡಿಗಳಿಗೆ ಒಂದೊಂದು ಗೋವುಗಳನ್ನು ದಾನವನ್ನಾಗಿ ನೀಡುವುದು ಇದರ ಉದ್ದೇಶ ಅದಕ್ಕಾಗಿ ಗೋವುಗಳನ್ನು ಪಾಲಿಸುತ್ತಿದ್ದಾರೆ. ಯಾರಾದರೂ ಗೋವುಗಳನ್ನು ದಾನಮಾಡಬಯಸಿದರೆ ಅದನ್ನು ತಿ.ತಿ.ದೇ ಯವರಿಗೆ ದಾನ ನೀಡಿದಲ್ಲಿ ಅದನ್ನು ಯಾವುದಾದರೂ ಅವಶ್ಯಕತೆ ಇರುವ ಗುಡಿಗೆ ದಾನ ಮಾಡುತ್ತಾರೆ . ಈ ಯೋಜನೆಗೆ ಭಕ್ತರೂ ಸ್ಪಂದಿಸಿ ಅನಾಥವಾಗಿರುವ ಗೋವುಗಳನ್ನು ಸಂರಕ್ಷಣೆ ಮಾಡಿದ ಪುಣ್ಯವನ್ನು ಪಡೆದು ಗೋಪಾಲಕ, ಗೋವಿಂದನ ಕೃಪೆಗೆ ಪಾತ್ರರಾಗಬಹುದು.

ಗೋವಿಂದಾ! ಗೋವಿಂದಾ!...ಗೋವಿಂದಾ...!

# ಮಕರ ಸಂಕ್ರಮಣ ಸೂರ್ಯ ಪಥಚಲನ

ಶ್ರೀಮತಿ. ಕೆ.ವಿ. ಪದ್ಮಾವತಿ
99722 22791

ಶಾಸ್ತ್ರ ಸಂಪ್ರದಾಯಗಳ ಪ್ರಕಾರ ಸೂರ್ಯನು ಧನು ರಾಶಿಯಿಂದ ಮಕರ ರಾಶಿಯನ್ನು ಪ್ರವೇಶಿಸುವುದನ್ನೇ ಮಕರ ಸಂಕ್ರಾಂತಿ ಎಂದು ಕರೆಯಲಾಗುತ್ತದೆ. ಈ ಹಬ್ಬದ ಸಮಯ ದಲ್ಲಿ ಶುಭಕಾರ್ಯಗಳನ್ನು ಕೈಗೊಳ್ಳುವುದು ಶ್ರೇಯಸ್ಕರ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡುವ ದಿನವೇ ಸಂಕ್ರಾಂತಿ. ಸೂರ್ಯನು ಒಂದು ರಾಶಿ ಯಲ್ಲಿ ಒಂದು ತಿಂಗಳು ಇರುತ್ತಾನೆ. ವರ್ಷಕ್ಕೆ ಹನ್ನೆರಡು ಸಂ ಕ್ರಾಂತಿಗಳಾದರೂ, ಮಕರ ಸಂಕ್ರಾಂತಿಗಿರುವ ಮಹಿಮೆ ಉಳಿ ದವುಗಳಿಗಿಲ್ಲ. ಇಲ್ಲಿ ಸೂರ್ಯನು ತನ್ನ ರಾಶಿಯನ್ನು ಮಾತ್ರವಲ್ಲ, ಪಥವನ್ನೂ ಬದಲಾಯಿಸುತ್ತಾನೆ. ಆತ ದಕ್ಷಿಣದಿಂದ ಉತ್ತರದ ಕಡೆಗೆ ಚಲಿಸುತ್ತಾನೆ. ಅಂದಿನಿಂದ ನಂತರ ಮದುವೆ ಮುಂಜಿ ಗಳಿಗೆ ಬೇಕಾದ ಶುಭಮೂಹೂರ್ತಗಳೆಲ್ಲ ಲಭ್ಯ, ಧನುರ್ಮಾಸ ದಲ್ಲಿ ಪಂಚಾಂಗ ಕಟ್ಟಿ ಇಟ್ಟವರೆಲ್ಲ ಈಗ ಶುಭಕಾರ್ಯಗಳಿಗೆ ಹೊರಡುತ್ತಾರೆ. ಹಬ್ಬಗಳೂ ಒಂದೊಂದಾಗಿ ಕಾಣಿಸಿಕೊಂಡು ಬದುಕಿಗೆ ರಂಗೇರಿಸತೊಡಗುತ್ತದೆ.

ನಮ್ಮಲ್ಲಿ ಸಂಕ್ರಾಂತಿಯಂದು ಮುಖ್ಯವಾಗಿ ಕಂಡು ಬರು ವುದು ಎಳ್ಳು ಬೆಲ್ಲ.ಸಣ್ಣ ಚೂರುಗಳಾಗಿ ಕತ್ತರಿಸಿದ ಬೆಲ್ಲ, ಒಣ ಕೊಬ್ಬರಿ, ಹುರಿಗಡಲೆ, ಸಿಪ್ಪೆ ತೆಗೆದ ಕಡಲೆಕಾಯಿಬೀಜ ಹಾಗೂ ಹುರಿದ ಬಿಳಿ ಎಳ್ಳನ್ನು ಸೇರಿಸಿ ಮನೆಯಲ್ಲಿ ಎಳ್ಳು ಬೆಲ್ಲವನ್ನು ತಯಾರಿಸಿ ಸುತ್ತಲಿನ ಮನೆಗಳಿಗೆ ಎಳ್ಳು ಹಂಚುವುದು ಸಂಕ್ರಾಂ ತಿಯ ಸಂಪ್ರದಾಯ.'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾ ಡೋಣ' ಎಂದು ಹೇಳಿಕೊಳ್ಳುತ್ತಾರೆ ಎಳ್ಳಿನ ಜೊತೆಗೆ ಸಕ್ಕರೆ ಅಚ್ಚುಗಳು, ಹಣ್ಣು ಮತ್ತು ಕಬ್ಬಿನ ತುಂಡುಗಳನ್ನೂ ನೀಡುತ್ತಾರೆ. ಅಂದು ಪುಟ್ಟ ಬಾಲಕಿಯರು ಜರಿಲಂಗ ತೊಟ್ಟು ಅಕ್ಕಪಕ್ಕದ ಮನೆಗಳಿಗೆ ಪುಟಪುಟನೆ ಓಡಾಡುತ್ತಾ ಎಳ್ಳುಬೆಲ್ಲ ಬೀರುತ್ತಾ ಸಂಭ್ರಮವನ್ನು ಚಿಮ್ಮಿಸುವುದನ್ನು ನೋಡುವುದೇ ಸೊಗಸು.











ಕರ್ನಾಟಕದ ರೈತರಿಗೆ ಸಂಕ್ರಾಂತಿ ಸುಗ್ಗಿಯ ಹಬ್ಬ, ಬೆಳೆಗಳು ಕೈಗೆ ಬಂದು, ಅಂಗಳದಲ್ಲಿ ಕಣಜ ತುಂಬಿ, ಜೇಬು ಹಣದ ರುಚಿ ನೋಡುವುದರಿಂದ ರೈತನಿಗೆ ಖುಷಿಯೇ ಖುಷಿ. ಮಳೆಗಾಲ, ಚಳಿಗಾಲಗಳಲ್ಲಿ ಹೊಲಗದ್ದೆಗಳಲ್ಲಿ ದುಡಿದ ಎತ್ತು - ರಾಸುಗಳಿಗೆ ಈಗ ಕೊಂಚ ವಿಶ್ರಾಂತಿ, ಅದೇ ನೆಪದಲ್ಲಿ ಅವುಗಳಿಗೆ ಒಂದು ಸಮೃದ್ಧ ಸ್ನಾನ, ಸಾಧ್ಯವಾದಷ್ಟು ಅಲಂಕಾರ. ಸಂಜೆ ಊರಿನ ಬಯಲಲ್ಲಿ ಎಲ್ಲರ ಮನೆಯ ಎತ್ತುಗಳಿಗೂ ಸೇರಿ, ದೊಡ್ಡದೊಂದು ಸೌದೆರಾಶಿ ಹಾಕಿ, ಅದಕ್ಕೆ ಬೆಂಕಿ ಕೊಟ್ಟು ಆ ಬೆಂಕಿಯಲ್ಲಿ ಅವುಗಳನ್ನು ಓಡಿಸಲಾಗುತ್ತದೆ. ಇದನ್ನು ಕಿಚ್ಚು ಹಾಯಿಸುವುದು ಎನ್ನುತ್ತಾರೆ. ಈ ಆಚರಣೆ ಈಗ ಬೆಂಗಳೂರಿಗೂ ಕಾಲಿಟ್ಟಿದ್ದು. ನಾನಾ ಕಡೆ ಅದ್ದೂರಿಯಾಗಿ ನಡೆಯಲು ಆರಂಭವಾಗಿದೆ. ಊರು ಬಿಟ್ಟು ಬಂದು ಪಟ್ಟಣದಲ್ಲಿ ನೆಲೆಸಿರುವವರಿಗೆ ಊರಿನ ದಿನಗಳನ್ನು ನೆನಪಿಸಿಕೊಳ್ಳಲು ಸದವಕಾಶ. ಕಿಚ್ಚು ಹಾಯಿಸುವುದರಿಂದ ಅವುಗಳ ಮೈಮೇಲಿರುವ ಉಣ್ಣೆಯಂಥ ಕ್ರಿಮಿಗಳು ನಾಶವಾಗುತ್ತವೆ ಎಂಬುದು ಇದಕ್ಕೆ ಕೆಲವರು ನೀಡುವ ವೈಜ್ಞಾನಿಕ ಕಾರಣ. ಉತ್ತರ ಕರ್ನಾಟಕದ ಕೆಲವೆಡೆ ಎಲ್ಲರೂ ಸೇರಿ ಗಾಳಿ ಪಟ ಹಾರಿಸುವ ಸಂಪ್ರದಾಯವಿದೆ. ಮಹಿಳೆಯರು ಗುಂಪು ಗುಂಪಾಗಿ ರಂಗೋಲಿಯನ್ನು ಬಿಡಿಸುವುದು ಸಂಕ್ರಾಂತಿಯ ಸಮಯದ ಮತ್ತೊಂದು ವಿಶೇಷ. ದನಕರುಗಳನ್ನು ಸಿಂಗರಿಸಿ ಮೆರವಣಿಗೆ ಮಾಡುವುದುಂಟು.

ಉತ್ತರ ಭಾರತದಲ್ಲಿ ಮಕರ ಸಂಕ್ರಾಂತಿಯಂದು ಪುಣ್ಯಸ್ನಾನ ಮಾಡುವ ಸಂಪ್ರದಾಯ ವಿಫಲವಾಗಿದೆ. ಅಂದು ಉತ್ತರ ಪ್ರದೇಶದಲ್ಲಿ ಕುಂಭ ಮೇಳ ಮತ್ತು ಪಶ್ಚಿಮ ಬಂಗಾಳದಲ್ಲಿ ಗಂಗಾಸಾಗರ ಅಥವಾ ಸಾಗರದ್ವೀಪ ಮೇಳ ಆರಂಭವಾಗುತ್ತದೆ.ಈ ಸಮಯದಲ್ಲಿ ನದಿಯಲ್ಲಿ ಪವಿತ್ರತೆ ಅಂಶ ಹೆಚ್ಚಿರುವುದರಿಂದ ನದಿಯಲ್ಲಿ ಮುಳುಗುವುದರಿಂದ ಪಾಪಗಳೆಲ್ಲ ನಾಶವಾಗುತ್ತವೆ ಎಂಬ ನಂಬಿಕೆಯಿದೆ. ಕರ್ನಾಟಕದಲ್ಲೂ ಧರ್ಮಸ್ಥಳದ ನೇತ್ರಾವತಿ, ಸುಬ್ರಮಣ್ಯದ ಕುಮಾರಧಾರಾ, ಭಾಗಮಂಡಲ,ತಲಕಾಡುಗಳ ಕಾವೇರಿ ನದಿಗಳಲ್ಲಿ ಪುಣ್ಯಸ್ನಾನ ನಡೆಯುತ್ತದೆ.

ಇಂದು ಹಳ್ಳಿಗಳಲ್ಲಿ ನಡೆಯುವ ಸಂಕ್ರಾಂತಿಗೂ ಪಟ್ಟಣದ ಸಂಕ್ರಾಂತಿಗೂ ಅಷ್ಟೇನೂ ವ್ಯತ್ಯಾಸವಿಲ್ಲ.ಹಳ್ಳಿಯಲ್ಲಿ ಕೈಸೇರಿದ ಬೆಳೆಗಳೆಲ್ಲ ಹಬ್ಬದ ಸಂದರ್ಭದಲ್ಲಿ ನಗರಕ್ಕೆ ಬಂದು ರಾಶಿ ಬೀಳುತ್ತವೆ. ನಗರವಾಸಿಗಳು ಅವುಗಳನ್ನು ಖರೀದಿಸಿ ಮನೆಗಳಲ್ಲಿ ಎಳ್ಳುಬೆಲ್ಲ ಮಾಡಿಕೊಂಡು ಸಂಭ್ರಮಿಸುತ್ತಾರೆ. ಸಂಭ್ರಮ ಎಲ್ಲರಿಗೂ ಒಂದೇ ಬಗೆ.ಯಾರಿಗೂ ಭೇದವೆಣಿಸದೆ ಲೋಕಕ್ಕೆ ಬೆಳಕನ್ನು ಸುರಿವ ಸೂರ್ಯನಿಗೂ ಕೂಡ.

## ತಮಿಳುನಾಡು

ತಮಿಳರು ನಾಲ್ಕು ದಿನಗಳ ಕಾಲ ಶ್ರದ್ಧೆಯಿಂದ ಪೊಂಗಲ್ ಹಬ್ಬವೆಂದು ಆಚರಿಸುತ್ತಾರೆ. ಮೊದಲ ದಿನ 'ಭೋಗಿ', ಮನೆ, ದನದ ಕೊಟ್ಟಿಗೆ ಸ್ವಚ್ಛಗೊಳಿಸಿ ಶೃಂಗರಿಸುತ್ತಾರೆ. ಎರಡನೆಯ ದಿನ ಸೂರ್ಯ ಪೊಂಗಲ್ ಎಂದೇ ಆಚರಿಸುತ್ತಾರೆ. ಹಬ್ಬಕ್ಕೆಂದೇ ಮೀಸಲಿಟ್ಟ ಮಡಿಕೆಯಲ್ಲಿ ಅಕ್ಕಿ, ಬೇಳೆ, ಬೆಲ್ಲದಿಂದ ಪೊಂಗಲ್ ತಯಾರಿಸಲಾಗುತ್ತದೆ. ಪೊಂಗಲ್ ಬೇಯಿಸುವಾಗ ಉಕ್ಕಿ ಬರುವ ನೊರೆ ಪೂರ್ವ ಅಥವಾ ಉತ್ತರದಿಕ್ಕಿಗೆ ಚೆಲ್ಲಿದರೆ ಶುಭ ಎಂಬ ನಂಬಿಕೆ.ಪೊಂಗಲ್ ಜತೆ ಅವರೆಕಾಯಿ,ಕಡಲೆಕಾಯಿ, ಗೆಣಸನ್ನು ಬೇಯಿಸಿ ಸೂರ್ಯನಿಗೆ ನೈವೇದ್ಯ ಮಾಡುತ್ತಾರೆ. ಮೂರನೆಯ ದಿನ ಮಾಟ್ಟು ಪೊಂಗಲ್. ಉಪವಾಸವಿದ್ದು, ವ್ಯವಸಾಯಕ್ಕೆ ಬಳಸುವ ಎತ್ತು, ದನಕರು ಮೈ ತೊಳೆದು ಬಣ್ಣ ಹಚ್ಚಿ ಪೂಜೆ ಮಾಡಿ, ಪ್ರಸಾದ ನೈವೇದ್ಯ ಮಾಡುತ್ತಾರೆ.ಅವುಗಳನ್ನು ನೋಡಿಕೊಳ್ಳುವವರಿಗೆ ಹೊಸಬಟ್ಟೆ ಕೊಡುತ್ತಾರೆ. ತೀರಿ ಹೋದ ಹಿರಿಯರಿಗೆ ಎಡೆ ಇಡುತ್ತಾರೆ. ನಾಲ್ಕನೇ ದಿನ ಕಾಣುಂಪೊಂಗಲ್ ಬಂಧುಗಳ ಮನೆಗಳಿಗೆ ಹೋಗಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಕೆಲವು ಕಡೆ ಜಲ್ಲಿಕಟ್ಟು ನಡೆಯುತ್ತದೆ.

## ಗುಜರಾತಿನ ಉತ್ತರಾಯಣ

ಗುಜರಾತ್,ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿ ಸಂಕ್ರಾಂತಿಯನ್ನು ಉತ್ತರಾಯಣ್ ಎನ್ನುತ್ತಾರೆ. ಈ ರಾಜ್ಯಗಳಲ್ಲಿ ಸಂಕ್ರಾಂತಿಯ ದಿನ ಊರಿನ ಜನ ಒಂದೆಡೆ ಸೇರಿ ಗಾಳಿಪಟಗಳನ್ನು ಹಾರಿಬಿಡುತ್ತಾರೆ.

## ಮಹಾರಾಷ್ಟ್ರದ ತಿಲಗುಳ್

ಮಹಾರಾಷ್ಟ್ರದಲ್ಲಿ ಎಳ್ಳು ಮತ್ತು ಸಕ್ಕರೆಯ ಕುಸುರಿ ಕಾಳನ್ನು ಬಂಧುಮಿತ್ರರಿಗೆ ಹಂಚುವ ರೂಢಿ ಇದೆ. ಪ್ರಮುಖವಾಗಿ ಎಳ್ಳಿನ ಉಂಡೆ (ತಿಲಗುಳ್)ಗಳನ್ನು ಹಂಚುತ್ತಾರೆ.

## ದೊಡ್ಡಹಬ್ಬ

ಆಂಧ್ರಪ್ರದೇಶದ ಪೆದ್ದ ಪಂಡಗ (ದೊಡ್ಡ ಹಬ್ಬ), ಬಿಹಾರದ ತಿಲ ಸಂಕ್ರಾಂತಿ, ಮಧ್ಯಪ್ರದೇಶದ ಸುಕಾರತ್, ಉತ್ತರ ಪ್ರದೇಶದ ಕಿಚಿಡಿ ಇವೆಲ್ಲ ಮಕರ ಸಂಕ್ರಾಂತಿಯ ನಾನಾ ರೂಪಗಳು. ಕೈಗೆ ಬಂದ ಬೆಳೆಯಿಂದ ಮಾಡುವ ನಾನಾ ಖಾದ್ಯಗಳ ಸೇವನೆ, ಪುಣ್ಯಸ್ನಾನ, ಗುರುಹಿರಿಯರಿಗೆ ವಂದನೆ, ಊರಿನ ನಡುವೆ ಕಿಚ್ಚು ಹಾಕಿ ಅಲ್ಲಿ ಎಲ್ಲರೂ ಒಂದಾಗುವ ಆಚರಣೆಗಳು ಈ ಹಬ್ಬದಲ್ಲಿ ಸಾಮಾನ್ಯ.

## ಕೇರಳದ ಮಕರ ವಿಳಕ್ಕ್

ಮಕರ ಸಂಕ್ರಾಂತಿಯಂದು ಕೇರಳದ ಶಬರಿಮಲೆ ಅಯ್ಯಪ್ಪ ದೇವಸ್ಥಾನದಲ್ಲಿ ಕಾಣುವ ಮಕರಜ್ಯೋತಿಗೆ ಹೆಚ್ಚಿನ ಪ್ರಾಧಾನ್ಯ. ಲಕ್ಷೋಪಲಕ್ಷ ಅಯ್ಯಪ್ಪ ವ್ರತಾಧಾರಿಗಳು ದೇಶದ ನಾನಾ ಕಡೆಗಳಿಂದ, ಹೆಚ್ಚಿನವರು ಕರ್ನಾಟಕದಿಂದ ಶಬರಿಮಲೆಗೆ ತೆರಳಿ, ದೇವಸ್ಥಾನದ ಪಕ್ಕದ ಗುಡ್ಡದ ಮೇಲಿನಿಂದ ಕಾಣುವ ಮಕರ ಜ್ಯೋತಿಯು ಶಬರಿಮಲೆ ಬೆಟ್ಟದಿಂದ ಮೂರು ಬಾರಿ ಗೋಚರವಾಗುತ್ತದೆ.

## ಬೆಂಗಾಲಿ ಬಿಹು

ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಇದನ್ನು "ಮಾಘ ಬಿಹು" ಅಥವಾ 'ಬೋಗಲಿ ಬಿಹು' ಎಂದು ಕರೆಯಲಾಗುತ್ತದೆ. ತೆಂಗು ಮತ್ತು ಎಳ್ಳಿನ ಖಾದ್ಯಗಳನ್ನು ಸೇವಿಸುತ್ತಾರೆ. ಪುಟ್ಟ ಗುಡಿಸಲುಗಳನ್ನು ಮಾಡಿ ಅದರಲ್ಲಿ ದಿನ ಕಳೆದು ನಂತರ ಅವುಗಳ ಸುಡುವಿಕೆ, ಎತ್ತುಗಳ ಕಾಳಗ ಇಲ್ಲಿನ ವಿಶೇಷ.

## ಪಂಜಾಬಿಗಳ ಲೋಹ್ರಿ

ಜೋಳ - ಕಬ್ಬು ಮತ್ತು ಬೇಳೆಕಾಳುಗಳು ಪ್ರಧಾನ ಬೆಳೆಯಾಗಿರುವ ಪಂಜಾಬಿನಲ್ಲಿ ಇವೆಲ್ಲ ಈಗ ಬೆಳೆದು ನಿಂತು ಕಟಾವು ಕಾಣುತ್ತವೆ. ಜೋಳ ಮತ್ತು ಬೇಳೆಕಾಳಿನಿಂದ ಮಾಡಿದ ನಾನಾ ಖಾದ್ಯಗಳು ಹಬ್ಬದಲ್ಲಿ ವಿಶೇಷ, ಸಗಣಿಯಿಂದ ಮಾಡಿದ ಲೋಹ್ರಿ ದೇವತೆಯ ಮೂರ್ತಿಗಳನ್ನು ಊರ ನಡುವೆ ಸ್ಥಾಪಿಸುವ ಕುಂಡದಲ್ಲಿ ಸುಡಲಾಗುತ್ತದೆ. ಜನಪದ ಹಾಡು ಕುಣಿತಗಳಿಗೆ ಈ ಹಬ್ಬದಲ್ಲಿ ಬಲು ಬೇಡಿಕೆ.

## ಆಧ್ಯಾತ್ಮಿಕ ಸಂದೇಶದ ಸಂಕ್ರಾಂತಿ

ಮಕರ ಸಂಕ್ರಮಣ ಎಂದರೆ ಸೂರ್ಯನ ಪಥದಲ್ಲಾಗುವ ಬದಲಾವಣೆ ಅರ್ಥಾತ್ ಟ್ರಾನ್ಸ್‌ಫರ್ಮೇಷನ್, ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಲೌಕಿಕ ಸ್ತರದಿಂದ ಅಲೌಕಿಕತ್ವದತ್ತ ತೆರಳುವುದು. ಕತ್ತಲಿಂದ ಬೆಳಕಿನತ್ತ ಸಾಗುವುದು. ಅಜ್ಞಾನದ ಹಾದಿಯಲ್ಲಿ ಸವೆಸುವ ಪಯಣ. ಆಧ್ಯಾತ್ಮಿಕವಾಗಿ ಸಮೃದ್ಧಿಯನ್ನು ಹೊಂದುವ ಶುಭ ಸಮಯ.

ಮಕರಸಂಕ್ರಾಂತಿಗೂ ಆಧ್ಯಾತ್ಮಿಕತೆಗೂ ಸಂಬಂಧವಿದೆ. ಇದು ಸೂರ್ಯನ ಉತ್ತರಾಭಿಮುಖದ ಚಲನೆಯ ಆರಂಭವನ್ನು ಸಂಕೇತಿಸುತ್ತದೆ. ಭೂಮಿಯ ಅಕ್ಷರೇಖೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಭೂಮಿಯ ಅಕ್ಷರೇಖೆಯು ಇಪ್ಪತ್ತು ಎರಡೂವರೆ ಡಿಗ್ರಿ ಬಾಗಿರುವ ಕಾರಣ , ಸೂರ್ಯನ ಉತ್ತರಾಭಿಮುಖ ಚಲನೆಯ ಆರಂಭವನ್ನು ಸಂಕೇತಿಸುತ್ತದೆ. ಈ ಅವಧಿಯಲ್ಲಿ, ಹಗಲಿನ ಬೆಳಕಿನ ಅವಧಿ ದೀರ್ಘವಾಗುತ್ತದೆ. ಮುಂದಿನ ಆರು ತಿಂಗಳು ಹಗಲಿನ ಬೆಳಕಿನ ಪ್ರಮಾಣದ ಅವಧಿಯು ಹೆಚ್ಚಾಗುತ್ತದೆ.

ತದನಂತರ ಹಗಲಿನ ಬೆಳಕಿನ ಪ್ರಮಾಣದ ಅವಧಿಯು ಕಡಿಮೆ ಆಗುತ್ತದೆ. ಆರು ತಿಂಗಳು ಹಗಲಿನ ಬೆಳಕಿನ ಪ್ರಮಾಣ ಹೆಚ್ಚುವ ಅವಧಿಯನ್ನು ಉತ್ತರಾಯಣ ಕಾಲವೆಂದು ತದನಂತರ ದಕ್ಷಿಣಾಯಣ ಕಾಲವೆಂದು ಕರೆಯಲಾಗುವುದು. ಉತ್ತರಾಯಣ ಎಂದರೆ ಸೂರ್ಯನ ಉತ್ತರಾಭಿಮುಖದ ಚಲನೆ ಹಾಗೂ ದಕ್ಷಿಣಾಯಣ ಎಂದರೆ ಸೂರ್ಯನ ದಕ್ಷಿಣಾಭಿಮುಖದ ಚಲನೆ.

# ಬನಶಂಕರಿ ಕ್ಷೇತ್ರದಲ್ಲಿ ಬನದ ಹುಣ್ಣಿಮೆ

- ಶ್ರೀಮತಿ. ಪಾರಿಜಾತ ಬಿ.ಎಸ್.
90083 35689



ಸೌರಮಂಡಲದಲ್ಲಿ ಭೂಮಿಯೊಂದಿಗೆ ಇತರ ಗ್ರಹಗಳು ಉಪಗ್ರಹಗಳ ಚಲನೆಯಿಂದಾಗುವ ಕೌತುಕದ ಅನೇಕ ಘಟನೆಗಳಿಗೆ ಭೂಮಿಯ ಮೇಲಿನ ಜೀವಜಗತ್ತು ಸಾಕ್ಷಿಯಾಗಿದೆ. ಹಗಲು ರಾತ್ರಿ ಋತು ಬದಲಾವಣೆ, ಹುಣ್ಣಿಮೆ, ಅಮಾವಾಸ್ಯೆಯಂತಹ ಅನೇಕ ಪ್ರಕೃತಿಯಲ್ಲಿನ ವಿವಿಧ ಘಟನೆಗಳಿಗೆ ವೈಜ್ಞಾನಿಕ ಹಾಗೂ ಧಾರ್ಮಿಕ ಕಾರಣಗಳನ್ನು ಕಂಡುಕೊಂಡರು ಅದಕ್ಕೆ ವಿಶೇಷವಾದ ಪ್ರಾಮುಖ್ಯತೆಯನ್ನು ನೀಡುವುದು ರೂಢಿಯಲ್ಲಿದೆ. ಇಂತಹ ರೂಢಿಗಳಲ್ಲಿ ಹುಣ್ಣಿಮೆಯ ದಿನದ ಆಚರಣೆಯಲ್ಲಿ ವಿಶೇಷ ಕಾರ್ಯಗಳನ್ನು ಧಾರ್ಮಿಕ ನಂಬಿಕೆಯ ನೆಲೆಗಟ್ಟಿನಲ್ಲಿ ನೆರವೇರಿಸಲಾಗುತ್ತದೆ.

ಕರಗದ ಹುಣ್ಣಿಮೆ, ಸೀಗೀಹುಣ್ಣಿಮೆ, ಮಣ್ಣೆತ್ತಿನ ಹುಣ್ಣಿಮೆ, ಕಾಮನಹುಣ್ಣಿಮೆ, ಭರತ ಹುಣ್ಣಿಮೆ, ಭೂಮಿ ಹುಣ್ಣಿಮೆ,ಚಿತ್ರ ಹುಣ್ಣಿಮೆ, ಬುದ್ಧ ಹುಣ್ಣಿಮೆ ವ್ಯಾಸಹುಣ್ಣಿಮೆ, ಅನಂತಹುಣ್ಣಿಮೆ, ದತ್ತಹುಣ್ಣಿಮೆ,ಬನದ ಹುಣ್ಣಿಮೆ ಅಥವಾ ಬನಶಂಕರಿ ಹುಣ್ಣಿಮೆ ಹೀಗೆ ವಿಶೇಷ ಆಚರಣೆಗಳುಂಟು. ಬನದ ಹುಣ್ಣಿಮೆಯ ವಿಶೇಷ ಆಚರಣೆಯಲ್ಲಿ ಭಾರತಾದ್ಯಂತ ತಾಯಿ ಬನಶಂಕರಿಯ ಸಾನಿಧ್ಯವಿರುವ ವಿವಿಧ ಕ್ಷೇತ್ರಗಳಲ್ಲಿ ಧಾರ್ಮಿಕ ಆಚರಣೆ ವಿಜೃಂಭಣೆಯಿಂದ ಜರುಗುತ್ತದೆ. ಬೆಂಗಳೂರು, ಹುಬ್ಬಳ್ಳಿ, ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ ಹುಂಚ, ಕೊಣಂದೂರು, ಮೈಸೂರು,ತಿಪಟೂರು ಹೀಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ತಾಯಿ ಬನಶಂಕರಿಯ ಸಾನಿಧ್ಯವಿರುವ ಪವಿತ್ರ ಕ್ಷೇತ್ರಗಳಲ್ಲಿ ಬನದ ಹುಣ್ಣಿಮೆ ಆಚರಣೆ ವಿಶೇಷವಾಗಿ ಜರುಗುತ್ತದೆ. ಉತ್ತರ ಕರ್ನಾಟಕದ ಪ್ರಸಿದ್ಧ ಕ್ಷೇತ್ರವಾದ ಬಾದಾಮಿ ಬನಶಂಕರಿಯ ದೇಗುಲದಲ್ಲಿ ಈ ಬನದ ಹುಣ್ಣಿಮೆ ಜಾತ್ರಾ ಮಹೋತ್ಸವವು ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆ.ಆದರೆ ಈಗ ಸಾಂಕ್ರಮಿಕ ರೋಗದ ಭೀತಿಯ ಹಿನ್ನೆಲೆಯಲ್ಲಿ ಹೆಚ್ಚು ಜನರು ಒಂದೆಡೆ ಸೇರುವಂತಿಲ್ಲ.ಜನರ ಆರೋಗ್ಯದ ದೃಷ್ಟಿಯಿಂದ ವಿಶೇಷ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ಧಾರ್ಮಿಕ ಕಾರ್ಯವನ್ನು ನೆರವೇರಿಸಬೇಕಾಗಿದೆ. ಸರ್ಕಾರದ ಆರೋಗ್ಯ ಇಲಾಖೆಯ ನೀತಿನಿಯಮಗಳ ಅನುಸಾರ ಸರಳವಾಗಿ ಬನಶಂಕರಿ ಉತ್ಸವವು ಎಂದಿನಂತೆ ಜರುಗಿಸಲು ಸಕಲ ಸಿದ್ಧತೆ ನಡೆದಿದೆ ಎಂದು ತಿಳಿದು ಬಂದಿದೆ.

### ಬಾದಾಮಿ ಬನಶಂಕರಿ ಕ್ಷೇತ್ರ

ಬಾದಾಮಿಯ ಬನಶಂಕರಿ ಕ್ಷೇತ್ರವು ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿದೆ. ಈ ಕ್ಷೇತ್ರವು ಬೆಂಗಳೂರಿಂದ ಸುಮಾರು ೪೬೫ ಕಿ.ಮೀ. ದೂರದಲ್ಲಿದೆ.ಹುಬ್ಬಳ್ಳಿಯಿಂದ ೧೨೫ ಕಿ.ಮೀ.ದೂರದಲ್ಲಿದೆ. (ಚೋಳಚಲಗುಡ್ಡ) ಬಾಳೆ,ತೆಂಗು, ಅಡಿಕೆ ಮರಗಳ ಸುಂದರ ವನಸಿರಿಯ ನಡುವೆ ಇದ್ದು, "ವನಶಂಕರಿ" ಎಂಬ ಹೆಸರನ್ನು ಪಡೆದಿದೆ.

### ಐತಿಹಾಸಿಕ ಹಿನ್ನೆಲೆ

ಹಿಂದೆ ವೈಷ್ಣವರು, ಶೈವರು, ಜೈನರು ಹಾಗೂ ಶಾಕ್ತರು ಈ ಪ್ರದೇಶದ ಪ್ರಭಾವಕ್ಕೆ ಒಳಗಾಗಿದ್ದು, ಶಕ್ತಿ ದೇವತೆಯ ಸ್ಥಾನವೆಂದು ನಂಬಲಾಗಿತ್ತು. ನಂತರದ ದಿನಗಳಲ್ಲಿ ಅಂದರೆ ೭ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಈ ದೇವಿಯು ಕುಲದೇವಿಯಾಗಿ ಕ್ಷೇತ್ರವು ಅಭಿವೃದ್ಧಿಯನ್ನು ಕಂಡಿತು.ಈ ವಂಶದ ಅರಸ ಜಗದೇಕ ಮಲ್ಲ ಈ ಕ್ಷೇತ್ರದ ಪ್ರಗತಿಗೆ ಅಪಾರ ಕೊಡುಗೆ ನೀಡಿದ್ದಾನೆಂದು ತಿಳಿದು ಬರುತ್ತದೆ. ನಂತರ ೧೮ ನೇ ಶತಮಾನದಲ್ಲಿ ಮರಾಠರ ಪರಶುರಾಮ ಅಗಲೆ ಎಂಬಾತನ ಕಾಲದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಕಂಡಿದೆ.

### ಪೌರಾಣಿಕ ಹಿನ್ನೆಲೆ

ತಾಯಿ ಬನಶಂಕರಿಯು ಪಾರ್ವತಿಯ ೭ನೇ ಅವತಾರವೆಂದು ಬಣ್ಣಿಸುತ್ತಾರೆ. ಸ್ಕಂದಪುರಾಣ ಹಾಗೂ ಪದ್ಮಪುರಾಣ, ದೇವಿ ಮಹಾತ್ಮೆಯಲ್ಲಿನ ಮಾಹಿತಿಯ ಪ್ರಕಾರ ಒಮ್ಮೆ ದುರ್ಗಮಾಸುರನೆಂಬ ಅಸುರನು ತನ್ನ ದುಷ್ಕೃತ್ಯದ ಮೂಲಕ ಜನರಿಗೆ ಹಿಂಸಿಸುತ್ತಿದ್ದು, ಆತನ ಕಾಟವನ್ನು ತಡೆಯಲಾರದ ಜನರು ದೇವಾನು ದೇವತೆಗಳಲ್ಲಿ ಮೊರೆಯಿಡಲು ಈ ಅಸುರನ ಉಪಟಳದಿಂದ ಜನರನ್ನು ರಕ್ಷಿಸುವ ಕಾರ್ಯವನ್ನು ದೇವತೆಗಳು ತಾಯಿ ಪಾರ್ವತಿಗೆ ಒಪ್ಪಿಸಲು ದೇವಿಯು ಯಜ್ಞ ಕುಂಡದಲ್ಲಿ ಪ್ರತ್ಯಕ್ಷಳಾಗಿ ದುರ್ಗಾಸುರನೊಂದಿಗೆ ಹೋರಾಡಿ ಆತನನ್ನು ಸಂಹರಿಸಿ, ಅಲ್ಲೇ ನೆಲೆಸಿದಳಂತೆ ಪರಶಿವನ ಪತ್ನಿ ಜಗನ್ಮಾತೆ ಪಾರ್ವತಿಯ ಅವತಾರವೆಂದು, ಚೌಡಮ್ಮ, ವನ ದುರ್ಗ, ದುರ್ಗಾಂಬೆ, ಬಾಳವ್ವ, ಬನದವ್ವ ಎಂಬ ಅನೇಕ ನಾಮಾವಳಿಗಳಿಂದ ಜನರು ಹಾಡಿ ಹೊಗಳುತ್ತಾರೆ. (ತಿಲ) ತಲ ಕಾರಣ್ಯದಲ್ಲಿ ನೆಲೆಸಿದ ತಾಯಿಯನ್ನು ಬನಶಂಕರಿ, ವನ ಶಂಕರಿ, ಎಂದು,ತಾಯಿ ನೆಲೆಸಿರುವ ಕ್ಷೇತ್ರದ ಸುತ್ತಲೂ ಅನೇಕ ಬಾಳೆ, ತೆಂಗು, ಅಡಿಕೆ ವೃಕ್ಷಗಳಿಂದ ಕೂಡಿರುವುದರಿಂದ ಶಾಕಾಂಬರಿ ಎಂಬ ಹೆಸರಿನಿಂದಲೂ ಕರೆಯುವುದುಂಟು.

### ಬನಶಂಕರಿ ದೇವಾಲಯ :

ಬಾದಾಮಿಗೆ ೫ ಕಿ.ಮೀ. ದೂರದಲ್ಲಿರುವ ತಾಯಿ ಬನಶಂಕರಿ ದೇವಾಲಯವನ್ನು ಕಲ್ಯಾಣದ ಚಾಲುಕ್ಯರು ಕ್ರಿ.ಶ. ೭ನೇ ಶತಮಾನದಲ್ಲಿ ನಿರ್ಮಿಸಿದರೆಂದು ಹೇಳಲಾಗುತ್ತದೆ. ನಂತರದ ದಿನಗಳಲ್ಲಿ ೧೮ ನೇ ಶತಮಾನದಲ್ಲಿ ಮರಾಠರ ಆಳ್ವಿಕೆಯ ಕಾಲದಲ್ಲಿ ಪರಶುರಾಮ ಅಗಲೇ ಎಂಬುವರಿಂದ ದುರಸ್ತಿ ಕಾರ್ಯಕ್ಕೆ ಒಳಪಟ್ಟಿತ್ತೆಂದು ತಿಳಿದು ಬರುತ್ತದೆ. ಹೀಗೆ ಕಾಲಾಂತರದಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಕಂಡಿದೆ. ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ಸುತ್ತಲೂ ಎತ್ತರವಾದ ಗೋಡೆಯನ್ನು ಒಳಗೊಂಡಿದ್ದು, ಸುಂದರ ವಿಮಾನಗೋಪುರ ಹೊಂದಿದೆ. ಈ ದೇವಾಲಯದೊಳಗೆ ಮುಖಮಂಟಪ,ಅರ್ಧಮಂಟಪ,ಹಾಗೂ ಗರ್ಭಗೃಹವನ್ನು ಕಾಣಬಹುದಾಗಿದೆ. ಗರ್ಭಗುಡಿಯಲ್ಲಿ ಹುಣ್ಣಿಮೆ ಚಂದ್ರನಂತೆ ಸುಂದರ ವದನೆಯಾದ ತಾಯಿ ಬನಶಂಕರಿಯ ಕಪ್ಪು ಶಿಲೆಯ ವಿಗ್ರಹವು ಪ್ರತಿಷ್ಠಾಪಿಸಲ್ಪಟ್ಟಿದೆ. ವಿಗ್ರಹವು ಅಷ್ಟ ಭುಜಗಳನ್ನು ಹೊಂದಿದ್ದು,ಬಲಭಾಗದಲ್ಲಿ ಕತ್ತಿ, ಗಂಟೆ, ತ್ರಿಶೂಲ,ಸರಗುಣಿಕೆಯನ್ನು,ಎಡಭಾಗದಲ್ಲಿ ತಲೆ ಬುರುಡೆ, ಗುರಾಣಿ, ಡಮರುಗವನ್ನು ಹಿಡಿದಿರುವ ತಾಯಿಯು ಆಭರಣ ಭೂಷಿತಗಳಾಗಿ ಪಾದದಡಿಯಲ್ಲಿ ರಾಕ್ಷಸವನ್ನು ಮೆಟ್ಟಿ ಸಿಂಹವಾಹಿನಿಯಾಗಿ ವಿರಾಜಿಸಿದ್ದಾಳೆ.ದೇವಾಲಯದ ಉತ್ತರ ಭಾಗದಲ್ಲಿನ ಕಂಬವು ರಾಜ ಭೀಮದೇವನ ಶೌರ್ಯವನ್ನು ಸಾರುವ ಸಂದೇಶವನ್ನು ಒಳಗೊಂಡಿದೆ. ತಿಮ್ಮಯ್ಯನೆಂಬುವರು ಸುಂದರ ದೀಪಸ್ತಂಭವವನ್ನು ಇಲ್ಲಿ ನಿರ್ಮಿಸಿದ್ದಾರೆ.ದೇವಾಲಯದ ಮುಖ ದ್ವಾರದಲ್ಲಿ ದೀಪದ ಸ್ತಂಭಗಳನ್ನು ಕಾಣಬಹುದಾಗಿದೆ. ವಿಶೇಷ ದಿನಗಳಲ್ಲಿ ಇಲ್ಲಿ ದೀಪೋತ್ಸವವು ನೆರವೇರುತ್ತದೆ ಹಾಗೂ ಇಲ್ಲಿನ ಹರಿಶ್ಚಂದ್ರ ತೀರ್ಥದಲ್ಲಿ ತೆಪ್ಪೋತ್ಸವವು ನಡೆಯುತ್ತದೆ. ಇದಲ್ಲದೆ ಇಲ್ಲಿ ಹರಿದ್ರತೀರ್ಥ ಹಾಗೂ ತೈಲತೀರ್ಥವೆಂಬ ಕೊಳಗಳಿವೆ. ಬನದ ಹುಣ್ಣಿಮೆಯಲ್ಲಿ ಜಾತ್ರೆ ಜರುಗುತ್ತದೆ.ದೇವಿಗೆ ವಿಶೇಷ ಅರ್ಚನ ಪೂಜೆ,ಹವನಹೋಮ, ಉಡಿತುಂಬುವುದು, ಅಭಿಷೇಕ ಇತ್ಯಾದಿ ನಡೆಯುತ್ತದೆ.ಇಲ್ಲಿನ ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗುತ್ತದೆ. ಕರ್ನಾಟಕದ ಅನೇಕ ಪ್ರದೇಶಗಳಿಂದ ಜನರು ಇಲ್ಲಿಗೆ ಆಗಮಿಸುತ್ತಾರೆ. ಪಕ್ಕದ ರಾಜ್ಯವಾದ ಮಹಾರಾಷ್ಟ್ರದ ಅನೇಕರು ಈ ದೇವಿಯನ್ನು ತಮ್ಮ ಆರಾಧ್ಯ ದೈವವಾಗಿ ಪೂಜಿಸುತ್ತಾರೆ. ರಥೋತ್ಸವಕ್ಕೆ ಸಾಕ್ಷಿಯಾಗುತ್ತಾರೆ. ಆದರೆ ಈ ವರ್ಷ ಅತಿಯಾದ ಜನಜಂಗುಳಿಯಿಲ್ಲದೆ, ಸರಳವಾಗಿ ಆಚರಿಸಬೇಕಾದ ಸಂದರ್ಭವೊದಗಿರುವುದರಿಂದ ಮುನ್ನೆಚ್ಚರಿಕೆಯ ಕ್ರಮದೊಂದಿಗೆ ಧಾರ್ಮಿಕ ಕಾರ್ಯ ನಡೆಯಿದೆ.

### ಇಲ್ಲಿನ ಹತ್ತಿರದ ಇತರ ಸ್ಥಳಗಳು

**ಬಾದಾಮಿ :** ಗುಹಾಂತರ ದೇವಾಲಯಗಳು, ಇಲ್ಲಿ ಹಿಂದೂ, ಬೌದ್ಧ,ಜೈನ ಧರ್ಮಗಳಿಗೆ ಸಂಬಂಧಿಸಿದ ಗುಹಾಂತರ ದೇವಾಲಯಗಳಿವೆ. ಶಿವಗುಹಾಂತರ ದೇವಾಲಯ,ವಿಷ್ಣು ಗುಹಾಂತರ ದೇವಾಲಯ, ನಾಗನಾಥ,ಯಲ್ಲಮ್ಮ ವಿರೂಪಾಕ್ಷ ದೇವಾಲಯ, ಭೂತನಾಥ ದೇವಾಲಯ, ಅಗಸ್ತ್ಯ ಸರೋವರ ಮಲ್ಲಿಕಾರ್ಜುನ ದೇವಾಲಯ, ಪ್ರಮುಖವಾದವು.

**ಐಹೊಳೆ:** ಬಾದಾಮಿಯಿಂದ ಸುಮಾರು ೪೭ ಕಿ.ಮೀ ದೂರದಲ್ಲಿದೆ. ಇಲ್ಲಿ ತ್ರಯ್ಯಂಬಕೇಶ್ವರ, ರಾಮಲಿಂಗ ಚಕ್ರಗುಡಿ, ಕುಂತಿಗುಡಿ, ಸೂರ್ಯನಾರಾಯಣ,ಬಸವಣ್ಣ ಹುಚ್ಚಮಲ್ಲಿ ಗುಡಿ, ದುರ್ಗಾಗುಡಿ ಇತ್ಯಾದಿ ದೇವಾಲಯಗಳಿವೆ.

**ಮಹಾಕೂಟ:** ಬಾದಾಮಿಗೆ ೧೦ ಕಿ.ಮೀ. ದೂರದಲ್ಲಿದೆ. ಇಲ್ಲಿ ಮಲ್ಲಿಕಾರ್ಜುನ, ಮಹಾಕೂಟೇಶ್ವರ, ಸಂಗಮೇಶ್ವರ, ಮಹಾಲಿಂಗೇಶ್ವರ, ಭೀಮೇಶ್ವರ, ದೇವಾಲಯಗಳಿವೆ.

**ಪಟ್ಟದ ಕಲ್ಲು :** ಬಾದಾಮಿಯಿಂದ ೨೦ ಕಿ.ಮೀ. ದೂರದಲ್ಲಿದೆ.ಇಲ್ಲಿ ಕಾಶಿವಿಶ್ವನಾಥ, ಚಂದ್ರಶೇಖರ, ಗಳಗನಾಥ, ಜಂಬುಲಿಂಗ, ಕಾಡಸಿದ್ದೇಶ್ವರ ದೇವಾಲಯಗಳಿವೆ.

ಪುಲಕೇಶಿ ಈತನ ಕಾಲದಲ್ಲಿ ನಿರ್ಮಾಣಗೊಂಡ ಬಾದಾಮಿಯ ಕೋಟೆಯು ಐತಿಹಾಸಿಕ ಮಾಹಿತಿಯನ್ನು ಸಂದೇಶವನ್ನು ಸಾರುವ ಅನೇಕ ಕುರುಹುಗಳಿಗೆ ಸಾಕ್ಷಿಯಾಗಿದೆ.

# ತಿರುಪ್ಪಾವೈ ಹಾಡಿದ ಆಂಡಾಳ್ ಶ್ರೀ ಕೃಷ್ಣಸೇವಾವ್ರತ "ಮಾಸಾನಾಂ ಮಾರ್ಗಶೀರ್ಷೋಽಸ್ಮಿ"

-ಡಾ॥ ಎನ್.ಕೆ. ರಾಮಶೇಷನ್
8277146110



ಉತ್ಪನ್ನೇ ದ್ರಾವಿಡೇ ಸಾಹಂ ವೃದ್ಧಿಂ ಕರ್ನಾಟಕೇಗತಾ,
ಕ್ವಚಿಕ್‌ಕ್ವಚಿತ್ ಮಹಾರಾಷ್ಟ್ರೇ ಮಾರ್ಜರೀಂ ಜೀರ್ಣತಾಂಗತಾಃ

ಎಂಬುದಾಗಿ ಶ್ರೀಮದ್ಭಾಗವತದಲ್ಲಿ - "ಭಾಗವತ ಮಾಹಾತ್ಮ್ಯ"ದಲ್ಲಿ ಭಕ್ತಿ ದೇವತೆಯು ಶ್ರೀನಾರದ ಮಹರ್ಷಿಗಳಿಗೆ ತಿಳಿಸುತ್ತಾಳೆ. ನಾನು ದ್ರಾವಿಡ ದೇಶದಲ್ಲಿ ಹುಟ್ಟಿದೆ, (ತಮಿಳುನಾಡಿನ ಪರಿಸರ),ಕರ್ನಾಟಕದಲ್ಲಿ ವೃದ್ಧಿಸಿದೆ, ಸ್ವಲ್ಪ ಸ್ವಲ್ಪ ಮಹಾರಾಷ್ಟ್ರದಲ್ಲಿ ಗುಜರಾತ್‌ನಲ್ಲಿ ಕರಗಿ ಹೋದೆ ನಾರದರೇ"ಎಂದು ಹೇಳಿಕೊಂಡಿದ್ದಾಳೆ. ಭಕ್ತಿಯು ಒಂದು ಯೋಗವೇ ಆಗಿ ಹೇಗೆ ಗೀತಾಚಾರ್ಯನಿಂದ ಪ್ರಸಾರಗೊಂಡಿತೊ ಹಾಗೆಯೇ ಪ್ರತಿಯೊಬ್ಬ ನಲ್ಮನಸ್ಸಿನ - ಸರಸ - ಸಾಧು - ಯೋಗಿ - ಭಕ್ತ ಜನ ವೃಂದದಲ್ಲಿ ಭಕ್ತಿಯು ಸಮಾಜ ಪೋಷಕ, ಉತ್ತಮ ಸಾತ್ವಿಕಬದುಕಿಗೆ ಪೂರಕದ್ರವ್ಯ ಆಗಿ ಬೆಳೆಯಿತು. ಇಂದಿಗೂ ಪ್ರಪಂಚದಾದ್ಯಂತ ಭಕ್ತಿ ಒಂದು ರೀತಿ ಮನ ಮನಗಳನ್ನು ಬೆಸೆಯುವ ವಿಶೇಷ ದ್ರವ್ಯ ಆಗಿದೆ ಎಂಬುದು ಮನನೀಯ.

ತಮಿಳುನಾಡಿನ ಹನ್ನೆರಡು ಜನ ಶ್ರೀವೈಷ್ಣವ ಆಳ್ವಾರ್ ಭಕ್ತರಲ್ಲಿ ತನ್ನದೇ ಆದ ಪರಮ ಸಾತ್ವಿಕ ತೇಜದಿಂದ ಇಂದಿಗೂ ಬೆಳಗುತ್ತಿರುವವಳು, ಆಂಡಾಳ್ (ಭಗವಂತನನ್ನೇ ಆಳಿದವಳು), ಸುಂದರ ನೀಳಕೇಶ ರಾಶಿಯ ಗೋದೆ, ಹಾಗೂ ತಾನು ಮಗುವಾಗಿದ್ದಾಗಿನಿಂದಲೂ, ಶ್ರೀಕೃಷ್ಣ ಭಕ್ತಿ ಹಾಗೂ ಅನಂತರ, ಶ್ರೀ ರಂಗನಾಥನನ್ನೇ ಮದುವೆಯಾಗುವೆನೆಂದು ವ್ರತ ಇಡಿದು, ಅನಂತರ ಆತನ ದಿವ್ಯ "ತಿರುವಡಿ" (ಶ್ರೀಪಾದ)ಗಳಲ್ಲಿ ಲೀನಳಾದ ಪರಮಸಾತ್ವಿಕ ತೇಜಳು ಶ್ರೀ ವೈಷ್ಣವ ಅನುಯಾಯಿಗಳಲ್ಲಿ ಸಂಪ್ರದಾಯದಲ್ಲಿ "ವ್ರತ' ಎಂಬುವ ವಿಶೇಷ ಆಚರಣೆಯಿಲ್ಲ, ಪ್ರಪತ್ತಿಯೇ ಒಂದು ನಿರಂತರ ವ್ರತದ ಪಥ. ಆದರೆ ಆಂಡಾಳ್, ಆಚರಿಸಿಟ್ಟು "ತಿರುಪ್ಪಾವೈ" ತಮಿಳಲ್ಲಿ "ತಿರು" ಎಂದರೆ ಲಕ್ಷ್ಮೀ "ಶ್ರೀ"ಪಾವೈ ಎಂದರೆ ವ್ರತ, ನೋಂಪಿ ಎಂದೂ, ಕರೆಯಬಹುದು. ದೇವರ

ತಾನೊಲಿದ ಶ್ರೀ ಕೃಷ್ಣ ಸೇವಾವ್ರತ, ತಿರುಪ್ಪಾವೈ ಈ ಸಾಲುಗಳ ಮೂಲಕ, ನಾವು ಇತರ ಆಳ್ವಾರರ ದಿವ್ಯ ಪ್ರಬಂಧ ಗಳನ್ನು ಕುರಿತು ವಿಶದೀಕರಿಸುತ್ತಿಲ್ಲ. ತಿರುಪ್ಪಾವೈ ಪದ್ಯಗಳ ಚೆಲುವು, ದೈವ ಭಕ್ತಿ ಹಾಗೂ ಆಂಡಾಳ್ ಸಂದೇಶ ಕುರಿತು ಕೆಲವು ಮಾತು ತಿಳಿಸುವುದು ನಮ್ಮ ಧ್ಯೇಯ, ಏಕೆಂದರೆ ತಿರುಪ್ಪಾವೈ ಕಾವ್ಯದ ಪದ್ಯಗಳ ಮೂಲಕ ಗೋದಾದೇವಿ. ಮಾನವ ಕೋಟಿ ಹೇಗೆ ಉತ್ತಮ, ಋಜು ಬದುಕನ್ನು ಬದುಕ ಬಹುದೆಂದು ನಿರ್ದೇಶಿಸಿದ್ದಾಳೆ. ತಿರುಪ್ಪಾವೈ ಕುರಿತಂತೆ ಬಹಳ ವ್ಯಾಖ್ಯಾನಗಳು ಬಂದಿವೆ. ರಾಮಾನುಜರೇ ಒಮ್ಮೆ ಹೇಳಿದರು."ಮಲ್ಲಿಗೆ ಹೂವಿನ ಕಾವ್ಯಕ್ಕೆ ಸುಗಂಧ ರಾಜ ಹೂವಿನ ರಾಶಿ ವ್ಯಾಖ್ಯಾನ" ಎಂದು ಇದರರ್ಥ, ಮಲ್ಲಿಗೆ ಹಗು ರಾದ, ಚೆಲುವುಳ್ಳ ಹೂ, ಸುಗಂಧರಾಶಿ ಭಾರವೆನಿಸುವುದು.



ಆಂಡಾಳ್, ಪೆರಿಯಾಳ್ವಾರರೆಂಬುವ ಭಕ್ತಿಗೆ, ಅವರ ನಂದನೋದ್ಯಾನಾದ ತುಲಸೀಗಿಡಗಳ ಆಸರೆಯಲ್ಲಿ ದೊರೆತವಳು. ಅಯೋನಿಜೆ, ಭೂದೇವಿ ಅಂಶ ಹಾಗೂ ಶ್ರೀ ವೈಷ್ಣವ ಸಂಪ್ರದಾಯದ ಪ್ರಕಾರ "ನೀಳಾದೇವಿ" ಎಂದೂ ಪ್ರಸಿದ್ಧ, ಶ್ರೀವೈಷ್ಣವರು ಮಾಡಿದ ಪದಾರ್ಥ ಮಧುಪರ್ಣ ಭಗವನ್ನಿವೇದನ ಮಾಡುವಾಗ, "ಶ್ರೀಭೂನೀಳಾಸಮೇತ ಶ್ರೀ ಹರಿ, ಶ್ರೀಮನ್ನಾರಾಯಣ" ನಿನಗೆ ಇದೋ ಅರ್ಪಿತವಾಗಲಿ ಎಂದೇ ಪ್ರಾರ್ಥಿಸುತ್ತಾರೆ,ಶ್ರೀದೇವಿ,ಭೂದೇವಿ,ನೀಳಾದೇವಿಯೇ ಆಂಡಾಳ್ ಸುಂದರವಾದ ಉದ್ದಕೇಶರಾಶಿ ಉಳ್ಳವಳಾಗಿದ್ದು ದರಿಂದ "ಪೂಂಕುಳಲ್‌ಕೋದೈ" ದಟ್ಟಕೂದಲುಳ್ಳಗೋದೆ ಎಂದು ಹೆಸರಾದಳು. ಪ್ರತಿನಿತ್ಯ ತಮ್ಮ ಹೂ ತುಳಸೀ ಉದ್ಯಾನ ವನದಲ್ಲಿ ಹೂ-ಸಂಗ್ರಹಿಸಿ, ಹೂಮಾಲೆ ಕಟ್ಟಿ, ವಟಪತ್ರಶಾಯಿ ದೇವರಿಗೆ ಅರ್ಪಿಸುವುದು ಪೆರಿಯಾಳ್ವಾರರ ರೂಢಿ, ಒಂದು ದಿನ, ತುಲಸೀ ತೋಟದಲ್ಲೆ ದೊರೆತ ಹೆಣ್ಣುಮಗು, ಆಳ್ವಾರರ ಸಾಕುಮಗಳೇ ಆಗಿ, ಜನಕಮಹಾರಾಜನಿಗೆ (ರಾಮಾಯಣ ದಲ್ಲಿ) ಸೀತಾದೇವಿಯು ಸಿಕ್ಕಿದಂತೆ ಈ ಹೆಣ್ಣುಮಗು ಲಭಿಸಿ ದಳು.ಆಕೆಯ ಅವತಾರ, ಕಲಿಯುಗ ಸನ್ನಿವೇಶ 98 (ಕ್ರಿ.ಪೂ. 3005) ನಳ ವರ್ಷ (ಕರ್ಕಾಟಕ) ಮಾಸ ಶುಕ್ಲ ಪಕ್ಷ ಚತುರ್ಥಿ ಮಂಗಳವಾರ ಪೂರ್ವಫಲ್ಗುನೀ ನಕ್ಷತ್ರ ಈ ದಿನವನ್ನು (ಕ್ರಿ.ಶ.7-8 ರ ನಡುವಣ ಹರಹಿನಲ್ಲಿ) "ತಿರುಪಾಡಿ ಪ್ಪುರಂ" ಎಂದೇ ಕೊಂಡಾವುದುಂಟು. ಪೆರಿಯಆಳ್ವಾರರು ಬಹು ಪ್ರೀತಿಯಿಂದ "ಶ್ರೀದೇವಿ ಭೂದೇವಿಯ ಅಂಶಜಳೆಂದೇ" ಸಾಕಲಾರಂಭಿಸಿದರು. ತಂದೆಯ ಸಂಗ ಡವೇ ಇರುತ್ತಿದ್ದ ಮಗು ಅವರು ಸದಾ ಉಚ್ಚರಿಸುತ್ತಿದ್ದ ಗೋವಿಂದ, ಗೋವಿಂದ, ಗೋವಿಂದ ಎನ್ನುವುದನ್ನು ಅನುಕರಿ ಸುತ್ತಿತ್ತು. ಹಾಗೂ ತನ್ನದೇ ಆದ ತೊದಲು ನುಡಿಯಿಂದ "ಗೋದಾ" ಎನ್ನುತ್ತಿತ್ತು,ಈ ಕಾರಣದಿಂದ "ಗೋದಾ" ಎಂದು ಆಳ್ವಾರರು ಭೂದೇವಿ ನೀಡಿದ ಕೊಡುಗೆಯೇ "ಗೋದಾ" ಎನ್ನು ವುದೂ ಪ್ರಸಿದ್ಧ.

ಮಗು ಬೆಳೆಯುತ್ತಿದ್ದಂತೆ ಪೆರಿಯಆಳ್ವಾರರು, ಪ್ರಿಯ ನುಡಿ ಗಳಲ್ಲಿ ಒಳ್ಳೊಳ್ಳೆಮಾತು, ಕಥೆ, ದಿವ್ಯ ದೇಶಗಳು ಹಾಗೂ ಅಲ್ಲಿ ನಿತ್ಯವೂ ವಾಸಿಸುವ ಭಗವಂತನ ರೂಪಾದಿಗಳ ಬಗೆಗೆ ತಿಳಿ ಸುತ್ತಿದ್ದರು. ಸದಾ ಭಗವಂತನ ವಿಷಯ ಕುರಿತಂತೆ ಹೇಳು ತ್ತಲಿದ್ದ ಗೋದಾದೇವಿಗೆ ಭಗವಂತನನ್ನು ಬಿಟ್ಟು ಬೇರೆಯವರನ್ನು ತಾನು ಮದುವೆಯಾಗಬಾರದೆಂಬುವ ಮನಸ್ಸು ಬದಲಾ ಯಿತು. ದೈವಚಿಂತನೆ ಹೆಚ್ಚಾಯಿತು. ಶ್ರೀ ಕೃಷ್ಣನ ಆಕರ್ಷಣೆಯ ದಿವ್ಯ ವ್ಯಕ್ತಿತ್ವ, ಶ್ರೀರಾಮನ ಗಾಂಭೀರ್ಯ, ನರಸಿಂಹಾವತಾರದ ವೈಶಿಷ್ಟ್ಯ. ಹೀಗೆಲ್ಲ ಆಲಿಸುತ್ತ ಆಲಿಸುತ್ತ, ಕ್ಷೇತ್ರದ ಅಧಿದೈವನೇ ಆದ "ಶ್ರೀರಂಗನಾಥ ಸ್ವಾಮಿ"ಕುರಿತು ಕೇಳುತ್ತ ಆ ಸ್ವಾಮಿಯ ಯಲ್ಲಿಯೇ ಆಕೆಗೆ ಅನುರಾಗ ಮೂಡಿ,ಆ ಭಗವಂತನನ್ನೇ ವರಿಸಬೇಕೆಂಬುವ ಪ್ರಚೋದನೆ ಬಲವತ್ತರಗೊಂಡಿತು. ಮಾನವಳು ತಾನು ಅರ್ಚಾರೂಪಿಯಾದ ಭಗವಂತನೊಡನೆ ಮದುವೆಯೆಂದರೆ ಸಾಧ್ಯವಾದೀತೆ ಎಂಬುವುದೂ ಚಿಂತೆಯೇ!

ಪೆರಿಯಾಳ್ವಾರರು ಪ್ರತಿನಿತ್ಯವೂ ವಟಪತ್ರಶಾಯಿ ದೇವ ರಿಗೆ ತುಲಸೀ ಹೂ ಮಾಲೆಗಳನ್ನು ಕಟ್ಟಿ,ಹೂಬುಟ್ಟಿಯಲ್ಲಿರಿಸಿ ಪೂಜೆಯ ವೇಳೆಗೆ ಸ್ವಾಮಿ ಸನ್ನಿಧಿಗೆ ನಡೆದು ಆಮಾಲೆಯನ್ನು ಪರಮ ಪ್ರಪತ್ತಿ ಭಾವದಿಂದ ಸಮರ್ಪಿಸುತ್ತಿದ್ದರು. ಮಾಲೆಯನ್ನು ಕಟ್ಟುವಲ್ಲಿ ನೆರವಾಗುತ್ತಿದ್ದ ಗೋದಾದೇವಿ ತಾನು ಅದನ್ನು



ಮೊದಲು ಮುಡಿದು ಭಗವಂತನಿಗೆ ಅದು ಹೇಗೆ ಒಪ್ಪುವುದೆಂಬುದನ್ನು ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನೋಡಿಕೊಳ್ಳುವಳು, ಆನಂದಿಸುವಳೂ ಹಾಗೆಯೇ ಪುನಃ ಹೂ ಬುಟ್ಟಿಯಲ್ಲಿ ಇಡುತ್ತಿದ್ದಳು. ಒಂದು ದಿನ ಆಕಸ್ಮಾತ್ ಪೆರಿಯಾಳ್ವಾರರು ಮುಂಚೆಯೇ ಮನೆಗೆ ಬಂದರು. ತಮ್ಮ ಮಗಳು ಗೋದಾದೇವಿಯು ಭಗವಂತನಿಗೆ ಮೀಸಲಾಗಿಡುತ್ತಿದ್ದ ಹೂ ಮಾಲೆಗಳನ್ನು ಮೊದಲು ತಾನು ಧರಿಸುತ್ತಿದ್ದು ಅದನ್ನು ನೋಡಿದರು. ಅವರ ಮನಸ್ಸಿಗೆ ಏಕೋ ಭಗವಂತನಿಗೆ ಅಪಚಾರವಾಯಿತೆನ್ನಿಸಿತು. ಆ ದಿನ ಆಳ್ವಾರರು ಹೂ ಮಾಲೆಯನ್ನು ಶ್ರೀವಟಪತ್ರ ಶಾಯಿ ದೇವರಿಗೆ ಸಮರ್ಪಿಸಲಿಲ್ಲ. ಗೋದಾದೇವಿಗೂ ಮನಸ್ಸಿಗೆ ತುಂಬಾ ನೋವಾಯಿತು. ತಂದೆ ಮಕ್ಕಳಿಬ್ಬರೂ ಆ ದಿನ ಉಪವಾಸಗೈದು ರಾತ್ರಿ ಮಲಗಿದರು. ಪೆರಿಯಾಳ್ವಾರರ ಹಾಗೂ ಆಂಡಾಳ್ ದೇವಿಯು ಮನಸ್ಸಿನ ಪಾವಿತ್ರ್ಯ ದೇವರು ಬಲ್ಲನಲ್ಲವೇ? ಆ ರಾತ್ರಿಯೇ ಅರ್ಚಾಮೂರ್ತಿಯಾದ ಭಗವಂತನು ಆಳ್ವಾರರ ಕನಸ್ಸಿನಲ್ಲಿ ಕಾಣಿಸಿಕೊಂಡು "ಏಕೆ ನೀವು ಇಂದು ಹೂಮಾಲೆಗಳನ್ನು ನನಗೆ ಅರ್ಪಿಸಲಿಲ್ಲ" ಎಂದು ಕೇಳಿದನು."ನೀನೇ ಬಲ್ಲೆ, ಪ್ರಭು, ಮಗಳಾದ ಗೋದಾದೇವಿಯು ನಿನಗೆ ಮೀಸಲಿರಿಸಿದ ಹೂ ಮಾಲೆಗಳನ್ನು ಮೊದಲು ತಾನು ಧರಿಸಿ ಅನಂತರ ನಿನಗೆ ಅರ್ಪಿಸಲೆಂದೋ ಏನೋ ಹೂಬುಟ್ಟಿಯಲ್ಲಿ ಇರಿಸಿದ್ದಳು. ನಾನು ಗಮನಿಸಿದೆ ಸರಿಯೆನಿಸಲಿಲ್ಲ.ಅಂತೆಯೇ ಈ ದಿವಸ ನಿನ್ನ ದಿವ್ಯ ತಿರುಮೇನಿಗೆ (ಶರೀರ) ಹೂ ಅರ್ಪಿಸಲಾಗದೆನೊಂದು ಮಲಗಿದೆವು" ಎಂದು ಭಗವಂತನ ಕ್ಷಮೆ ಕೋರಿದರು. ಪರಮಾತ್ಮನು ಆದೇಶಿಸಿದ ನಿಮ್ಮ ಮಗಳು ಗೋದಾದೇವಿ ನನ್ನ ಅಂತರಂಗ ಭಕ್ತೆ ನಿಮ್ಮ ಮಡಿಲಿಗೆ ಸೇರಿ, ಮನೆಯಲ್ಲಿ ಬೆಳೆಯುತ್ತಿರುವುದು ನನ್ನ ಪ್ರೇರಣೆಯಿಂದಲೇ ಗೋದೆ,ಆಂಡಾಳ್ (ನನ್ನನ್ನೇ ಆಳುತ್ತಾಳೆ ಭಕ್ತಿಯ ಮೂಲಕ) ತಾನು ಮೊದಲು ಧರಿಸಿದ ಹೂಮಾಲೆಯನ್ನೇ ನೀವು ನನಗೆ ಅರ್ಪಿಸಿರಿ. ಆ ಮಾಲೆಯೇ ನನಗೆ ಮೆಚ್ಚು ಎಂದು ನುಡಿದು ಅಂತರ್ಧಾನನಾದ ಅಂದಿನಿಂದ ಗೋದೆಗೆ "ಶೂಡಿಕೂಡುತ್ತ ನಾಚ್ಚಿಯಾರ್" ತಾನು ಮೊದಲು ಮುಡಿದು ಅನಂತರ ಭಗವಂತನಿಗೆ ಹೂಮಾಲೆ ನೀಡಿದ ದೇವಿ ಎಂಬ ಹೆಸರು ಪ್ರಚಲಿತವಾಯಿತು.

ಗೋದಾದೇವಿಗೆ ವಿವಾಹದ ವಯಸ್ಸು ಆಗೆಲ್ಲ 10-11 ವಯಸ್ಸಿಗೆ ಮದುವೆ ಮಾಡಿ ಬಿಡುವ ಪದ್ಧತಿ ಇತ್ತಲ್ಲವೆ?

ಅವಳು ತನ್ನ ತಂದೆಯವರಾದ ಪೆರಿಯಾಳ್ವಾರರಿಗೆ ನಿರ್ಧಾರದ ಧ್ವನಿಯಲ್ಲಿ ನುಡಿದಳು "ಮನುಷ್ಯ ಮಾತ್ರದವರನ್ನು ನಾನು ವಿವಾಹವಾಗುವುದಿಲ್ಲ ಪರಮಾತ್ಮ ನನ್ನೇ ಶ್ರೀರಂಗನಾಥನನ್ನೇ ನಾನುವರಿಸುತ್ತೇನೆಂದು ಮೊದಲಿನಿಂದ ತೀರ್ಮಾನಿಸಿದ್ದೇನೆ.

ಆಳ್ವಾರರಿಗೆ ಇದು ಹೇಗೆ ಸಾಧ್ಯ ಕಾರ್ಯತಃ ಸಾಧಿಸುವುದು ಆದೀತೆ? ಎಂದು ಚಿಂತೆಯೇ ಆಯಿತು. ಆಳ್ವಾರರು ಎಲ್ಲವನ್ನು ಭಗವದಿಚ್ಛೆಗೇ ಬಿಟ್ಟುಬಿಟ್ಟರು.



ಪೆರಿಯಾಳ್ವಾರರಿಗೆ ಶ್ರೀರಂಗನಾಥಸ್ವಾಮಿಯು ಕನಸಿನಲ್ಲಿ ಪ್ರತ್ಯಕ್ಷನಾಗಿ,ಅವರು ಗೋದಾದೇವಿಯನ್ನು ಶ್ರೀರಂಗಂ ಸನ್ನಿಧಿಗೆ ಕರೆ ತಂದರು. ಆಗ ನಾನು ಆ ಭಕ್ತೆಯನ್ನು ಪಾಣಿಗ್ರಹಣ ಮಾಡಿಕೊಳ್ಳುತ್ತೇನೆಂದು ತಿಳಿಸಿದ.

ಅನಂತರ ಆಳ್ವಾರರು ದೇವರ ನಿಯಮನವನ್ನು ಶಿರಸಾವಹಿಸಿ ಮಗಳನ್ನು ಸೂಕ್ತವಾಗಿ ಮದುವಣ ಗಿತ್ತಿಯಂತೆ ಅಲಂಕರಿಸಿ, ಪಲ್ಲಕ್ಕಿಯಲ್ಲಿ ಕೂಡಿಸಿ ತನ್ನ ಪರಿವಾರದೊಂದಿಗೆ ಶ್ರೀರಂಗಕ್ಕೆ ಕರೆದೊಯ್ದು ಸ್ವಾಮಿ ಎದುರಿನಲ್ಲೇ ನಿಲ್ಲಿಸಿ ನಮಸ್ಕರಿಸಿದರು. ಈ ದಿಬ್ಬಣ ಸಂಭ್ರಮವನ್ನು ಗೋದಾದೇವಿಯು ತನ್ನ ನಾಯಕಿ ಗೀತೆಯ ಪಾಶುರಗಳಲ್ಲಿ (ನಾಚ್ಚಿಯಾರ್ ತಿರುಮೊಳಿ ಪ್ರಬಂಧ) ತುಂಬಾ ಸುಂದರವಾಗಿ ಹಾಡಿದ್ದಾಳೆ.



ಗೋದಾದೇವಿಯು ಶ್ರೀರಂಗನಾಥಸ್ವಾಮಿಯ ದಿವ್ಯ ಮಂಗಳ ಮೂರ್ತಿಯನ್ನು ನೋಡಿ ಸಂಪ್ರದಾಯದಂತೆ ಪ್ರದಕ್ಷಿಣೆಯನ್ನು ಮಾಡಿ ಭಕ್ತಿಪರವಶಳಾಗಿ ಒಂದೇ ಧ್ಯಾನದಿಂದ ಶ್ರೀರಂಗನಾಥನ ಪಾದಾರವಿಂದಗಳನ್ನು ಭದ್ರವಾಗಿ ಹಿಡಿದುಕೊಂಡಳು. ಆಶ್ಚರ್ಯ ಎಂಥ ಅಲೌಕಿಕ ಘಟನೆ ನಡೆದದ್ದು ಆ ಪಾದಗಳಲ್ಲಿಯೇ ಗೋದಾದೇವಿ ಐಕ್ಯವಾದಳು. ತನ್ನ ಸ್ವಾಮಿಯಲ್ಲೇ ಅಂತರ್ಧಾನಳಾದಳು.

ಶ್ರೀರಂಗನಾಥ ಸ್ವಾಮಿಯು ಪೆರಿಯಾಳ್ವಾರರಿಗೆ ಅರ್ಚಕರ ಮುಖೇನ ಎಲ್ಲಾ ಗೌರವ ಸಮರ್ಪಿಸಿ, ತೀರ್ಥ ಪ್ರಸಾದಗಳನ್ನು ಅನುಗ್ರಹಿಸಿ ಗೋದಾದೇವಿಯನ್ನು ಪಾಣಿಗ್ರಹಣ ಮಾಡಿಕೊಂಡಿದ್ದೇನೆ,ಆನಂದವಾಗಿದೆ, ಎಂದೂ ತಿಳಿಸಿ ಆಳ್ವಾರರು ಯಥಾಪ್ರಕಾರ ಶ್ರೀವಿಲ್ಲಿಪುತ್ತೂರಿನಲ್ಲಿ ತನಗೆ ಪುಷ್ಪಕೈಂಕರ್ಯವನ್ನು ಸಲ್ಲಿಸುತ್ತೀರಿ ಎಂದು ನಿಯಮಿಸಿದನು. ಆಳ್ವಾರರನ್ನು “ಶ್ವಶುರ” ಎಂದರೆ ಮಾವನವರೆಂದೇ ಸ್ವಾಮಿ ಸಂಬೋಧಿಸಿದನು. ಅದರಿಂದಲೇ ಪೆರಿಯಾಳ್ವಾರರ ತಿರುಪ್ಪಲ್ಲಾಂಡು” ಪ್ರಬಂಧ ಸೇವಿಸುವಾಗ “ಶ್ವಶುರ ಅಮರ ವಂಧ್ಯಂ ವಿಷ್ಣುಚಿತ್ತಮ್‌ನ ಮಾಮಿ”ಎಂದು ಹಾಡುತ್ತೇವೆ. ದೇವರನ್ನು ಅಳಿಯನಾಗಿ ಪಡೆದ ಭಾಗ್ಯ ಪೆರಿಯಾಳ್ವಾರರದಾಯಿತು (ವಿಷ್ಣುಚಿತ್ತ, ಪೆರಿಯಭಟ್ಟರ್, ಭಟ್ಟರ್‌ಪಿರಾಣ್ - ಇವೆಲ್ಲ ಆಳ್ವಾರರಿಗಿರುವ ಹೆಸರುಗಳು) ಶ್ರೀವಿಲ್ಲಿಪುತ್ತೂರಿಗೆ ಹಿಂತಿರುಗಿದ ಪೆರಿಯಾಳ್ವಾರರು ಎಂದಿನಂತೆ ತಮ್ಮ ಹೂವಮಾಲೆಯನ್ನು ಅರ್ಪಿಸುವ ಕೈಂಕರ್ಯವನ್ನು ಮುಂದುವರಿಸುತ್ತ ತಮ್ಮ ಕೊನೆಯ ವಯಸ್ಸಿನಲ್ಲಿ ಭಗವಂತನ ಪಾದಾರವಿಂದ ಸೇರಿದರು. ಪ್ರತಿವರ್ಷ ಧನುರ್ಮಾಸ (ಮಾರ್ಗಶಿರ) ಶ್ರೀವೈಷ್ಣವರು ವಿಶೇಷತಃ ತಿರುಪ್ಪಾವೈ ಪ್ರತಿನಿತ್ಯವೂ ಹಾಡುತ್ತಾರೆ.

## ಲೇಖಕರಿಗೆ ಸೂಚನೆ

**ಧಾರ್ಮಿಕ, ಸಾಂಸ್ಕೃತಿಕ ವಸ್ತು ವಿಶೇಷಗಳಿಂದ ಭರಿತವಾದ ನಿಮ್ಮ ಸಪ್ತಗಿರಿಗೆ ನೀವು ಲೇಖನ ಬರೆಯಿರಿ ಹಬ್ಬ-ಹರಿದಿನ-ದೇವಾಲಯ ರಥೋತ್ಸವ-ಜಾತ್ರೆ - ಆಚರಣೆ -ಸಂತಯತಿಗಳ ಆರಾಧನೆ-ಜಯಂತಿಯ ಬಗ್ಗೆ 300 ಪದಗಳಿಗೆ ಮೀರದ್ದಂತೆ ಬರಹಗಳನ್ನು ಟೈಪ್ ಮಾಡಿ ಅಥವಾ ಬರೆದು -** kannadasubeditor@gmail.com **ಇಲ್ಲಿಗೆ ಕಳುಹಿಸಿ. ಪ್ರಕಟಿತ ಲೇಖನಗಳಿಗೆ ಸ್ವಾಮಿ ಪ್ರಸಾದ ರೂಪವಾದ ಗೌರವ ಧನ ನೀಡಲಾಗುವುದು.**

**- ಪ್ರಧಾನ ಸಂಪಾದಕರು**

# ಕರ್ನಾಟಕದ ವೈಷ್ಣವ ದೇವಾಲಯಗಳು

3



## ಗಡಿದಂ ಶ್ರೀ ವೆಂಕಟೇಶ್ವರ ದೇವಾಲಯ ಹಾಗೂ ಮುಟ್ಟೇಮರಿ ಶ್ರೀನರಸಿಂಹ ದೇವಾಲಯ

- ಕೆಂಗೇರಿ ಚಕ್ರಪಾಣಿ
9448386886

### ಗಡಿದಂನ ಶ್ರೀ ವೆಂಕಟೇಶ್ವರ ದೇವಾಲಯ

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲೂಕು, ತಾಲೂಕು ಕೇಂದ್ರದಿಂದ ಕೇವಲ ಮೂರು ಕಿ.ಮೀ. ದೂರ ದಲ್ಲಿರುವ ಸುಪ್ರಸಿದ್ಧ ಶ್ರೀನಿವಾಸ ಕ್ಷೇತ್ರ ಗಡಿದಂ. ಆಲಯಾಶ್ರಿತ ಗ್ರಾಮವಾಗಿರುವ ಗಡಿದಂನ ಮತ್ತೊಂದು ಹೆಸರು ದೇವರ ಗುಡಿ ಪಲ್ಲಿ ಶಾಸನಗಳಲ್ಲಿ ಗಡಿದ ತಿರುಮಲಪುರವೆಂಬ ಹೆಸರುಗಳೂ ಇರುವುದು ತಿಳಿದು ಬರುವುದು.

ಗಡಿದಂನ ವೆಂಕಟೇಶ್ವರ ದೇವಾಲಯವು ವಿಜಯನಗರದ ಇಮ್ಮಡಿ ಹರಿಹರರಾಯನ ಕಾಲದಲ್ಲಿ ಸ್ಥಳೀಯ ನಾಯಕ ತೆಪ್ಪರ ನಾಗಣ್ಣನ ಮೊಮ್ಮಗ ತಿರುಮಲ ದೇವನು ಮೊದಲೆ ಇದ್ದ ಪ್ರಸನ್ನ ವೆಂಕಟೇಶ್ವರ ಸ್ವಾಮಿಯ ಆಲಯವನ್ನು ಶಿಲಾದೇವಾಲಯವಾಗಿ ಪರಿವರ್ತಿಸಿರುವನು ಈ ದೇವಾಲ ಯವನ್ನು ನಿರ್ಮಿಸಿದ ಶಿಲ್ಪಿಗಳಾದ ನಾಯಂಡ,ಕಾಮೋಜ,ಭೈರೋಜ ಇವರುಗಳಿಗೆ ತಿರುಮಲ ದೇವನು ದತ್ತಿ ಯನ್ನು ಸಹಾ ನೀಡಿರುವುದು ಇಲ್ಲಿ ದೊರೆತಿರುವ ಶಾಸನಗಳಲ್ಲಿ ತಿಳಿದು ಬರುತ್ತದೆ. ವೆಂಕಟೇಶ್ವರ ದೇವಾಲಯ ದಲ್ಲಿ ವೇದಪಾರಾಯಣ ಮಾಡುವ ತ್ರಿಕಾಲಗಳಲ್ಲಿ ದೇವನಿಗೆ ಪುಷ್ಪಾರ್ಚನೆಯನ್ನು ಮಾಡುವ ವಿಪ್ರರಿಗೂ ಸಹಾ ಹಲವಾರು ಹಳ್ಳಿಗಳನ್ನು ದತ್ತಿಯಾಗಿ ತಿರುಮಲ ದೇವ ನೀಡಿದ್ದನು.



ಗಡಿದಂ ವೆಂಕಟೇಶ್ವರ ದೇವಾಲಯವು ವಿಜಯನಗರ ಅರಸರ ಕಾಲದಲ್ಲಿ ನಿರ್ಮಿತವಾಗಿದ್ದು ಪ್ರಸ್ತುತ ಅಭಿವೃದ್ಧಿಯನ್ನು ಹೊಂದಿದೆ ದೇವಾಲಯಕ್ಕೆ ಸುಂದರವಾದ ೧೦೮ ಅಡಿ ಎತ್ತರದ ಏಳು ಸ್ತರಗಳ ಗೋಪುರವಿದೆ. ಗೋಪು ರದ ಮುಂದೆ ರಾಮ ಭಕ್ತ ಹನುಮನ ಬೃಹತ್ ಮೂರ್ತಿಯಿದೆ ಹಾಗೂ ಊರನ್ನು ಪ್ರವೇಶಿಸುವ ಸ್ಥಳದಲ್ಲಿ ಆಲಯಕ್ಕೆ ಪಶ್ಚಿಮ ದಿಕ್ಕಿನಲ್ಲಿ ಗರುಡ ದೇವನ ಮೂರ್ತಿಯಿರುವುದು.

ಶಾಸನಗಳಲ್ಲಿ ಶ್ರೀನಿವಾಸ, ಪ್ರಸನ್ನ ವೆಂಕಟೇಶ್ವರ, ತಿರುವೆಂಗಳ ನಾಥ ಎಂದು ಕರೆದಿರುವ ವೆಂಕಟೇ ಶ್ವರ ದೇವಾಲಯದ ಗರ್ಭಗುಡಿಯಲ್ಲಿ ಶ್ರೀಭೂನೀಳಾ ಸಮೇತನಾದ ವೆಂಕ ಟೇಶ್ವರ ಸ್ವಾಮಿಯ ದಿವ್ಯ ಮೂರ್ತಿ ಯಿರುವುದು ಸುಮಾರು ಐದು ಅಡಿಗಳಷ್ಟು ಎತ್ತರವಿರುವ ದೇವನು ಚತುರ್ಭುಜನಾಗಿದ್ದು ಚಕ್ರ, ಶಂಖ, ವರದ, ಹಸ್ತವುಳ್ಳವನಾಗಿರುವನು.

ದೇವನ ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪಗಳಿವೆ. ವೆಂಕಟೇಶ್ವರ ಸ್ವಾಮಿಯ ಇಕ್ಕೆಲಗಳಲ್ಲಿ ದೇವನ ಪತ್ನಿಯರಾದ ಶ್ರೀದೇವಿ - ಭೂದೇವಿಯರ ಸುಂದರ ಮೂರ್ತಿಗಳಿವೆ.

ಗಡಿದಂನ ವೆಂಕಟೇಶ್ವರ ಮೂರ್ತಿಯನ್ನು ಜನಮೇಜಯರಾಯ ಸ್ಥಾಪಿಸಿದನೆಂಬ ಪ್ರತೀತಿಯಿದೆ ಹಾಗೂ ಸಮೀಪದ ಬೆಟ್ಟದಲ್ಲಿ ಭೀಮ ಹಾಗೂ ಹಿಡಿಂಬಿಯರಿಗೆ ಘಟೋತ್ಕಜನು ಜನಿಸಿದನೆಂದು ಆದ್ದರಿಂದ ಆ ಪರ್ವತಕ್ಕೆ ಘಟಿಕಾ ಪರ್ವತ ಎಂದು ಹೆಸರು ಬಂದಿತೆಂದು ನಂತರದ ಘಟಿಕವು “ಗಡಿದಂ” ಆಯಿತು ಎಂಬುದಾಗಿ ಸ್ಥಳಿಯ ಐತಿಹ್ಯವಿದೆ.



ಶ್ರೀವೆಂಕಟೇಶ್ವರ ಸ್ವಾಮಿ ಹಾಗೂ ಬಲಬದಿಯ ದೇವಿಯ ಮೂರ್ತಿಗಳು ಹೊಯ್ಸಳ ಶಿಲ್ಪದ ಲಕ್ಷಣವನ್ನು ದೇವನ ಎಡಬದಿಯ ಮೂರ್ತಿಯ ಚೋಳ ಶಿಲ್ಪದ ಲಕ್ಷಣದಲ್ಲಿದೆಯೆಂಬ ಅಭಿಪ್ರಾಯವನ್ನು ಮೈಸೂರು ಆರ್ಕಿಲಾಜಿಕಲ್ ರಿಪೋರ್ಟ್ (೧೯೪೧) ಸಂಪಾದಕರು ಹೊಂದಿರುತ್ತಾರೆ. ದೇವಾಲಯವು ಗರ್ಭಗೃಹ ಅಂತರಾಳ, ನವರಂಗ, ಮುಖಮಂಟಪ ಹಾಗೂ ನಾಲ್ಕು ದಿಕ್ಕಿನಲ್ಲಿಯೂ ಅಂದವಾದ ಪ್ರವೇಶ ಗೋಪುರಗಳನ್ನು ಹೊಂದಿವೆ. ನವರಂಗದಲ್ಲಿರುವ ಕಂಬಗಳು ಪುಷ್ಪಬೋದಿಗೆಯನ್ನು ಹೊಂದಿದ್ದು ಕಂಬದ ಮೇಲೆ ದೇವತೆಗಳ ಉಬ್ಬು ಶಿಲ್ಪಗಳಿವೆ ನವರಂಗದಲ್ಲಿ, ಅಂತರಾಳದ ದ್ವಾರದ ಬಲಬದಿಯಲ್ಲಿ ಯೋಗಾನರಸಿಂಹನ ಮೂರ್ತಿಯಿರುವುದು.

ಗಡಿದಂನ ವೆಂಕಟೇಶ್ವರ ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು ಸುತ್ತಲೂ ಬರುವ ಭಕ್ತಾದಿಗಳು ತಂಗಲು ಕೊಠಡಿಗಳು ಹಾಗೂ ಕಲ್ಯಾಣ ಮಂಟಪಗಳಿವೆ. ಸದಾ ಭಕ್ತಾದಿಗಳಿಂದ ತುಂಬಿರುವ ವೆಂಕಟೇಶ್ವರ ದೇವಾಲಯದಲ್ಲಿ ನಿತ್ಯಪೂಜೆ, ಪಕ್ಷ ಪೂಜೆಗಳು ಬಹು ಪಾಂಗಿತವಾಗಿ ನೆರವೇರುತ್ತಿರುವುದು.

ಗಡಿದಂ ಸಮೀಪವಿರುವ ಮಂಗಸಂದ್ರ ಎಂಬ ಗ್ರಾಮದಲ್ಲಿ ದೊರೆತಿರುವ ಶಾಸನದಲ್ಲಿ ಸೋಮಯ್ಯ ದೀಕ್ಷಿತ್ ಎಂಬುವರು ತಿರುವೆಂಗಳನಾಥನ ಸೇವೆಗಾಗಿ ವಾಜಪೇಯಿಯಾಗವನ್ನು ಮಾಡಿ ಯೂಪಸ್ತಂಭವನ್ನು ನಿಲ್ಲಿಸಿರುವ ದಾಖಲೆ ದೊರೆಯುವುದು.

ಗಡಿದಂ ವೆಂಕಟೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವವು ವೈಶಾಖ ಶುದ್ಧ ದಶಮಿಯ ದಿನ ಪ್ರಾರಂಭವಾಗಿ ತ್ರಯೋದಶಿಯ ದಿನ ಕಲ್ಯಾಣೋತ್ಸವ,ಹುಣ್ಣಿಮೆಯ ದಿನ ಬ್ರಹ್ಮ ರಥೋತ್ಸವವು ಬಹಳ ವೈಭವವಾಗಿ ನಡೆಯುವುದು. ಇಪ್ಪತ್ತು ದಿನಗಳು ನಡೆಯುವ ರಥೋತ್ಸವದ ಪೂಜಾ ಕೈಂಕರ್ಯಗಳು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರಗುವುದು.

**ಮಿಟ್ಟೇಮರಿ ನರಸಿಂಹ ದೇವಾಲಯ :**

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲೂಕು ಮಿಟ್ಟೇಮರಿಯ ತಾಲೂಕಿನ ಗಡಿಯಂಚಿನಲ್ಲಿರುವ ಸುಪ್ರಸಿದ್ಧ ನಾರಸಿಂಹ ಕ್ಷೇತ್ರ ಮಿಟ್ಟೇಮರಿ ಗ್ರಾಮದಲ್ಲಿ ಊರ ನಡುವೆ ಇರುವ ಒಂದು ಸಣ್ಣ ಗುಡ್ಡದ ಮೇಲೆ ನಾರಸಿಂಹ ದೇವಾಲಯವಿದೆ.

ಮಿಟ್ಟೇಮರಿಯಲ್ಲಿರುವ ನರಸಿಂಹ ದೇವಾಲಯವು ಆಧುನಿಕವಾಗಿ ನಿರ್ಮಿಸಿರುವ ರಾಜಗೋಪುರವನ್ನು ಹೊಂದಿದೆ.

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಪ್ರವೇಶ ಮಂಟಪಗಳನ್ನು ಹೊಂದಿವೆ. ದೇವಾಲಯವು ಮೂಲತಃ ವಿಜಯನಗರಸರ ಕಾಲಕ್ಕೆ ಸೇರಿದ ಆಲಯ ವಾಗಿರುವುದು. ಇಲ್ಲಿ ದೊರೆತಿರುವ ವಿಜಯ ನಗರ ಅರಸು ಅಚ್ಯುತರಾಯನ ಕಾಲದ ಕ್ರಿ.ಶ. 1530 ರ ಶಾಸನದಲ್ಲಿ ಈ ದೇವಾಲ ಯದ ಉಲ್ಲೇಖ ದೊರೆತಿದೆ. ನರಸನಾಯಕ ನೆಂಬ ಸ್ಥಳೀಯ ಪಾಳೇಯಗಾರನು ತನ್ನ ದೊರೆಗೆ ಪುಣ್ಯವಾಗಲೆಂದು ಕೆಲವು ಗ್ರಾಮಗಳ ಆದಾಯವನ್ನು ದತ್ತಿಯಾಗಿ ಬಿಟ್ಟಿರುವ ಉಲ್ಲೇಖ ದೊರೆತಿರುವುದು ಹಾಗಾಗಿ ದೇವಾಲಯವು ಹದಿನಾರನೆಯ ಶತಮಾನದ ನಿರ್ಮಿತಿ ಯೆಂದು ಖಚಿತವಾಗಿ ಹೇಳಬಹುದು.



ನರಸಿಂಹ ದೇವಾಲಯದ ಗರ್ಭಗುಡಿಯಲ್ಲಿ ನರಸಿಂಹ ದೇವನು ಉಗ್ರ ರೂಪದಲ್ಲಿ ಒಂದು ಅಡಿ ಎತ್ತರದ ಶಿಲೆಯ ಮೇಲೆ ಮೂಡಿರುವನು. ಉಗ್ರರೂಪದ ದೇವನ ಹಿಂದೆ ಶಾಂತ ರೂಪದಲ್ಲಿ ಲಕ್ಷ್ಮೀನಾರಾಯಣನಿದ್ದು ವಿಷ್ಣುವಿನ ಉಗ್ರ ಹಾಗೂ ಶಾಂತ ರೂಪಗಳು ಒಂದೇ ಗರ್ಭಗುಡಿಯಲ್ಲಿರುವ ಅಪರೂಪದ ದೇವಾ ಲಯ ಮಿಟ್ಟೇಮರಿ ನರಸಿಂಹ ದೇವಾಲಯವಾಗಿರುವುದು ಈ ದೇವಾಲಯದ ಮತ್ತೊಂದು ವಿಶೇಷ ಗರ್ಭಗುಡಿಯ ಎದುರಿಗೆ ಕಲಿಯುಗ ದೈವ ಶ್ರೀ ಶ್ರೀನಿವಾಸ ದೇವನು ಇರುವನು. ಆದ್ದರಿಂದ ಈ ದೇವಾಲಯಕ್ಕೆ ಬರುವ ಭಕ್ತರಿಗೆ ಮಹಾ ವಿಷ್ಣುವಿನ ಮೂರು ರೂಪಗಳ ದರ್ಶನ ಲಭಿಸುವುದೆಂದು ನಂಬಿಕೆ ಆಸ್ತಿಕರದು.

ಮಿಟ್ಟೇಮರಿ ಗ್ರಾಮದ ಆರಂಭದಲ್ಲಿ ಒಂದು ಕಲ್ಯಾಣಿ ಇತ್ತು. ಆದರೆ ಈಗ ಅದು ಮುಚ್ಚಿಹೋಗಿದೆ. ಕಲ್ಯಾಣಿಯ ಸಮೀಪದಲ್ಲಿ ಚಂದ್ರಮೌಳೇಶ್ವರ ದೇವಾ ಲಯವು ಇದೆ. ಊರಿನಲ್ಲಿ ಅಷ್ಟ ದಿಕ್ಪಾಲಕರನ್ನು ಪ್ರತಿನಿಧಿಸುವ ಬಲಿಪೀಠ ಗಳಿವೆ. ನಾರಸಿಂಹ ಸ್ವಾಮಿಯ ರಥೋತ್ಸವ ಸಂದರ್ಭದಲ್ಲಿ ಬಲಿ ನೈವೇದ್ಯವನ್ನು ಅರ್ಪಿಸುವ ಸಂಪ್ರದಾಯವಿದೆ. ಮಿಟ್ಟೇಮರಿ ನರಸಿಂಹ ಸ್ವಾಮಿಯ ಬ್ರಹ್ಮ ರಥೋ ತ್ಸವವು ಪಾಂಚರಾತ್ರಾಗಮ ರೀತ್ಯ ಫಾಲ್ಗುಣ ಬಹುಳ ಪಾಡ್ಯಮಿಯಂದು ಬಹು ವಿಜೃಂಭಣೆಯಿಂದ ನೆರವೇರುತ್ತದೆ.

ಹದಿನೈದು ದಿನಗಳ ಮೊದಲೇ ಆರಂಭವಾಗುವ ರಥೋತ್ಸವದ ಸೇವಾ ಕೈಂಕರ್ಯಗಳು ಬಹುಪಾಂಗಿತವಾಗಿ ನೆರವೇರುವುದು. ರಥೋತ್ಸವದ ಅಂಗವಾಗಿ ದನಗಳ ಬೃಹತ್ ಜಾತ್ರೆಯು ನಡೆಯುವುದು ಮಿಟ್ಟೇಮರಿ ಸಮೀಪ ಮೇರುಪಲ್ಲಿ ಎಂಬ ಗ್ರಾಮದಲ್ಲಿ ವೀರಾಂಜನೇಯ ದೇವಾಲಯವಿದ್ದು, ಪ್ರಸ್ತುತ ಗ್ರಾಮದಲ್ಲಿರುವ ಮಾರುತಿಯ ಉತ್ಸವವು ಮಿಟ್ಟೇಮರಿ ನರಸಿಂಹ ದೇವರ ಬ್ರಹ್ಮ ರಥೋತ್ಸವದ ದಿನ, ಇಲ್ಲಿಗೆ ಆಗಮಿಸಿದ ನಂತರವೇ ಸ್ವಾಮಿಗೆ ರಥೋತ್ಸವವು ಜರುಗುವ ಸಂಪ್ರದಾಯವಿದೆ. ಬ್ರಹ್ಮ ರಥೋತ್ಸವದ ದಿನ ಗರುಡ ಪಕ್ಷಿಯು ಆಕಾಶದಲ್ಲಿ ಕಾಣಿಸಿಕೊಂಡು ಪ್ರದಕ್ಷಿಣೆ ಬರುವುದು ನಂತರವೇ ರಥವನ್ನು ಎಳೆಯಲಾಗುವುದು. ನರಸಿಂಹ ದೇವರ ರಥೋತ್ಸವಕ್ಕೆ ಸಹಸ್ರಾರು ಭಕ್ತರು ಆಗಮಿಸಿ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗುವರು.

**ಹೀಗೆ ಬನ್ನಿ--**

ತಾಲೂಕು ಕೇಂದ್ರ ಬಾಗೇಪಲ್ಲಿಗೆ ಹೊಂದಿಕೊಂಡಂತ್ತಿರುವ ಗಡಿದಂನ ದೇವಾಲಯ ದರ್ಶನಕ್ಕೆ ಬಾಗೇಪಲ್ಲಿಗೆ ಬಂದು ಗಡಿದಂಗೆ ಬರಬಹುದು. ಶ್ರೀ ವೆಂಕಟೇಶ್ವರ ದೇವಾಲಯವನ್ನು ದರ್ಶಿಸಿದ ನಂತರ, ಬಾಗೇಪಲ್ಲಿ - ಚಿಂತಾ ಮಣಿ ರಸ್ತೆಯಲ್ಲಿ ಹದಿನೈದು ಕಿ.ಮೀ. ಪಯಣಿಸಿ ಮಿಟ್ಟೇಮರಿ ಗ್ರಾಮಕ್ಕೆ ಬಂದು ಲಕ್ಷ್ಮೀನರಸಿಂಹ ದೇವಾಲಯವನ್ನು ನೋಡಬಹುದು.

# ಬಾಲ ಪ್ರಪಂಚಕ್ಕೆ ಪೋಪು ಹೋಗೋಣ ಬಾರೋ ರಂಗ

- ಶ್ರೀಮತಿ ರೇವತಿ. ವಿ.



ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಭಕ್ತಿಯನ್ನೇ ಮೂಲ ದ್ರವ್ಯವನ್ನಾಗಿಸಿಕೊಂಡ ಸಾಹಿತ್ಯ ಪರಂಪರೆ "ಹರಿದಾಸ ಸಾಹಿತ್ಯ" ಹರಿನಾಮ ಸಂಕೀರ್ತನೆಯ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕಾಯಕವನ್ನು ಮಾಡಿದರು. ಕನ್ನಡ ಕೀರ್ತನಾ ಸಾಹಿತ್ಯ ಪರಂಪರೆ ಕ್ರಿ.ಶ. ೧೩ನೇ ಶತಮಾನದ ಶ್ರೀಮಧ್ವಾಚಾರ್ಯರಿಂದಲೇ ಆರಂಭವಾಯಿತು. ನಂತರ ಆದರ ಕೀರ್ತಿ ಶ್ರೀಪಾದರಾಜರು, ಶ್ರೀವ್ಯಾಸರಾಯರು, ಪುರಂದರದಾಸರು,ವಿಜಯದಾಸರು, ಕನಕದಾಸರು, ಜಗನ್ನಾಥದಾಸರು,ರಾಮದಾಸರು, ಮುಂತಾದವರಿಂದ ಬೆಳಗಿತು. ಹೀಗೆ ಬೆಳೆದ ದಾಸಸಾಹಿತ್ಯ ಪರಂಪರೆಯಲ್ಲಿ ರಚಿತಗೊಂಡ ಕೀರ್ತನೆಗಳು,ಉಗಾಭೋಗಗಳು, ಸುಳಾದಿಗಳು,ಮುಂಡಿಗೆಗಳೆಲ್ಲವೂ ಕನ್ನಡ ಸಾಹಿತ್ಯ ಪರಂಪರೆಯನ್ನು ಉತ್ಕೃಷ್ಟವನ್ನಾಗಿಸಿತು. ಸಾಮಾನ್ಯ ಜನರನ್ನು ನ್ಯಾಯ, ಧರ್ಮ, ಸತ್ಯ, ಪರೋಪಕಾರದ ಹಾದಿಯಲ್ಲಿ ನಡೆಸುವುದೇ ಕೀರ್ತನಕಾರರ ಸಾಹಿತ್ಯ ರಚನೆಯ ಉದ್ದೇಶವಾಗಿತ್ತು.ಈ ಉದ್ದೇಶ ಸಾಧನೆಗಾಗಿ ಈ ವಿಷಯವ ಕುರಿತು ಸುತ್ತಮುತ್ತಲಿನ ವಿಚಾರಗಳನ್ನು ಕೀರ್ತನಕಾರರು ತಮ್ಮ ಕೃತಿಗಳಲ್ಲಿ ಮನಮುಟ್ಟುವ ಹಾಗೆ ಮನ ಪರಿವರ್ತನವಾಗುವ ಹಾಗೆ ಬಿಂಬಿಸಿದ್ದಾರೆ.

ಹರಿದಾಸರ ಕೃತಿಗಳನ್ನು ಸಾಹಿತ್ಯಕ, ಸಾಂಸ್ಕೃತಿಕ, ಅಭಿವ್ಯಕ್ತಿಯೆಂದಷ್ಟೇ ಪರಿಗಣಿಸದೆ ಅವುಗಳನ್ನು ಪರಿಶೀಲಿಸಿದಾಗ ಭಕ್ತಿಯ ನಾನಾ ಬಗೆಗಳನ್ನು ಮನಗಾಣುತ್ತಾ ಹೋಗುತ್ತೇವೆ, ಶ್ರೀ ಮಧ್ವಸಿದ್ಧಾಂತದ ಸಂಸ್ಕೃತ ಗ್ರಂಥಗಳಲ್ಲಿ ಅಡಕವಾಗಿರುವ ಶಾಸ್ತ್ರದ ಸಾರವನ್ನು ಹರಿದಾಸರು ಬಹು ಸರಳವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಕೀರ್ತನೆಗಳ ಮೂಲಕ ಪ್ರಚುರಪಡಿಸಿದರು. ಅದರೊಂದಿಗೆ ಭಾಗವತ, ರಾಮಾಯಣ, ಮಹಾಭಾರತದಂತಹ ಕಾವ್ಯಗಳನ್ನು ಕೆಲವೆ ಸಾಲುಗಳಲ್ಲಿ, ಸರಳವಾಗಿ ಜನರಿಗೆ ತಲುಪುವಂತೆ ಮಾಡಿದ್ದಾರೆ. 'ಹರಿಸರ್ವೋತ್ತಮ, ವಾಯುಜೀವೋತ್ತಮ' ಎಂದು ತತ್ತ್ವಸಿದ್ಧಾಂತ ಸಾರಿದರು. ಭಕ್ತಿಯ ಹೊನಲನ್ನು ನಾನಾ ಎಡೆಗಳಲ್ಲಿ ಪಸರಿಸಿದರು.

ಹರಿದಾಸರ ಇಂತಹ ಶ್ರೇಷ್ಠ ಸಾಕಾರ ಭಕ್ತಿಯನ್ನು ಪಂಚವಿಧ ಭಾವಗಳೆಂದು ಅರ್ಥೈಸಬಹುದು. ಅವು ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಭಾವಗಳು, ಭಗವಂತನನ್ನೇ ಮಗುವೆಂದು ಪರಿಗಣಿಸಿ ತಾವು ತಾಯಿಯಾಗಿ ವಾತ್ಸಲ್ಯದ ಮಹಾಪೂರವನ್ನೇ ಹರಿಸುವ "ವಾತ್ಸಲ್ಯಭಾವ " ಭಕ್ತಿಯ ವಿವಿಧ ನೆಲೆಗಳಲ್ಲಿ ಒಂದು. ಭಾಗವತದಲ್ಲಿ ಕಂಡು ಬರುವ ಶ್ರೀಕೃಷ್ಣನ ಬಾಲಲೀಲೆಗಳನ್ನು ಹರಿದಾಸರು ಮನದುಂಬಿ ಸ್ಮರಿಸಿದ್ದಾರೆ.ಬಾಲ ಕೃಷ್ಣನನ್ನು ಮನೆ ಮನೆಗೂ ತಂದು ಸಂತೋಷದ ಹೊನಲನ್ನು ಹರಿಸಿದ ಶ್ರೇಯಸ್ಸು ದಾಸವರ್ಯರಿಗೆ ಸಲ್ಲುತ್ತದೆ.ಕೃಷ್ಣನನ್ನು ಆಡಿಸಿದ ಯಶೋದೆ ವಾತ್ಸಲ್ಯ ಬಹುತೇಕ ಎಲ್ಲ ದಾಸರಲ್ಲೂ ಪ್ರಕಟವಾಗಿವೆ. ಹೀಗೆ ಬಾಲಕೃಷ್ಣನು ಎಲ್ಲರ ಕೈಗೂಸು. ಕೆಲವೊಮ್ಮೆ ಭಕ್ತನೇ ಮಗುವೂ ಆಗುತ್ತಾನೆ.

ಭಗವಂತನನ್ನು ಸಲಹುವಂತೆ ಬೇಡುತ್ತಾನೆ. ಕೃಷ್ಣನನ್ನು ನೆನೆದಷ್ಟು ದಾಸರ ಹೃದಯ ಭಾವಾವೇಶದಿಂದ ತುಂಬಿ ಹೋಗುತ್ತದೆ. ಅದರಲ್ಲಿಯೂ ಬಾಲಕೃಷ್ಣನ ಲೀಲೆಗಳನ್ನು ಎಷ್ಟು ವರ್ಣಿಸಿದರೂ ಅವರಿಗೆ ತೃಪ್ತಿ ಎಂಬುದಿಲ್ಲ. ಕೀರ್ತನಕಾರರ ವಾತ್ಸಲ್ಯ ಭಾವದ ಶ್ರೇಷ್ಠಗೀತೆಗಳು ಬಾಲಕೃಷ್ಣ ಮುರಳೀವಾದನ, ಗೋಪಾಲನ, ರಾಸಲೀಲೆ, ಕಾಳಿಂಗಮರ್ದನ, ಗೋಪೀ ಪ್ರಸಂಗಗಳಿಂದ ತುಂಬಿ ನಿಲ್ಲುವ ಘಟನಾವಳಿಗಳಾಗಿವೆ. ಕೃಷ್ಣನ ಬಾಲಲೀಲೆಗಳನ್ನು ವಿವಿಧ ಕೋನಗಳಿಂದ ವೀಕ್ಷಿಸುತ್ತಾ ಸಂತೋಷ

ತುಂದಿಲರಾಗುತ್ತಾರೆ ಹರಿದಾಸರು ಬಾಲಕೃಷ್ಣನ ಲೀಲಾ ವಿನೋದಗಳನ್ನು ಚಿತ್ರಿಸುತ್ತಲೆ ನಮ್ಮ ಸಂಸ್ಕೃತಿಯ ಪರಿಯನ್ನು ಹರಿದಾಸರು ವಿವರಿಸುತ್ತಾರೆ. ಮಕ್ಕಳನ್ನು ಮಲಗಿಸುವಾಗ ಹಾಡುವ 'ತೂಗಿರೆ ರಂಗನ' ಎಂಬಂತಹ ಜೋಗುಗಳ ಪದಗಳು ಎರೆಯುವಾಗ ಎಣ್ಣೆಯನೊತ್ತುತ್ತ ಎಂಬಂತಹ ಪದಗಳು; ಶೃಂಗಾರದಾರತಿ ಮಾಡುವಾಗ 'ಆನಂದಮಯಗೆ', 'ಜಯಮಂಗಳಂ ನಿತ್ಯ ಶುಭ ಮಂಗಳಂ' ಎಂಬ ಪದಗಳು ಹುಟ್ಟುಹಬ್ಬ, ಹುಣ್ಣಿಮೆ ಮೊದಲಾದ ಸಂಭ್ರಮದ ಕಾಲದಲ್ಲಿ 'ಚಿರಂಜೀವಿಯಾಗಲೋ ಚಿನ್ನ, 'ಹೊಡಿ ನಗಾರಿ ಮೇಲೆ ಕೈ ' ಪದಗಳು ಫಲಹಾರ ಮಾಡುವಾಗ 'ಫಲಹಾರವ ಮಾಡೋ' ಉಣ್ಣುವಾಗ 'ರಾಮನಾಮ ಪಾಯಸಕ್ಕೆ', ತಾಂಬೂಲ ಮೆಲ್ಲುವಾಗ 'ತಾಂಬೂಲವ ಕೊಳ್ಳೊ ಆಟಪಾಠಗಳಾಡುವಾಗ 'ಬಗೆ ಬಗೆಯಾಟಗಳಲ್ಲಿ ಕಲಿತೆ' ಹಟ ಮಾಡುವಾಗ ಹುಡುಗರಿಗೆ ಅಂಜಿಸುವ ಸಂದರ್ಭದಲ್ಲಿ 'ಸುಮ್ಮನಿರು', ಬೇಡಿ ಕೊಂಬೆ ಕಾಡದಿರು ಕೃಷ್ಣಾ' ಅಳುವುದೇತಕೂ ರಂಗ' ಎಂಬ ಪದಗಳು ಅಕ್ಷರಾಭ್ಯಾಸ,ಪಾಠ, ಶಿಕ್ಷಾಗಳಲ್ಲಿ 'ಪೊಗದಿರಲೊ ರಂಗಾ', 'ಆಡ ಹೋಗಲಿ ಬೇಡ' ಎಂಬಂತಹ ಕೀರ್ತನೆಗಳು ಯಥೇಚ್ಛವಾಗಿ ಹರಿದಾಸರು ರಚಿಸಿದ್ದಾರೆ.



ದಾಸ ಸಾಹಿತ್ಯದಲ್ಲಿ ಮಹಿಳೆಯರ ಭಾವನೆಗಳಿಗೆ ಅಭಿವ್ಯಕ್ತಿ ಪ್ರಕಟವಾಗಿದ್ದು ಕೃಷ್ಣನ ಸಾಕು ತಾಯಿ 'ಯಶೋದೆ'ಯಿಂದ. ಯಶೋದೆಯ ವಾತ್ಸಲ್ಯ. ಗೋಪಿಯರ ಪ್ರೀತಿ, ಕೃಷ್ಣನ ಕುರಿತ ದೂರು, ಯಶೋದೆಯ ಪುಣ್ಯವನ್ನು ಕಂಡು ಹರ್ಷಿಸುವ ದಾಸರ ಸಂತಸಗಳು ಕೀರ್ತನೆಗಳಲ್ಲಿ ಸ್ಥಾನ ಪಡೆದಿವೆ.

ಎಂಥ ಪುಣ್ಯವೆ ನಿನ್ನದೆಂಥ ಗೋಪಿ
ಇಂಥ ಮಗನ ಕಾಣೆವೆ
ಗೋಪಿಯ ಭಾಗ್ಯವಿದು
ಆ ಪರಮಾತ್ಮನ ಅಪ್ಪಿ ಮುದ್ದಾಡುವುದು

ಎಂದು ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ಯಶೋದೆಯ ಸುಕೃತವನ್ನು ಕಂಡು ಆನಂದಿಸಿದ್ದಾರೆ.

ಇಂತಹ ಕೀರ್ತನೆಗಳಲ್ಲಿ ಯಶೋದೆಯ ತಾಯ್ತನಕ್ಕೆ ಬೆಲೆ ಬಂದಿರುವುದು ಆಕೆ ಕೃಷ್ಣನ ತಾಯಿ ಎಂಬ ಕಾರಣಕ್ಕಾಗಿ ಎನ್ನುವುದು ಮರೆಯುವಂತಿಲ್ಲ.

ಬಾಲಕೃಷ್ಣನ ಲೀಲೆಗಳನ್ನು ವರ್ಣಿಸುವ ಕೀರ್ತನೆಗಳು ಮಗುವಿನ ಹಂತ ಹಂತವಾದ ಬೆಳವಣಿಗೆಗಳನ್ನು ಚಿತ್ರಿಸುತ್ತದೆ. ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಬಾಲಕೃಷ್ಣನ ಬೆಳವಣಿಗೆಯನ್ನು ಕಂಡು ಹರ್ಷಿಸುತ್ತಾ ತಾವು ಆತನೊಂದಿಗೆ ಬೆಳೆಯುತ್ತಾರೆ.

ತೊಟ್ಟಿಲಲ್ಲಿರುವ ಮುದ್ದು ಬಾಲಕೃಷ್ಣನನ್ನು ಯಶೋದೆಯು ತೂಗುತ್ತ

ತೂಗಿರೆ ರಂಗನ ತೂಗಿರೆ ಕೃಷ್ಣನ
ತೂಗಿರೆ ಅಚ್ಯುತಾನಂತ

ಎಂದು ಪುರಂದರದಾಸರ ಕೀರ್ತನೆಯಲ್ಲಿ ಮಲಗಿಸಿದರೆ,

ಹೊನ್ನ ತಾ ಗುಬ್ಬಿ ಹೊನ್ನತಾ
ಚಿನುಮಯ ಮೂರುತಿ ರಂಗನ ಕೈಗೆ .

ಎಂದು ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಯಲ್ಲಿ ಗುಬ್ಬಿ ಆಟ ಆಡಿಸುತ್ತಾಳೆ.

ತೋಳು ತೋಳು ತೋಳು ರಂಗ ತೋಳನ್ನಾಡೈ ಸ್ವಾಮಿ
ನೀಲವರ್ಣದ ಬಾಲಕೃಷ್ಣನೆ ತೋಳನ್ನಾಡೈ

ಎಂಬ ಪುರಂದರದಾಸರ ಕೀರ್ತನೆಯಲ್ಲಿ ತೊಟ್ಟಿಲಲ್ಲಿರುವ ಮುದ್ದು ಬಾಲಕೃಷ್ಣನು ಆಡುವ ಪರಿಯನ್ನು ನೋಡಬಹುದು.

ಆನೆ ಬಂದಿತಮ್ಮಮ್ಮ ಮರಿ
ಯಾನೆ ಬಂದಿತಮ್ಮಮ್ಮ

ಎಂದು ಪುರಂದರದಾಸರ ಕೀರ್ತನೆಯಲ್ಲಿ ಕೃಷ್ಣನನ್ನು ಆಡಿಸುವ ಪರಿ ಒಂದಾದರೆ

ಜೋ ಜೋ ಜೋ ಜೋ ಜೋ ರಂಗಧಾಮ
ಜೋ ಜೋ ಜೋ ಜೋ ಜೋ ರಣಭೀಮ

ಎಂದು ಶ್ರೀಪಾದರಾಜರು ತಮ್ಮ ಕೀರ್ತನೆಯಲ್ಲಿ ಕೃಷ್ಣನನ್ನು ತೂಗುವ ಪರಿ ಇನ್ನೊಂದು. ಕೊನೆಗೆ 'ಮಗುವೆಂದು ನಾವ್ ತೂಗಬಲೆವೆ ತ್ರುಬ್ವಿ' ಎಂಬ ವಿನೀತಭಾವದಿಂದ ಶ್ರೀ ಕೃಷ್ಣನ ಮೇಲ್ಮೆಯನ್ನು ಸಾರುತ್ತಾರೆ. ಇಂತಹ ಕೀರ್ತನೆಗಳಲ್ಲಿ

ಭಕ್ತನು ತಾಯಿ (ಗೋಪಿ ) ಯಾಗುವ ರೀತಿ ಸೋಜಿಗವೆನಿಸುತ್ತದೆ.

'ಆಳುವುದ್ಯಾತಕೂ ರಂಗ' ಎಂಬ ಪುರಂದರದಾಸರ ಕೀರ್ತನೆಯಲ್ಲಿ ಪುಟ್ಟ ರಂಗನಿಗೆ ದೃಷ್ಟಿ ತಾಕಿತೆ, ಕಾಲು ಉಳುಕಿತೆ ಎಂದು ನಾನಾ ವಿಧದಲ್ಲಿ ದೃಷ್ಟಿ ನಿವಾಳಿಸುವ ತಾಯಿ ಯಶೋದೆಯ ಕಕ್ಕುಲಾತಿ ಕಾಣಬಹುದು.

ಶ್ರೀಪಾದರಾಜರ ಕೀರ್ತನೆಯೊಂದರಲ್ಲಿ ಗೋಪಿ ಯಶೋದೆಯು ಮುದ್ದು ಕೃಷ್ಣನನ್ನು ಹೀಗೆಂದು ತಡೆಯುತ್ತಾಳೆ.

ದೃಷ್ಟಿ ತಾಕೀತೋ ಬೀದಿ ಮೆಟ್ಟ ಬ್ಯಾಡವೋ
ಸೃಷ್ಟಿಯ ನಾರಿಯರೆಲ್ಲ ಕಣ್ಣಿಟ್ಟು ಹೀರುವರೋ ನಿನ್ನ

ಈ ಮೇಲಿನ ಕೀರ್ತನೆಯಲ್ಲಿ ಬಾಲಮುದ್ದು ಕೃಷ್ಣನ ದಿವ್ಯ ಸೌಂದರ್ಯವನ್ನು ಮನದುಂಬಿ ಶ್ರೀಪಾದರಾಜರು ವರ್ಣಿಸುತ್ತಾರೆ. ಇದೇ ಬಗೆಯ ತಾಯಿಯ ಆತಂಕವನ್ನು ಪುರಂದರದಾಸರ ಕೀರ್ತನೆಯಲ್ಲಿ ಕಾಣಬಹುದು.

ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ
ಭಾಗವತರು ಕಂಡರೆತ್ತಿ ಕೊಂಡೊಯ್ವರೊ

ಇಲ್ಲಿ ಯಶೋದೆ ತುಂಟ ಕೃಷ್ಣನನ್ನು ಬಾಗಿಲಿಂದಾಚೆಗೆ ಹೋಗದಂತೆ ತಡೆಯುತ್ತಿದ್ದಾಳೆ. ತನ್ನ ಮಗನನ್ನು ಯಾರೆಲ್ಲಿ ಎತ್ತಿಕೊಂಡು ಹೋಗುವರೋ ಎಂಬ ಆತಂಕ ಭಾವ ಇಲ್ಲಿ ವ್ಯಕ್ತವಾಗಿದೆ. ಕೃಷ್ಣ ಒಮ್ಮೆ ಹೊರ ಬಿದ್ದರೆ ಎದುರಾಗುವ ಅಪಾಯಗಳೇನೆಂಬುದು ತಾಯಿ ಯಶೋದೆಗೆ ತಿಳಿದಿದೆ. 'ಅಗಣಿತಗುಣ'ನಾದ್ದರಿಂದ ಆತನ ಕುರಿತು 'ಹಗರಣ' ಮಾಡಬಹುದು. ಸುರಮುನಿಗಳು ತಮ್ಮ ಹೃದಯ ಗಹ್ವರದಲ್ಲಿ ಪರಮಾತ್ಮನನ್ನು ಕಾಣದೆ ಬಯಲಿಗೆ ಬಿದ್ದ ಈ ಪುಟ್ಟ ದೇವರನ್ನು ಎತ್ತೊಯ್ಯಬಹುದು. ಮಗಳ ಮಾಣಿಕ್ಯನಾದ ಕೃಷ್ಣನನ್ನು ತಮಗೆ ದೊರಕಿತೆಂದು ಕರೆದೊಯ್ಯಬಹುದು. ದುಷ್ಟ ನಾರಿಯರು ತಮ್ಮಿಷ್ಟವ ಸಲಿಸೆಂದು ಬೇಡಿಕೊಳ್ಳುವ ಅಪಾಯವೂ ಇದೆ. ಆದ್ದರಿಂದ ಮಾತೃ ಹೃದಯಿ ಯಶೋದೆ ಮಗನಿಗೆ ಬೆಣ್ಣೆಯ ಆಮಿಷವನ್ನೊಡ್ಡಿ ಹೊರಗೆ ಹೋಗದಿರಲು ತಡೆಯುವ ಪ್ರಯತ್ನ ಮಾಡುತ್ತಾಳೆ.

ಯಶೋದೆಯ ತಾಯಿ ಮನಸ್ಸಿನ ಒಳತೋಟಿ ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಆಕೆಗೆ ಕೃಷ್ಣ ಮಗುವಾಗಿ ಮಾತ್ರ ಬೇಕೆ ಹೊರತು ದೇವರ ರೂಪದಲ್ಲಾಗಲಿ, ದುಷ್ಟ ನಾರಿಯರ ಮೋಹದ ವಸ್ತುವಾಗಲಿ ಅಲ್ಲ. ಮಗುವಿನ ರೂಪದ ಕೃಷ್ಣನನ್ನು ಹಿಡಿಯಬಹುದಾದರೆ, ಭಗವಂತ ಸ್ವರೂಪಿಯಾದ ಶ್ರೀಕೃಷ್ಣನನ್ನು ಹಿಡಿಯಲಸಾಧ್ಯ ಆದ್ದರಿಂದಲೇ ಕೃಷ್ಣನ ಚಂಚಲ ಹೆಜ್ಜೆಗಳನ್ನು ಗುರುತಿಸಿದ ಯಶೋದೆಯಾಗಲಿ, ಗೋಕುಲವಾಗಲಿ ಆತನನ್ನು ಮನೆಯಲ್ಲಿ, ಗೋಕುಲದಲ್ಲಿ, ಗೋಪಿಯರ ಹೃದಯಗಳಲ್ಲಿ ಹಿಡಿದಿಡುವ ಪ್ರಯತ್ನ ಕಾಣಬಹುದು. ಯಶೋದೆ ಕೃಷ್ಣರ ಸಂಬಂಧ ಅಲೌಕಿಕ ಸಂಬಂಧವಾದರೂ ಯಶೋದೆಗೆ ಗೊತ್ತಿರುವುದು ಕೇವಲ ತಾಯ್ತನದ ಸಂಬಂಧ. ಆದ್ದರಿಂದ ಉಳಿದೆಲ್ಲ ಸಂಬಂಧಗಳಲ್ಲಿಯೂ ಆಕೆಗೆ ಅನಿಷ್ಟತೆಯೇ ಕಾಣುತ್ತದೆ ಮತ್ತು ಎಲ್ಲರೂ ಕೃಷ್ಣನನ್ನೇ ಅಪಹರಿಸುವವರೆಂಬ ಭಯ.

ಆಡ ಹೋಗಲು ಬೇಡವೋ ರಂಗಯ್ಯ
ಬೇಡಿಕೊಂಬೆನೊ ನಿನ್ನ

ಎಂಬ ಪುರಂದರದಾಸರ ಕೀರ್ತನೆಯಲ್ಲಿಯೂ ಆಟಕ್ಕೆ ಹೋದಂತಹ ಮಗನ ಮೇಲೆ ಇತರರು ಅಪವಾದ ಹೊರಸುವರೆಂಬ ತಾಯ್ತನ ಮನಸ್ಸಿನ ಅಂಜಿಕೆ-ಆತಂಕಗಳನ್ನು ಕಾಣಬಹುದು. ಯಶೋದೆಯ ಮಾತನ್ನು ಮೀರಿ ಬಾಲಕೃಷ್ಣನು ಆಟಕ್ಕೆ ತೆರಳುತ್ತಾನೆ. ಮರಳಿ ಆಟವಾಡಿ ಬಂದ ಮುದ್ದು ರಂಗನನ್ನು ಶ್ರೀಪಾದರಾಜರ ಕೀರ್ತನೆಯಲ್ಲಿ ಯಶೋದೆ ಹೀಗೆ ಪ್ರಶ್ನಿಸುತ್ತಾಳೆ-

ಎಲ್ಲಾಡಿ ಬಂದ್ಯೋ ಎನ್ನ ರಂಗಯ್ಯಾ

ನೀ ಎಲ್ಲಾಡಿ ಬಂದ್ಯೋ ಎನ್ನ ಕಣ್ಣಮುಂದಾಡದೆ ಎನ್ನುತ್ತಲೆ

ಅಷ್ಟ ದಿಕ್ಕಲಿ ಅರಸಿ ಕಾಣದೆ ಬಹಳ
ದೃಷಿಗೆಟ್ಟೆನು ನಿನ್ನ ನೋಡದೆ ಇ

ನ್ನೆಷ್ಟು ಹೇಳಲಿ ಕೇಳಬಾರದೆ ರಂಗ

ವಿಠಲ ನೀ ಎನ್ನ ಕಣ್ಣ ಮುಂದಾಡದೆ

ಎಂದು ಹಲವು ಬಗೆಯಲ್ಲಿ ತಾನು ಹುಡುಕಿ ಬಂದುದಾಗಿ ಹೇಳುತ್ತಾಳೆ. ತಾಯಿಯ ಕಣ್ಣ ತಪ್ಪಿಸಿ ಆಡಲು ಹೋದ ಕೃಷ್ಣನ ಹಿಂದೆಯೆ ಗೋಪಿಯರ ಹಿಂಡೇ ಬರುತ್ತದೆ. ಆತನ ಕುರಿತು ದೂರುಗಳ ಪಟ್ಟಿಯನ್ನೇ ನೀಡುತ್ತಾಳೆ. ಆಗ ಮಾತೃ ಹೃದಯಿಯಾದ ಯಶೋದೆಗೆ ಇವಾವುದು ಬೇಕಿರುವುದಿಲ್ಲ.ತನ್ನ ಮಗನ ಪರವಾಗಿಯೇ ವಾದಿಸುವ ಯಶೋದೆಯ ಚಿತ್ರಣ ಶ್ರೀಪಾದರಾಜರ ಕೀರ್ತನೆಯೊಂದರಲ್ಲಿ ವ್ಯಕ್ತವಾಗಿವೆ.

ಏಕೆ ದೂರುವಿರೇ ರಂಗಯ್ಯನ
ಏಕೆ ದೂರುವಿರೇ

ಸಾಕು ನಿಮ್ಮ ದೂರ ಬಲ್ಲೇನು ಈ ಕುವರನಾ ಕೃತ್ಯ ಮಾಳ್ಪನೆ

ಪುಟಬಾಲನಾಗದ ಕೃಷ್ಣನು ಗೋವುಗಳ ಕಟ್ಟು ಬಿಚ್ಚುವುದಾಗಲಿ, ಕೆನೆ ಹಾಲು, ಬೆಣ್ಣೆ ತಿಂದನೆಂಬುದಾಗಲಿ ನಂಬಲಸಾಧ್ಯ. ಕೆನೆಹಾಲು, ಬೆಣ್ಣೆ ಶ್ರೀಮಂತರಾದ ನಮ್ಮ ಆಲಯದಲಿಲ್ಲವೆ? ಎಂದು ದೂರು ನೀಡಲು ಬಂದ ಗೋಪಿಯರನೇ ಪ್ರಶ್ನಿಸುತ್ತಾಳೆ.ಈ ಸಂದರ್ಭವನ್ನೇ ಕಾಯುತ್ತಿದ್ದ ತುಂಟ ಕೃಷ್ಣನು ತನ್ನ ತಾಯಿಯೊಂದಿಗೆ ಗೋಪಿಯರ ಮೇಲೆ ಚಾಡಿ ಹೇಳುವ ಚಿತ್ರಣ ಶ್ರೀವಾದಿರಾಜರ.

ಗೊಲ್ಲತಿಯರೆಲ್ಲ ಕೂಡಿ ಎನ್ನ ಮೇಲೆ ಇಲ್ಲದ ಸುದ್ದಿ ಪುಟ್ಟಿಸಿ
ಕಳ್ಳನೆಂದು ದೂರುತ್ತಾರೆ ಗೋಪಿ ಎನ್ನ ಕೊಲ್ಲಬೇಕೆಂಬ ಬಗೆಯೆ

ಎಂಬ ಕೀರ್ತನೆಯಲ್ಲಿ ಚಿತ್ರಿತವಾಗಿದೆ. ಹರವಿಯ ಹಾಲು ಕುಡಿಯಲು ತನ್ನ ಹೊಟ್ಟೆ ಕೆರೆಯೇನಮ್ಮ? ಮೀಸಲು ಬೆಣ್ಣೆ ತಿಂದರೆ ದೋಷವೆಂದು ದೇವರು ಕಣ್ಣು ಕುಕ್ಕುವನಲ್ಲವೆ? ಎಂದು ಪ್ರಶ್ನಿಸುತ್ತಾನೆ.ಅಟ್ಟವನ್ನೇರುವುದು ತನಗೆ ಕಷ್ಟವೆಂದು, ಕೊಟ್ಟ ಹಾಲನ್ನೆ ತಾನು ಬಿಟ್ಟು ಬಂದುದಾಗಿ ಹೇಳುತ್ತಾನೆ. ಕೊನೆಗೆ ಪುಂಡುತನ ಮಾಡಲು ತಾನು ದೊಡ್ಡ ಗಂಡ ಸೇನೆ ಅಮ್ಮ? ಎಂದು ಮುಗ್ಧವಾಗಿ ತಾಯಿಯನ್ನು ಪ್ರಶ್ನಿಸುತ್ತಾನೆ. ಕಂಡವರು ದೂರುತ್ತಾರೆ ಆದರೆ ನಾ ನಿನ್ನ ಕಂದನಲ್ಲ ವೇನೆ ಅಮ್ಮಯ್ಯ ಎಂದು ಲಲ್ಲೆಗೆರೆಯುತ್ತಾನೆ. ಮಗನ ಮುದ್ದು ಮಾತುಗಳಿಗೆ ಕರಗಿದ ಯಶೋದೆ ಗೋಪಿಯರನ್ನು ಕುರಿತು ಹೀಗೆ ಹೇಳುತ್ತಾಳೆ.

ಇಷ್ಟೊಂದು ಸಿಟ್ಟೇಕೆ ಚಿಣ್ಣ ಕೃಷ್ಣನ ಮೇಲೆ
ಪುಟ್ಟಿಸಬೇಡಿರೆ ಅನ್ಯಾಯದ

ಸೃಷ್ಟಿಗೊಡೆಯ ನಮ್ಮ ಪುರಂದರವಿಠಲನ್ನ
ದೃಷ್ಟಿಸಿ ನೋಡಿರೆ ತೊಟ್ಟಿಲಿನೊಳಗೆ

ಪುರಂದರದಾಸರ ಈ ಮೇಲಿನ ಕೀರ್ತನೆಯ ಸಾಲಿನಲ್ಲಿ ಬಾಲಕೃಷ್ಣನು ಸಾಮಾನ್ಯ 'ಅಸಾಮಾನ್ಯನು.' ಸೃಷ್ಟಿಗೊಡೆಯನಾದ ಆತನ ಮೇಲೆ ದೂರು ನೀಡುವುದು ತರವಲ್ಲವೆಂದು ಗೋಪಿಯ ಮೂಲಕ ಪುರಂದರದಾಸರು ಕೊಂಡಾಡಿದ್ದಾರೆ. ತಾಯಿಗೆ ಯಾವತ್ತಿಗೂ ಇತರರು ಮಗುವಿನ ಮೇಲೆ ಹೊರೆಸುವ ಅಪವಾದಗಳೆಲ್ಲ ಸುಳ್ಳು, ಅನ್ಯಾಯವೆಂಬ ಭಾವನೆ ಈ ಕೀರ್ತನೆಯಲ್ಲಿ ಅಭಿವ್ಯಕ್ತಿಗೊಂಡಿವೆ. ಕೊನೆಗೆ ಮಗನ ತುಂಟುತನಕ್ಕೆ ತಾಯಿ ಯಶೋದೆ ಹುಸಿ ಮುನಿಸು ತೋರುತ್ತ ಹೇಗೆ ಪ್ರಶ್ನಿಸುತ್ತಾಳೆ ಎಂದು ಕನಕದಾಸರ ಕೀರ್ತನೆಯಲ್ಲಿ ಕಾಣಬಹುದು.

ಗೊಲ್ಲರಾಮನೆಯ ಪೊಕ್ಕು
ಗುಲ್ಲು ಮಾಡುವುದೇನಲ ಬಲು
ಲಲ್ಲೆ ಮಾಡುವುದೇನಲ
ಕೇಶವ ವಿಠಲ ನಿನ್ನನು
ಕೂಸು ಅಂದವರ್ಯಾರಲೊ ಹಸು ಗೂಸು ಅಂದವರ್ಯಾರಲೊ
ದೇಶದೊಳಗೆ ವಾಸವಾಗಿಹ ಬಾಡದಾದಿ ಚೆನ್ನಕೇಶವ

ತಾಯಿಯ ಮಾತುಗಳಿಗೆ ಅಸಮಾಧಾನಗೊಂಡ ತುಂಟ ಕೃಷ್ಣನೂ ಇತರರ ಬಗ್ಗೆ ತಾಯಿಯ ಬಳಿ ದೂರು ನೀಡುತ್ತಾನೆ. ಪುರಂದರದಾಸರ ಕೀರ್ತನೆಯಲ್ಲಿ ಚಾಡಿ ಹೇಳುವ ಕೃಷ್ಣನ ಬಾಲಲೀಲೆಗಳನ್ನು ಆತನಿಂದಲೆ ಹೇಳಿಸುವ ಪಾತ್ರ ಹೊಸತನದಿಂದ ಕೂಡಿದೆ :

ಆಡ ಹೋದಲ್ಲೆ ಮಕ್ಕಳು ಆಡಿಕೊಂಬುವರು ನೋಡಮ್ಮ
ನೋಡಿ ನೋಡಿ ಎನ್ನ ಮುಖವ ನೋಡಿ ಕಣ್ಣ ಮೀಟುವರಮ್ಮ
ಕಿಚ್ಚ ನಾ ಗಡ ನುಂಗಿದೆನಂತೆ ವತ್ಸಾಸುರನ ಕೆಡಹಿದೆನಂತೆ
ಕಚ್ಚ ಬಂದ ಕಾಳಿಂಗನ ಕೊಚ್ಚಲು ಮಡುವ ಧುಮುಕಿದೆನಂತೆ
ಹದ್ದು ಎನ್ನ ವಾಹನವಂತೆ ಹಾವು ಎನ್ನ ಹಾಸಿಗೆಯಂತೆ
ಕದ್ದು ಬೆಣ್ಣೆಯ ನಾ ತಿಂದನಂತೆ ಮುದ್ದು ಪುರಂದರವಿಠಲನಂತೆ

ಅಂತೆ ಎಂಬ ಪದ ಪ್ರಯೋಗದಲ್ಲಿಯೆ ಇದೆಲ್ಲ ಸುಳ್ಳು ಎಂಬ ಭಾವನೆಯನ್ನು ತುಂಟ ಕೃಷ್ಣನು ಉಂಟು ಮಾಡುತ್ತಾನೆ.

# ದಾಸ ಸಾಹಿತ್ಯದಲ್ಲಿ ನಾಮಸ್ಮರಣೆ – ವೈಜ್ಞಾನಿಕ ವಿಶ್ಲೇಷಣೆ

– ಡಾ|| ವಾಸುದೇವ ಅಗ್ನಿ ಹೋತ್ರಿ

ಹರಿದಾಸ ಸಾಹಿತ್ಯವು ಕನ್ನಡ ಆರ್ಷೇಯವಾಣಿ, ಇದು ಕನ್ನಡ ಪೌರಾಣಿಕ ಸಂಪತ್ತು. ರಾಮದೂತ ಹನುಮಂತನೇ ಈ ಸಾಹಿತ್ಯದ ಪ್ರೇರಣಾಶಕ್ತಿ. ಕನ್ನಡದಲ್ಲಿ ಋಷಿ ತುಲ್ಯರಾದ ಶ್ರೀಪಾದರಾಜರಿಂದ ಗುರುಗೋವಿಂದ ವಿಠಲರವರೆಗೆ ಆಗಿ ಹೋದ ಎಲ್ಲ ಮಹನೀಯರು ಜ್ಞಾನ,ಭಕ್ತಿ ವೈರಾಗ್ಯ ಧುರೀಣರು. ಜನರಿಗೆ ಅವರೆಲ್ಲರೂ ಹುಚ್ಚರಾದಂತೆ ಕಂಡರು. ಅಷ್ಟೇ ಏಕೆ ಹುಚ್ಚು ಹಿಡಿಯಿತೋ ಎನಗೆ ಹುಚ್ಚು ಹಿಡಿಯಿತೋ ಎಂದು ಹಾಡಿದರು. "ಕಾಗದ ಬಂದಿದೆ ಕಮಲ ನಾಭನದು" ಎಂದು ನರ್ತನ ಮಾಡಿದರು.ಆ ಹುಚ್ಚುಯಾತರದು, ಯಾತಕ್ಕೆ, ಯಾತರಿಂದ ಆ ಕಾಗದ ಯಾರು ತಂದರು, ಅದರಲ್ಲೇನಿತ್ತು ಆದರೆ ಸುದ್ದಿ ಏನು ಎನ್ನುವುದೇ ದಾಸಸಾಹಿತ್ಯಕ್ಕೆ ಮೂಲ ಮತ್ತು ಮಾದರಿ. ಅದನ್ನೇ ಭಕ್ತಿ ಎಂದು ಕರೆದರು. ಅದನ್ನು ಯಾರಲ್ಲಿ-ಏಕೆ ಭಕ್ತಿ ಮಾಡಬೇಕೆಂಬುದೇ ಜ್ಞಾನ. ಇವೆರಡೂ ಬರಬೇಕಾದರೆ ವೈರಾಗ್ಯ (ತ್ಯಾಗ ಮತ್ತು ಸೇವೆ) ಭಾವ ಮೂಡಿಬರಬೇಕು.

ಭಕ್ತಿ ಎಂಬುದು ಅನುಭವಿಕ ವೇದ್ಯವೇ ಹೊರತು ತರ್ಕ ಸತ್ಯವಲ್ಲ. ಭಕ್ತಿ ಇಲ್ಲದ ಬಾಳು ಬ್ರೇಕ್ ಇಲ್ಲದ ಕಾರು. ಭಕ್ತಿ ಜ್ಞಾನಪೂರ್ವಕವಾಗಿದ್ದು ಸತ್ಕರ್ಮದಲ್ಲಿ ತೊಡಗಿದರೆ ಆ ವ್ಯಕ್ತಿಯಿಂದ ಲೋಕ ಕಲ್ಯಾಣದ ಕಾರ್ಯಗಳಾಗುತ್ತವೆ.

ಅವನ ಬದುಕು ಅಸ್ತಿತ್ವ ಕರ್ಮ ಸಹಜವಾಗಿ ವೈಜ್ಞಾನಿಕವಾಗಿರುತ್ತದೆ. ಏಕೆಂದರೆ"ಸೃಜನಹೀನ ವಿಜ್ಞಾನ ವ್ಯರ್ಥಹೈ ಜಹಾ ಪ್ರಾಣಿಕೋ ಉಪಕಾರ ನಹೀಹೈ"ಇದು ಹೊಸ ಯುಗದ ಋಷಿವಾಕ್ಯ, ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜನಜೀವನಕ್ಕೆ ಜನ, ಇದು ಗುಂಡೋಪನಿಷತ್ತಿನ ವಾಕ್ಯ. ಹಾಗಾದರೆ ವಿಜ್ಞಾನವೆಂದರೇನು Science is an invention - Tehnology is innovation. Invention ಎಂದರೆ ಜೀವ ವೈವಿಧ್ಯವಿರುವ ಈ ಜಗತ್ತಿನಲ್ಲಿ ತಾನೂ ಒಂದರ ಮಗು ಎಂದು ತಿಳಿದು ಪರಿಸರ ಸ್ನೇಹಿಯಾಗಿ ಪರೋಪಕಾರಿಯಾಗಿ, ಆಯುರಾರೋಗ್ಯ ಭಾಗ್ಯ ಹೊಂದಿ, ಋಖಿ -ಃ ಖಿ ಸೌಲಭ್ಯವನ್ನು ಪಡೆದು ಅದನ್ನು ಸಂಸ್ಕೃತಿ ಮತ್ತು ಧರ್ಮಕ್ಕೆ ಪೂರಕವಾಗಿ ಅನ್ವಯಿಸುವಂತೆ ಇರುವ ಆದರ್ಶಗಳ ಅನುಕರಣೀಯ ಬದುಕಿನ ವಿಧಾನವೇ ವಿಜ್ಞಾನ. ಅದು ಜೀವ ವಿಜ್ಞಾನವಾಗಿರಬಹುದು ಅಥವಾ ಭೌತವಿಜ್ಞಾನವಾಗಿರಬಹುದು.

ಈ ವಿಚಾರ ಸಂಕಿರಣದಲ್ಲಿ ವ್ಯಾಸ ಮತ್ತು ದಾಸ ಸಾಹಿತ್ಯದಲ್ಲಿ ನಾಮಸ್ಮರಣೆ, ಪ್ರಸಾದ ಮತ್ತು ಧ್ಯಾನಗಳ ವೈಜ್ಞಾನಿಕ ವಿಶ್ಲೇಷಣೆ ಅದರಲ್ಲಿ ನಮ್ಮ ವಿಷಯದ ವ್ಯಾಪ್ತಿಯೆಂದರೆ ದಾಸ ಸಾಹಿತ್ಯದಲ್ಲಿ ನಾಮಸ್ಮರಣೇ ಹಾಗೂ ಅದರ ವೈಜ್ಞಾನಿಕ ವಿಶ್ಲೇಷಣೆ.

ಈ ವಿಷಯದ ಮೇಲೆ ಎಲ್ಲ ಹರಿದಾಸರಿಂದ ರಚಿತವಾದ ಸುಮಾರು ೧೦೦ ಕೀರ್ತನೆಗಳನ್ನು ಆಯ್ಕೆ ಮಾಡಿಕೊಂಡು ಆಯಾ ಕೀರ್ತನೆಗಳಲ್ಲಿ ನಾಮಸ್ಮರಣೆಯ ಭಾಗ (ನುಡಿ /ಪಲ್ಲವಿ/ಸಾಲು) ಇತ್ಯಾದಿ ಉದ್ದರಿಸಿ ಅವುಗಳನ್ನು ಡಾ.ಎಂ.ಜಿ. ದೇಶ ಪಾಂಡೆ, ಅವರ ಸಹಾಯ ಪಡೆದು ಅವೆಲ್ಲವುಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಸಾಧ್ಯವಾದಷ್ಟು ವಿಶ್ಲೇಷಿಸಲಾಗಿದೆ. ಹೆಚ್ಚಿನ ಮಹತ್ವ ಜೀವ ವಿಜ್ಞಾನಕ್ಕೆ ಕೊಡಲಾಗಿದ್ದು, ಆರೋಗ್ಯವೇ ಭಾಗ್ಯ, ನಮ್ಮ ಧ್ಯೇಯವಾಕ್ಯಗಳು, ಅನುಬಂಧದಲ್ಲಿ ಉದ್ಧರಿಸಲಾದ ಎಲ್ಲ ಕೀರ್ತನೆಗಳ ಆಕರವನ್ನು ಸೂಚಿಸಲಾಗಿದೆ. ಸಂಕೀರ್ತನೆಯು ದಾಸ ಸಾಹಿತ್ಯದ ಜೀವಾಳ. ಶ್ರೀಮದ್ಭಾಗವತದಲ್ಲಿ ಶ್ರವಣ-ಮತ್ತು ಕೀರ್ತನೆ ಭಕ್ತಿಗೆ ಹೆಚ್ಚಿನ ಆದ್ಯತೆ. ಕೇಳುವವರು ಎಂದೆಂದಿಗೂ ಎಲ್ಲ ಕಾಲಕ್ಕೂ ಕೋಟಿ ಕೋಟಿ ಸಂಖ್ಯೆಯಲ್ಲಿರುತ್ತಾರೆ ಹೇಳುವವರು ಒಬ್ಬಿಬ್ಬರೇ ಇರುತ್ತಾರೆ- ಅವರೇ ಶರಣರು-ದಾಸರು. ಅದಕ್ಕಾಗಿ ಕನ್ನಡದಲ್ಲಿ "ಕೋಟಿಗೊಬ್ಬ ಶರಣು"ಎಂದು ಒಬ್ಬ ವಚನಕಾರ ಹಾಡಿದ್ದಾನೆ.ಹೀಗಾಗಿ ಮುಂದಿನ ಪ್ರತಿ ಸಾಲು/ನುಡಿ ಪಲ್ಲವಿಯಲ್ಲಿ ನೇರವಾಗಿ ನಾಮಸ್ಮರಣೆಯ ಕಾರಣ, ಪ್ರೇರಣೆ ಮತ್ತು ಪ್ರಯೋಜನವವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ.

ದಾಸ ಸಾಹಿತ್ಯದ ಜೀವನ ಪದ್ಧತಿಯಲ್ಲಿ ವ್ಯವಸ್ಥಿತವಾದ ಸರಳವಾದ ಪರಿಸರ ಸ್ನೇಹಿಯಾದ ಗ್ರಾಮೀಣ ಜನಪದ ಬದುಕಿನ ವೇಳಾಪಟ್ಟಿಯನ್ನು ನೋಡಬಹುದು. ಅದೇ ಒಂದು ವೈಜ್ಞಾನಿಕ ಜೀವನ. ಅದನ್ನು ಹರಿದಾಸರು ಪ್ರಾತಃಸ್ಮರಣೆಯ ಕೀರ್ತನೆಯಲ್ಲಿ ಎಂದರೆ,ಬಹುತೇಕವಾಗಿ ಉದಯರಾಗಗಳಲ್ಲಿ ಹೇಳಿದ್ದಾರೆ.

### ಮುಂಜಾನೆ ಎದ್ದು ಗೋವಿಂದ ಎನ್ನಿ

೧) ಹಿಂದಿನ ದಿನದಲ್ಲಿ ಮಾಡಿದ ಎಲ್ಲ ಕರ್ಮಗಳ ಪ್ರಾಯಶ್ಚಿತ್ತವನ್ನು ಪಡೆದಜೀವ ಬೆಳಿಗ್ಗೆ ಶುದ್ಧವಾದ ಮನಸ್ಸಿನಿಂದ ಪರಮಾತ್ಮನ ಪ್ರಾರ್ಥನೆಯೊಂದಿಗೆ ಎದ್ದು ನೆನೆಯುವುದರಿಂದ ಅಂದಿನ ಎಲ್ಲ ಕರ್ಮಗಳಿಗೆ ಸಂಪೂರ್ಣ ಶುದ್ಧ ಮನಸ್ಸು ಮತ್ತು ಒಳ್ಳೆಯ ಆರೋಗ್ಯ ಪೂರಕವಾಗುತ್ತದೆ. ಎಲ್ಲ ಮಾನಸಿಕ ದೌರ್ಬಲ್ಯಗಳಿಂದ ಜೀವ ಮೇಲೇಳುತ್ತದೆ.

ಈಶ ನಿನ್ನ ಚರಣ ಭಜನೆ







೨) ಈ ಕೀರ್ತನೆಯಲ್ಲಿ ೨೪ ದೇವರ ನಾಮಗಳನ್ನು ಆಯಾ ಭಾವ ತಾಳ ಮತ್ತು ಬೆಳಗ್ಗೆ ಎದ್ದು ಮಾಡುವ ಕ್ರಿಯಾ ಕರ್ಮಗಳಿಗೆ ಹೊಂದಿಸಿದ ಒಂದು Early Morning Time Table ನೋಡಬಹುದು.

೩) ಇದು ಪ್ರಯೋಜನ ಆಧಾರಿತ ಅಲ್ಲದೆ ಪರಮಾತ್ಮನಿಂದ ದಾಸರಿಗೆ ಸಿಗಬೇಕಾದ ಮಾರ್ಗದರ್ಶನ ಎಂದರೆ ಬಾಳಿಗೊಂದು ನಂಬಿಕೆ ಮತ್ತು ಬಾಳಿನ ಬುತ್ತಿ ಇದರಲ್ಲಿದೆ.೨೪ ನುಡಿಗಳ ಈ ಕೀರ್ತನೆ ಕೇಶವನಿಂದ ಕೃಷ್ಣನವರೆಗೆ ನಾಮಸ್ಮರಣೆ ಮಾಡುವುದರ ಜೊತೆಗೆ ಜೀವಿಯು ಶುದ್ಧ ಹೃದಯದಿಂದ ಸಮಾಜದ ಉಪಕಾರಿ ಮಾನವನಾಗುವ ಸೂಚನೆ ಗಳಿವೆ.

೪) ಟೀಕಾಚಾರ್ಯರ ಪಾದ. ಈ ಕೀರ್ತನೆಯಲ್ಲಿ ಮಧ್ವ ಸಿದ್ಧಾಂತ ವನ್ನು ಸಂಸ್ಕೃತದಲ್ಲಿ ಸರಳಗೊಳಿಸಿದ ಶ್ರೀ ಮನ್ನ್ಯಾಯ ಸುಧಾ ಗ್ರಂಥದ ಕರ್ತೃ ಗಳಾದ ಶ್ರೀ ಜಯತೀರ್ಥರಿಗೆ ಟೀಕಾಚಾರ್ಯರೆಂದೇ ಬಿರುದು.ಇಲ್ಲಿ ನಾಮಸ್ಮರಣೆ ಎಂದರೆ ಬೀಜಾಕ್ಷರಗಳ ಸ್ಮರಣೆಯಿಂದ ಸಹಜವಾಗಿ ಆಯುರಾರೋಗ್ಯ ಭಾಗ್ಯ ಮಾತ್ರ ಲಭಿಸುವುದಿಲ್ಲ. ಜೊತೆಗೆ, ಜಯ ತೀರ್ಥರ

ಜ ಎಂದು ನುಡಿದರೆ ಜಯಶೀಲನಾಗುವ
ಯ ಎಂದು ನುಡಿಯಲು ಯಮನಂಜುವ
ತೀ ಎಂದು ನುಡಿಯಲು ತೀಮಿರಪಾತಕ ಹಾನಿ
ರ್ಥ ಎಂದು ನುಡಿಯಲು ತಾಪತ್ರಯ ಪರಿಹಾರ

ಎಂದರೆ ಒಂದೊಂದು ಅಕ್ಷರವೂ ಅದರದೇ ಆದ ಮಹತ್ವವನ್ನು ಹೊಂದಿದೆ.ಇಂತಹ ವೈಜ್ಞಾನಿಕ, ಭಾಷಿಕ ಮತ್ತು ಧ್ವನಿಪೂರ್ಣ ವಿಚಾರ ಗಳನ್ನು ಹರಿದಾಸರು ನಮಗೆ ನೀಡಿದರು. ಇಂತಹದೇ ಇನ್ನೊಂದು ಕೃತಿ ಎಂದರೆ, ಆನಂದ ಆನಂದ ಎಂದು ಕೇಳಿದ್ದೇವೆ.ಅದರಲ್ಲಿ ಪೂರ್ಣ ವರ್ಣಗಳ ಸಾರ ಮತ್ತು ಸಾರ್ಥಕತೆ ಇದೆ.

೫)''ರಾಮನಾಮ ಪಾಯಸಕ್ಕೆ'' ಈ ಕೃತಿಯಲ್ಲಿ ವ್ಯಕ್ತಿಯು ಸಮಾಜದ ಉಪಕಾರಿಯಾಗಿ ಬದುಕಲು ಬೇಕಾದ ಸಮನ್ವಯತೆ ಮತ್ತು ಬದುಕಿನಿಂದ ಆಗುವ ಸಾಮಾಜಿಕ ಪ್ರಯೋಜನಗಳನ್ನು ಉತ್ತಮ ರೂಪಕಗಳಲ್ಲಿ ಹೇಳಿದ್ದಾರೆ. ರಾಮನಾಮ ಪಾಯಸದಲ್ಲಿ ಕೃಷ್ಣನಾಮ ಸಕ್ಕರೆ ಸೇರಿಸು ವುದರಿಂದ ಅದು ಸಹಜವಾಗಿ ಕೂಡಿ ವಿಠಲನಾಮ ತುಪ್ಪ ಇತ್ಯಾದಿ ಹಾಕುವುದರಿಂದ ಒಂದು ಆರೋಗ್ಯವಂತ ದೇಹಕ್ಕೆ ಬೇಕಾದ ಪೌಷ್ಟಿಕ ಆಹಾರ ಸಿದ್ಧವಾಗುತ್ತದೆ ಎಂದರೆ, ಹಾಗೆಯೇ ವ್ಯಕ್ತಿಯು ಸಮಾಜದ ಹಿತಕ್ಕಾಗಿ ತನ್ನೆಲ್ಲ ಗುಣ ಕರ್ಮಗಳನ್ನು ಹೊಂದಿಸಿಕೊಳ್ಳಬೇಕು.ಇದು ನಾಮಸ್ಮರಣೆಯಿಂದ ಮಾತ್ರ ಸಾಧ್ಯ.

೬) ದ್ರೋಹಿಗಳ ವಿವರವನ್ನು ನಾ ಪೇಳ್ವೆನಯ್ಯಾ

ಇದು ಅತ್ಯಂತ ವೈಜ್ಞಾನಿಕ ಮತ್ತು ವಿಶಿಷ್ಟ ಕೃತಿ.ಇಂದಿನ ಸಮಾಜದಲ್ಲಿ ನನಗೇನು ಮಾಡುವುದಿದೆ. ಸಮಾಜ ಇದ್ದರೆಷ್ಟು ಕೆಟ್ಟರೆಷ್ಟು ಎಂಬ ಸಮಾಜ ಮುಖಿಯಿಲ್ಲದ ಜನರನ್ನೇ ನಾವು ಹೆಚ್ಚಾಗಿ ಕಾಣುತ್ತೇವೆ.ಭಯೋತ್ಪಾದಕರ ಅದರ ಸಹಾಯಕರ, ಹಾಗೂ ಸಮಾಜ ದ್ರೋಹಿಗಳ ಚಟುವಟಿಕೆಗಳನ್ನು ನಾವು ಕಂಡರೂ ಹೇಳುವ ಧೈರ್ಯವಿಲ್ಲ. ಅಷ್ಟೇ ಏಕೆ, ಟ್ಯಾಕ್ಸ್ ಇವೇಜರ್‌ಗಳನ್ನು ಹೇಳಿದರೆ ಬಹುಮಾನ ಎಂಬ ವಾಣಿ ಹಿಂದೆ ಇತ್ತು. ಈಗ ಅದು ಕೂಡ ಕೇಳುತ್ತಿಲ್ಲ.ಉಗ್ರಗಾಮಿಗಳ, ವಿದ್ಯುಶ್ಶಕ್ತಿ ಕಳುವು ಮಾಡುವವರ ಹೀಗೆ ದೇಶದ ಮತ್ತು ಸಮಾಜದ ವೈರಿಗಳ ಹೆಸರನ್ನು ಸೂಚಿಸಬೇಕು. ಆದರಿಂದ ಮಾತ್ರ ಶುದ್ಧ ಸಂಘಟಿತ ಶಕ್ತಿಮಾನ ಸಮಾಜ ಸಾಧ್ಯ ಎಂಬುದು ಈ ಕೀರ್ತನೆಯಲ್ಲಿ ಕಾಣಬಹುದು. ದಾಸರು ಧೈರ್ಯದಿಂದ ''ದ್ರೋಹಿಗಳ ವಿವರವನ್ನು ನಾ ಪೇಳ್ವೆನಯ್ಯ'' ಎಂದು ಸಮಾಜಕ್ಕೆ ಅಪಕಾರ ಮಾಡುವವರನ್ನು,ದುಷ್ಟರನ್ನು ದೂಷಿಸುವುದು ಮಾತ್ರವಲ್ಲದೇ ಅಂಥವರನ್ನು ಸೂಚಿಸಿ ಸರ್ಕಾರದಿಂದ ಶಿಕ್ಷೆ ಕೊಡಿಸುವ ಕ್ರಮಪುಷ್ಟೀಕರಿಸಿದ್ದಾರೆ. ಇದರಲ್ಲಿ ಸಮಾಜ ಎಂದರೆ ಭಗವಂತನು ನೇಮಿಸಿದ ಸರ್ಕಾರ ಎಂದು ತಿಳಿಯಬೇಕು.

೭) ''ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣಾ ಎನಬಾರದೇ'' ಇದರಲ್ಲಿ ವ್ಯಕ್ತಿಯೊಬ್ಬನು ಸಂಪೂರ್ಣ ಕ್ರಿಯಾಶೀಲನಾಗಿರಲು ಬೋಧಿ ಸುತ್ತಾರೆ. ಅವನಿಗೆ ವಿರಾಮ ಸಿಕ್ಕಾಗ ಕುಟುಂಬ, ಸಮಾಜ, ದೇಶವನ್ನು ಪ್ರೀತಿಸುತ್ತಾ ಆ ಸಂದರ್ಭದಲ್ಲಿಯೂ ನಾಮಸ್ಮರಣೆ ಮಾಡಲು ಹೇಳುತ್ತಾರೆ. ಅದಾವುದು ಆಗದೇ ಇರುವಾಗ ಪರಿಪರಿಕೆಲಸದೊಳ್ ಒಂದು ಕೆಲಸ

ವೆಂದು ಕೃಷ್ಣಾ ಎನಬಾರದೇ ಎಂದರೆ, ಇಲ್ಲಿ ವೇಳಾಪಟ್ಟಿ ಸೂಚಿಸುವಿಕೆಯನ್ನು ನೋಡುತ್ತೇವೆ ಇದೇ ವ್ಯಕ್ತಿಯ ವೈಜ್ಞಾನಿಕ ಬದುಕಿನ ಸೂಚನೆ.

ವ್ಯಕ್ತಿಗೆ ಸಾಮಾಜಿಕ ಭದ್ರತೆ, ಆಸ್ತಿ ಮತ್ತು ಜೀವದ ರಕ್ಷಣೆ ಇಂದಿನ ಸಮಾಜದಲ್ಲಿ ತುಂಬಾ ಪ್ರಮುಖವಾದುದು. ಇದನ್ನು ತಿಳಿದ ದಾಸರು ಈ ಕೆಳಗಿನ ಕೀರ್ತನೆಗಳಲ್ಲಿ ಚಿಂತಿಸಿದ್ದಾರೆ.

೮) ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ ಇದರಲ್ಲಿ ವ್ಯಕ್ತಿಯ ಸಾಮಾಜಿಕ ಅಸ್ತಿತ್ವಕ್ಕೆ ಪ್ರಮುಖ ಕಾರಣವೆಂದರೆ, ಅವನು ಪರಮಾತ್ಮನಲ್ಲಿ ಇಟ್ಟ ವಿಶ್ವಾಸ, ನಾಮಸ್ಮರಣೆ ಮಾಡದೇ ಅವನಿಗೆ ಬದುಕುವ ಅರ್ಹತೆಯೇ ಸಿಗುವುದಿಲ್ಲ. ಇನ್ನು ಸ್ವಲ್ಪ ಮುಂದೆ ಹೋಗಿ ಆ ನಾಮ ಸ್ಮರಣೆಯ ವಿಧಿ ವಿಧಾನಗಳನ್ನು ಕೇಳಿ ಮಾದರಿಗಳನ್ನು ಅನುಸರಿಸಿದ ಕೀರ್ತನೆ ಎಂತು ತುತಿಸಲಿ ನಿನ್ನ ಎಂದು ಬಂದಿದೆ.

## ನಿಂದಾಸುತ್ತಿ

ಇಂತಹ ಕೃತಿಗಳಲ್ಲಿ ನಾಮಸ್ಮರಣೆ ಮುಖ್ಯವೇ ಹೊರತು ಅದರ ಹಿಂದಿನ ಭಾವವನ್ನು ನಕಾರಾತ್ಮಕವಾಗಿ ಸೂಚಿಸಿ ಅಂತಹ ಚಟುವಟಿಕೆಯಿಂದ ಎಚ್ಚರವಿರಲು ಹೇಳುತ್ತಾರೆ.

ಮೊದಲೊಂದಿಪೆ ಗಣನಾಥ ಈ ಕೃತಿಯಲ್ಲಿ ನಾಮಸ್ಮರಣೆ ಮಾಡಿ ಉದ್ಧಾರವಾದ ಧರ್ಮರಾಯನನ್ನು ಪಾಂಡವರನ್ನು ನೆನೆಯುತ್ತ ನಾಮಸ್ಮರಣೆ ಮಾಡದೇ ಪಾಪ ಭಾಜನನಾಗಿ ಕೆಟ್ಟ ದುರ್ಯೋಧನ ರಾವಣ, ಮೊದಲಾದವರನ್ನು ಸೂಚಿಸುತ್ತಾರೆ. ಇದು ಒಂದು ವಿಶಿಷ್ಟವಾದ ಪದ್ಯ. ಇಂತಹ ನೂರಾರು ಕೃತಿಗಳನ್ನು ಉದ್ಧರಿಸಬಹುದು.

## ಉಪಸಂಹಾರ

ಹರಿದಾಸ ಸಾಹಿತ್ಯದಲ್ಲಿ ಭಕ್ತನು ಧ್ಯಾನಿಯಾಗುತ್ತಾನೆ. ಜ್ಞಾನಿಯು ಮೌನಿಯಾಗಿರುತ್ತಾನೆ, ವೈರಾಗ್ಯಶಾಲಿಯು ಹುಚ್ಚು ಹಿಡಿದು ನಾಮ ಸಂಕೀರ್ತನೆ ಮಾಡುತ್ತಾನೆ. ಏಕೆಂದರೆ ಅವನು ಲೋಭ ಮತ್ತು ಭಯ ಎರಡರಿಂದ ಮುಕ್ತನು. ಆದರಿಂದ ಆ ಜೀವಕ್ಕಾದ ಲಾಭ, ಸ್ವರ್ಗಪ್ರಾಪ್ತಿ ಮೋಕ್ಷಗಳೇ ಅವನ ಸಾಧನೆ. ಅದು ಹೇಗಾಯಿತು ಎಂದು ತಾರ್ಕಿಕವಾಗಿ ಪ್ರಶ್ನಿಸದೇ ವೈಜ್ಞಾನಿಕವಾಗಿ ವೈಚಾರಿಕವಾಗಿ ಸಕಾರಾತ್ಮಕವಾಗಿ ಕಂಡುಕೊಂಡು ಪ್ರಶ್ನಿಸದೇ ಬದುಕುವುದೇ ಆದರ್ಶವಾದದ್ದು. ದಾಸ ಶ್ರೇಷ್ಠರಾದ ಪುರಂದರದಾಸರು. ಈಸಬೇಕು ಇದ್ದು ಜೈಸಬೇಕು ಹಾಗಾಗುವುದಾದರೆ ಮಾನವಜನ್ಮದೊಡ್ಡದು ಎಂದು ವೈಜ್ಞಾನಿಕ ಲೋಕ ನೀತಿ ಹೇಳಿದರು.



# ಪದಬಂಧ - 11

**ಎಡದಿಂದ ಬಲಕ್ಕೆ**

01. ಪೊಯ್ಗೈ ಆಳ್ವಾರ್ ಪ್ರಬಂಧ 'ಮು' ಯಿಂದಾರಂಭ ...(8)

02. ಕುಲಶೇಖರಾಳ್ವಾರ್ ವಿರಚಿತ ಪ್ರಬಂಧ ...(8)

**ಬಲದಿಂದ ಎಡಕ್ಕೆ**

03. ಆಂಡಾಳ್ ರಚಿಸಿದ ಅಪರೂಪದ ಕೃತಿ ...(4)

04. ನಮ್ಮಾಳ್ವಾರರ ಋಗ್ವೇದಕ್ಕೆ ಸಮವಾದ ಪ್ರಬಂಧ ಕೊನೆ 3 ಅಕ್ಷರವಿರುತ್ತಂ ...(5)

**ಮೇಲಿಂದ ಕೆಳಕ್ಕೆ**

05. ತೊಂಡರಡಿಪ್ಪೊಡಿಆಳ್ವಾರ್ ಅವರ ಸುಪ್ರಭಾತ ಪ್ರಬಂಧ ಎಳುಚ್ಚಿಯಿಂದ ಕೊನೆಗೊಳ್ಳುವ ...(7)

06. ತಿರುಮಂಗೈ ಆಳ್ವಾರ್‌ರ ತಿರುಮಡಲ್‌ನಿಂದ ಅಂತ್ಯಗೊಳ್ಳುವ 'ಶಿ' ಯಿಂದ ಆರಂಭದ ಪ್ರಬಂಧ ...(3)

07. ಅತ್ಯಂತ ಹೆಚ್ಚು ದಿವ್ಯ ದೇಶಗಳನ್ನು ಸಂದರ್ಶಿಸಿರುವ ಏಕೈಕ ಆಳ್ವಾರ್ ತಿರುಮಂಗೈ ಆಳ್ವಾರ್ 1084 ಪಾಶುರಗಳ ದಿವ್ಯ ಪ್ರಬಂಧದ ಮೊದಲ ಮೂರಕ್ಷರಗಳು ...(3)

08. 120 ಪಾಶುರಗಳ ಸಂಗೀತಮಯ ತಿರುಮಳಿಶೈ ಆಳ್ವಾರರ ಅದ್ಭುತ ಪ್ರಬಂಧ (ಚಂದದ್ದು) ...(7)

**ಕೆಳಗಿನಿಂದ ಮೇಲಕ್ಕೆ**

09. ನಾಲಾಯಿರ ಪ್ರಬಂಧದ ಕಾಣಿಕೆಯ ಜೊತೆ ಭಕ್ತಿ ಭಾವದ ಸ್ತೋತ್ರವನ್ನು ನೀಡಿದ್ದಾರೆ. ಕುಲಶೇಖರ ಆಳ್ವಾರರು 'ಮು' ಯಿಂದ ಆರಂಭ. ...(5)

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | | | | | |
| 2 | | 5 | | | | 3<br>8 | | |
| 3 | 2 | | | | | | | |
| 4 | | | 6 | | 7 | | | |
| 5 | | | | | | | | |
| 6 | | | | | | | | |
| 7 | | | | | | | 4<br>11 | |
| 8 | 9 | | | 10 | | | | 12 |

**- ಪಿ.ಜಿ. ಶ್ರೀನಿವಾಸನ್**

-38 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

10. ವಿಪ್ರನಾರಾಯಣರೆಂದು ಸಹ ಖ್ಯಾತರಾಗಿರುವ ತೊಂಡರ ಡಿಪ್ಪೊಡಿ ಆಳ್ವಾರರು ದೇವರಿಗೆ ಮಾಲೆ ಅರ್ಪಿಸಿದ್ದಾರೆ ಮಾಲೆ ರೂಪದಲ್ಲಿ ...(4)

11. ಸಾಮವೇದ ಸಾರವೆಂದು ಖ್ಯಾತಿ ಪಡೆದಿರುವ ನಮ್ಮಾಳ್ವಾರರ ಬಹು ಪ್ರತಿಭೆ ಹಾಗೂ ಖ್ಯಾತಿಯ 1102 ಪಾಶುರಗಳ ಅತಿದೊಡ್ಡ ಪ್ರಬಂಧ ...(5)

12. ದೇವರ ಪೂಜೆ ಈ ಪ್ರಬಂಧವಿಲ್ಲದೆ ಅಪೂರ್ಣ, ಅಂತಹ ಖ್ಯಾತಿಯ ಪ್ರಬಂಧ ದೇವರಿಗೇ ಸೌಖ್ಯ ಕೋರುವ ಮಧುರೈ ಪಟ್ಟಣದಿಂದ ಬೆಳಕಿಗೆ ಬಂದ ಅಮೃತವಾಣಿ ಪೆರಿಯಾಳ್ವಾರರಿಂದ ಹೊರ ಹೊಮ್ಮಿತು. ...(5)

# ತಿರುಮಲೆ ತಿರುಪತಿ ದೇವಸ್ಥಾನಗಳು

## ಜನವರಿ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |

## ಫೆಬ್ರವರಿ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | | | | | | |

## ಮಾರ್ಚ್ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |



### ಜನವರಿ 2021

01. ಆಂಗ್ಲ ಹೊಸ ವರ್ಷಾರಂಭ.

06 -12 ರ ವರೆಗೆ ಶ್ರೀ ಆಂಡಾಳ್ ನೀರಾಟೋತ್ಸವ

13. ಭೋಗಿ, ಭೋಗಿತೇರು.

14. ಮಕರ ಸಂಕ್ರಾಂತಿ.

15. ಕನುಮ, ಶ್ರೀ ಗೋದಾದೇವಿ ಪರಿಣಯೋತ್ಸವ.

26. ಗಣತಂತ್ರದಿನೋತ್ಸವ

28. ಶ್ರೀ ರಾಮಕೃಷ್ಣ ತೀರ್ಥ ಮುಕ್ಕೋಟಿ

### ಫೆಬ್ರವರಿ 2021

11. ಶ್ರೀ ಪುರಂದರದಾಸರ ಆರಾಧನೆ.

13-21 ರ ವರೆಗೆ ದೇವುನಿ ಕಡಪ ಶ್ರೀ ಲಕ್ಷ್ಮೀ ವೇಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

19. ರಥಸಪ್ತಮಿ, ಭೀಷ್ಮಾಷ್ಟಮಿ

20-26 ರ ವರೆಗೆ ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ತೆಪ್ಪೋತ್ಸವ

23. ಭೀಷ್ಮ ಏಕಾದಶಿ

27. ಕುಮಾರಧಾರ ತೀರ್ಥ ಮುಕ್ಕೋಟಿ

### ಮಾರ್ಚ್ 2021

02 -10 ರ ವರೆಗೆ ಶ್ರೀನಿವಾಸಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.

04-13 ರ ವರೆಗೆ ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.

11. ಮಹಾಶಿವರಾತ್ರಿ

13-21 ರ ವರೆಗೆ ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

20-28 ರ ವರೆಗೆ ತರಿಗೊಂಡ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿಯವರ ಬ್ರಹ್ಮೋತ್ಸವ

24-28 ರ ವರೆಗೆ ತಿರುಮಲೆ ಸ್ವಾಮಿಯವರ ತೆಪ್ಪೋತ್ಸವ.

28. ಶ್ರೀ ಲಕ್ಷ್ಮೀ ಜಯಂತಿ, ತುಂಬುರು ತೀರ್ಥ ಮುಕ್ಕೋಟಿ

# ತಿರುಮಲೆ ತಿರುಪತಿ ದೇವಸ್ಥಾನಗಳು



## ಏಪ್ರಿಲ್ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

## ಮೇ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

## ಜೂನ್ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

### ಏಪ್ರಿಲ್ 2021

08. ಅನ್ನಮಾಚಾರ್ಯ ವರ್ಧಂತಿ.
13. ಶ್ರೀ ಪ್ಲವ ನಾಮಸಂವತ್ಸರ..... ಯುಗಾದಿ
14. ಮತ್ಸ್ಯ ಜಯಂತಿ, ತಮಿಳು ಹೊಸ ವರ್ಷಾರಂಭ
16-24 ರ ವರೆಗೆ ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
18. ಶ್ರೀ ರಾಮಾನುಜ ಜಯಂತಿ
19. ಶ್ರೀ ರಾಮ ಜಯಂತಿ
21. ಶ್ರೀರಾಮನವಮಿ.
21-29 ರ ವರೆಗೆ ಒಂಟಿಮಿಟ್ಟ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವ
24-26 ರ ವರೆಗೆ ತಿರುಮಲೆ ಸ್ವಾಮಿಯವರ ವಸಂತೋತ್ಸವ
26- ಮೇ 04 ರ ವರೆಗೆ ನಾಗುಲಾಪುರಂ. ಶ್ರೀ ವೇದನಾರಾಯಣ ಸ್ವಾಮಿಯವರ ಬ್ರಹ್ಮೋತ್ಸವಗಳು

### ಮೇ 2021

14. ಅಕ್ಷಯ ತೃತೀಯ , ಶ್ರೀ ಪರಶುರಾಮ ಜಯಂತಿ
17. ಶ್ರೀ ಶಂಕರಚಾರ್ಯ ಜಯಂತಿ
18. ತಿರುಪತಿ ಗಂಗಜಾತ್ರೆ
18-26 ರ ವರೆಗೆ ತಿರುಪತಿ ಶ್ರೀ ಗೋವಿಂದರಾಜಸ್ವಾಮಿಯವರ ಬ್ರಹ್ಮೋತ್ಸವಗಳು
20-22 ತಿರುಮಲೆ ಶ್ರೀ ಪದ್ಮಾವತಿ ಶ್ರೀನಿವಾಸ ಪರಿಣಯೋತ್ಸವ
23-31 ರ ವರೆಗೆ ಹೃಷೀಕೇಶ್/ ನಾರಾಯಣವನಂ ಶ್ರೀ ಕಲ್ಯಾಣ ವೇಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
24-27 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವಗಳು
25. ಶ್ರೀ ನೃಸಿಂಹ ಜಯಂತಿ, ಮಾತೃಶ್ರೀ ತರಿಗೊಂಡ ವೆಂಗಮಾಂಬ ಜಯಂತಿ, ಶ್ರೀ ಅನ್ನಮಾಚಾರ್ಯ ಜಯಂತಿ
26. ಶ್ರೀ ಕೂರ್ಮ ಜಯಂತಿ

### ಜೂನ್ 2021

02-10 ರ ವರೆಗೆ ಕಾರ್ವೇಟಿನಗರಂ ಶ್ರೀ ವೇಣುಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು
04. ಶ್ರೀ ಹನುಮ ಜಯಂತಿ
19 - 27 ರ ವರೆಗೆ ಅಪ್ಪಲಾಯಗುಂಟ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.
20-24 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು
29 ಜುಲೈ 01 ರ ವರೆಗೆ ತಿರುಚಾನೂರು ಶ್ರೀ ಸುಂದರರಾಜ ಸ್ವಾಮಿಯವರ ಅವತಾರೋತ್ಸವ

## ತಿರುಮಲೆ ತಿರುಪತಿ ದೇವಸ್ಥಾನಗಳು

### ಜುಲೈ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

### ಆಗಸ್ಟ್ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ಸೆಪ್ಟೆಂಬರ್ 2021

ಗೋವಿಂದ ಗೋವಿಂದ ಗೋವಿಂದ ಗೋವಿಂದ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |



### ಜುಲೈ 2021

13-15 ರ ವರೆಗೆ ಶ್ರೀನಿವಾಸಮಂಗಾಪುರಂ ಶ್ರೀ ಕಲ್ಯಾಣವೇಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವಂ

16. ತಿರುಮಲೆ ಸ್ವಾಮಿಯವರ ಆಣಿವರ ಆಸ್ಥಾನಂ

19-21 ರ ವರೆಗೆ ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ

20-23 ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವ.

24. ಗುರುಪೂರ್ಣಿಮ, ವ್ಯಾಸಜಯಂತಿ

### ಆಗಸ್ಟ್ 2021

08. ಶ್ರೀ ಚಕ್ರತಾಳ್ವಾರ್ ವರ್ಷಾ ತಿರುನಕ್ಷತ್ರ
11. ಆಂಡಾಳ್ ತಿರುವಾಡಿಪುರಂ
12. ನಾಗಚತುರ್ಥಿ
13. ಗರುಡ ಪಂಚಮಿ
15. ಸ್ವಾತಂತ್ರದಿನೋತ್ಸವ.
16. ಮಾತೃಶ್ರೀ ತರಿಗೊಂಡ ವೆಂಗಮಾಂಬ ಜಯಂತಿ

17-20 ರ ವರೆಗೆ ತಿರುಮಲೆ ಸ್ವಾಮಿಯವರ ಪವಿತ್ರೋತ್ಸವ

20. ವರಲಕ್ಷ್ಮೀ ವ್ರತ
22. ಹಯಗ್ರೀವ ಜಯಂತಿ, ಶ್ರೀವಿಖನಸ ಮಹಾಮುನಿ ಜಯಂತಿ
23. ಗಾಯತ್ರಿ ಜಪಂ
30. ಶ್ರೀ ಕೃಷ್ಣಜನ್ಮಾಷ್ಟಮಿ, ಗೋಕುಲಾಷ್ಟಮಿ

### ಸೆಪ್ಟೆಂಬರ್ 2021

03. ಶ್ರೀ ಬಲರಾಮ ಜಯಂತಿ.
09. ಶ್ರೀ ವರಾಹ ಜಯಂತಿ.
10. ಗಣೇಶಚತುರ್ಥಿ

15-18 ರ ವರೆಗೆ ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ಪವಿತ್ರೋತ್ಸವ

17. ಶ್ರೀ ವಾಮನ ಜಯಂತಿ

18-21 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವ

19. ಅನಂತಪದ್ಮನಾಭ ವ್ರತ.

# ತಿರುಮಲ ತಿರುಪತಿ ದೇವಸ್ಥಾನಗಳು



## ಅಕ್ಟೋಬರ್ 2021

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |

## ನವೆಂಬರ್ 2021

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

## ಡಿಸೆಂಬರ್ 2021

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### ಅಕ್ಟೋಬರ್ 2021

06-15 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ನವರಾತ್ರಿ ಬ್ರಹ್ಮೋತ್ಸವ

07-15 ರ ವರೆಗೆ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ

11. ತಿರುಮಲೆ ಸ್ವಾಮಿಯವರ ಗರುಡ ಸೇವೆ

12. ಸರಸ್ವತಿ ಪೂಜೆ

13. ದುರ್ಗಾಷ್ಟಮಿ

14. ಮಹಾನವಮಿ,

15. ವಿಜಯದಶಮಿ.

### ನವೆಂಬರ್ 2021

3. ನರಕ ಚತುರ್ದಶಿ,

4. ದೀಪಾವಳಿ, ಶ್ರೀ ಕೇದಾರಗೌರಿ ವ್ರತ.

8. ನಾಗರ ಪಂಚಮಿ

11. ತಿರುಮಲೆ ಸ್ವಾಮಿಯವರ ಪುಷ್ಪಯಾಗ.

16. ಕೈಶಿಕದ್ವಾದಶಿ

30 - ಡಿಸೆಂಬರ್ 08 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವ

### ಡಿಸೆಂಬರ್ 2021

02. ಶ್ರೀ ಧನ್ವಂತರಿ ಜಯಂತಿ

04. ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಗಜವಾಹನ ಸೇವೆ

08. ಪಂಚಮಿ ತೀರ್ಥ

09. ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ

14. ಗೀತಾಜಯಂತಿ

15. ಚಕ್ರತೀರ್ಥ ಮುಕ್ಕೋಟಿ

16. ಧನುರ್ಮಾಸ ಆರಂಭ

18. ಶ್ರೀ ದತ್ತ ಜಯಂತಿ

# ತ್ಯಾಗರಾಜರು ಕರ್ನಾಟಕ ಸಂಗೀತದ ಮೇರು ಪರ್ವತ

-ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ
97393 88000



ಮೇ 4, 1767ರಲ್ಲಿ ತಂಜಾವೂರು ಜಿಲ್ಲೆಯ ತಿರುವಾರೂರಿನಲ್ಲಿ ಜನಿಸಿದರು. ಇವರ ತಂದೆ ರಾಮ ಬ್ರಮ್ಮಮ್ ತಾಯಿ ಸೀತಮ್ಮ ಇವರ ಅಜ್ಜ ಗಿರಿರಾಜ ಕವಿ ತಂಜಾವೂರಿನ ಆಸ್ಥಾನದಲ್ಲಿ ಕವಿ ಸಂಗೀತಗಾರರಾಗಿದ್ದರು. ತ್ಯಾಗರಾಜರ ಮೊದಲ ಪತ್ನಿ ಪಾರ್ವತಮ್ಮ-ಇವರ ನಿಧನದ ನಂತರ ಕಮಲಾಂಬರನ್ನು ಮದುವೆಯಾದರು.

ಸಂಗೀತದ ಒಲವು ಕರ್ನಾಟಕ ಸಂಗೀತ ಇವರ ಜೀವ. ಕರ್ನಾಟಕ ಸಂಗೀತ ಹೆಚ್ಚಾಗಿ ಭಕ್ತಿ ಪ್ರಧಾನವಾದದ್ದು. ರಚನೆಗಳು ಸಾಮಾನ್ಯವಾಗಿ ಹಿಂದೂ ದೇವತೆಗಳ ಕುರಿತು ಇರುವುವು. ಕಿವಿಗೆ ಇಂಪಾಗಿ ಕೇಳುವುದೇ ಇದರ ಅರ್ಥ. ಅದರಂತೆ ತ್ಯಾಗರಾಜರು ಸಂಗೀತದ ಮೊದಲ ಶಿಕ್ಷಣವನ್ನು ಶ್ರೀಸೊಂಟಿ ವೆಂಕಟರಮಣಯ್ಯನವರಿಂದ ಪಡೆದರು. ದೇವರನ್ನು ಅನುಭವಿಸುವ ದಾರಿಯಾಗಿ ಸಂಗೀತವನ್ನು ಕಂಡ ತ್ಯಾಗರಾಜರು ಭಾವಪೂರ್ಣ ಸಂಗೀತಕ್ಕೆ ರಾಗ ಮತ್ತು ತಾಳಬದ್ಧ ಸಂಗೀತಕ್ಕಿಂತ ಹೆಚ್ಚು ಪ್ರಾಮುಖ್ಯತೆ ನೀಡಿದವರಾಗಿದ್ದರು.13ನೆಯ ವಯಸ್ಸಿನಲ್ಲಿಯೇ ತಮ್ಮ ಕೃತಿಗಳಲ್ಲಿ ಒಂದಾದ 'ನಮೋ ನಮೋ ರಾಘವ ' ವನ್ನು ರಚಿಸಿದರು. ಇವರ ಗುರುಗಳು ತಂಜಾವೂರಿನ ರಾಜರ ಬಗ್ಗೆ ಪ್ರಭಾವಿ ಸಲಹೆ ನೀಡಿದರು. ಆದರೆ ತ್ಯಾಗರಾಜರು ಮಹಾರಾಜರ ಆಸ್ಥಾನದ ಸಂಗೀತಗಾರರಾಗುವ ಆಹ್ವಾನ ನಿರಾಕರಿಸಿದರು. ಇವರು ಶ್ರೀನಾರದರಿಂದ ತಮ್ಮ ಸಂಗೀತ ಪಾಂಡಿತ್ಯಕ್ಕಾಗಿ ಆಶೀರ್ವಾದ ಪಡೆದ ಸಂದರ್ಭದಲ್ಲಿ "ಶ್ರೀನಾರದಮುನಿ" ಕೃತಿಯನ್ನು ಹಾಡಿದರು ಎನ್ನುವ ನಂಬಿಕೆ ಇದೆ. ಚಿಕ್ಕಂದಿನಲ್ಲಿ ಇವರ ತಾಯಿಯವರು ಪುರಂದರದಾಸರ ಹಾಡು ಹೇಳುತ್ತಿದದ್ದನ್ನು ಕೇಳಿ ಇವರು ಪ್ರಭಾವಿತರಾಗಿದ್ದರಂತೆ. ಆದ್ದರಿಂದ ಇವರು ತಮ್ಮ ಪ್ರಹ್ಲಾದ ಭಕ್ತಿ ವಿಜಯದ ಮಂಗಳ ಶ್ಲೋಕದಲ್ಲಿ ಪುರಂದರದಾಸರನ್ನು ಸ್ಮರಿಸಿದ್ದಾರೆ.

ತ್ಯಾಗರಾಜರು ಹಲವಾರು ರಾಗಗಳಲ್ಲಿ ಕಾವ್ಯರಚನೆ ಮಾಡಿದ್ದಾರೆ. ರಾಗಗಳಲ್ಲಿ ಶ್ರೇಷ್ಠ ಘನರಾಗಗಳಾದ ನಾಟ, ಗೌಳ, ಅರಭಿ, ವರಾಳಿ, ಶ್ರೀರಾಗಗಳಲ್ಲಿ ಇವರ ಕೃತಿಸಮೂಹಕ್ಕೆ "ಘನರಾಗ ಪಂಚರತ್ನ" ವೆಂದು ಕರೆಯಲಾಗುತ್ತದೆ. ತಿರುವೊಟ್ರಿಯೂರಿನ ತ್ರಿಪುರಸುಂದರಿಯ ಮೇಲೆ , ಕೋವೂರು ಸುಂದರೇಶ್ವರನ ಮೇಲೆ ಮತ್ತು ಶ್ರೀರಂಗಂ ರಂಗನಾಥನ ಮೇಲೆ ಇವರು ರಚಿಸಿದ ಐದೈದು ಕೃತಿಗಳ ಗುಂಪುಗಳು 'ತಿರುವೊಟ್ರಿಯೂರ್' ಪಂಚರತ್ನ ಮತ್ತು ಶ್ರೀರಂಗಂ ಪಂಚರತ್ನ ಕೃತಿಗಳೆಂದೇ ಹೆಸರುವಾಸಿಯಾಗಿವೆ.ತ್ಯಾಗರಾಜರು ತಮ್ಮ ಕೊನೆಯ ಕಾಲದವರೆಗೂ ಕೃತಿಗಳನ್ನು ರಚಿಸುತ್ತಿದ್ದರೆಂದು ತಿಳಿದುಬಂದಿದೆ. ಮನೋಹರಿ ರಾಗದ 'ಪರಿತಮುನಿ ಮಾಡಿನ ಗಿರಿಪೈನಲಕೊನ್ನ' ಮತ್ತು 'ವಾಗಧೀಶ್ವರಿ ರಾಗದ ಪರಮಾತ್ಮುಡು ವೆಲಿಗೇ' ಎಂಬ ಕೃತಿಗಳನ್ನು ಅವರು ತಮ್ಮ ಜೀವನದ ಕಡೆಯ ಹತ್ತು ದಿನಗಳಲ್ಲಿ ರಚಿಸಿದರೆಂದು ತಿಳಿದು ಬರುತ್ತದೆ.

## ತ್ಯಾಗರಾಜರ ಆರಾಧನೆ

ಕರ್ನಾಟಕ ಸಂಗಿತಕ್ಕೆ ತ್ಯಾಗರಾಜರ ಕಾಣಿಕೆ ನೆನಪಾಗಿ ಪ್ರತೀವರ್ಷ (ಜನವರಿ ಅಥವಾ ಫೆಬ್ರವರಿ ತಿಂಗಳು ಸಮಯ) ತ್ಯಾಗರಾಜರ ಆರಾಧನೆ ಉತ್ಸವ ನಡೆಯುತ್ತದೆ. ಅನೇಕ ಮುಖ್ಯ ಸಂಗೀತಗಾರರ ಕಛೇರಿಗಳು ಆ ಸಮಯದಲ್ಲಿ ನಡೆಯುತ್ತವೆ. ವರ್ಷದ ಬೇರೆ ಬೇರೆ ಸಮಯದಲ್ಲಿ ಒಂದೊಂದು ಕಡೆ ಇವರ ಆರಾಧನೆ ಆಚರಿಸಲಾಗುತ್ತದೆ.

ತ್ಯಾಗರಾಜರು ಜನವರಿ 6, 1847 ರಂದು ನಿಧನರಾದರು. ಇವರು ನಿಧನರಾದರೂ ಇವರ ಸಂಗೀತ ಪೂರ್ವಕ ರಚನೆಗಳು ಎಲ್ಲರ ಹೃದಯದಲ್ಲಿ ನೆಲೆ ನಿಂತಿವೆ. ಈಗಲೂ ಎಲ್ಲ ಸಂಗೀತಗಾರರು ಇವರ ರಚನೆಗಳನ್ನು ಹೇಳಿ ಇವರನ್ನು ಸ್ಮರಿಸುವುದು ಶ್ಲಾಘನೀಯ.

# ಜ್ಞಾನ ತಪಸ್ವಿ ಜಿತಾಮಿತ್ರ ತೀರ್ಥರು

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621



ಜಿತಾಮಿತ್ರರು ರುದ್ರಾಂಶ ಸಂಭೂತರೆಂದು ದೃಢೀಕರಿಸಲಾಗಿದೆ. ಕೃಷ್ಣಾ - ಭೀಮಾ ಸಂಗಮದಲ್ಲಿ ಶಿಷ್ಯರಿಗೆ ಪಾಠ ಹೇಳುತ್ತಿದ್ದಾಗ ಕೃಷ್ಣೆಯ ಪ್ರವಾಹ ಉಕ್ಕಿ ಸುಮಾರು 7 ದಿವಸಗಳ ಕಾಲ ಹರಿಯಿತು. ಪ್ರವಾಹ ಇಳಿದ ನಂತರ ಶಿಷ್ಯರು ನೋಡಿದಾಗ ಗುರುಗಳು ಯಾವ ರೀತಿ ಕುಳಿತಿದ್ದರೋ ಅದೇ ರೀತಿಯಲ್ಲಿ ಕುಳಿತಿದ್ದರು. ಪುನಃ ಪ್ರವಾಹ ಬಂದು ಇಳಿದಾಗ ಜಿತಾಮಿತ್ರರು ಇರಲಿಲ್ಲ.ಶಿಷ್ಯರಿಗೆ ನಮಗೆ ಬೃಂದಾವನ ಬೇಕಿಲ್ಲ.ನಾವು ಕುಳಿತ ಮರವನ್ನೇ ನಾನೆಂದು ತಿಳಿದು ಆರಾಧಿಸಿ ಎಂಬ ಧ್ವನಿ ಕೇಳಿಸಿತು.ಇಂದಿಗೂ ಆ ಮರವನ್ನೇ ನಾನೆಂದು ತಿಳಿದು ಆರಾಧಿಸಿ ಎಂಬ ಧ್ವನಿ ಕೇಳಿಸಿತು. ಇಂದಿಗೂ ಆ ಮರವನ್ನೇ ಜಿತಾಮಿತ್ರರ ಬೃಂದಾವನವೆಂದು ತಿಳಿದು ಆರಾಧಿಸುತ್ತಾರೆ.

ಶ್ರೀಮನ್ ಮಧ್ವಾಚಾರ್ಯರ ಪರಂಪರೆಯಲ್ಲಿ ಮಧ್ವಾಚಾರ್ಯರಿಂದ ಹನ್ನೊಂದನೇ ಯತಿಗಳಾಗಿ ಹಾಗೂ ಶ್ರೀರಾಮಚಂದ್ರ ತೀರ್ಥರ ಪರಮ ಶಿಷ್ಯರಾದ ಶ್ರೀ ವಿಭುದೇಂದ್ರ ತೀರ್ಥರ ಕರಕಮಲ ಸಂಜಾತರು ಶ್ರೀ ಜಿತಾಮಿತ್ರ ತೀರ್ಥರು. ಇವರು ಪೂರ್ವಾಶ್ರಮದಲ್ಲಿಯೇ ಶ್ರೀ ವಿಭುದೇಂದ್ರತೀರ್ಥರು ನೀಡಿದ ನಾರಸಿಂಹ ಸಾಲಿಗ್ರಾಮಕ್ಕೆ ಗುರುಗಳ ಸಮ್ಮುಖದಲ್ಲಿಯೇ ಪ್ರತ್ಯಕ್ಷವಾಗಿ ನೈವೇದ್ಯ ಉಣಿಸಿದ ರುದ್ರಾಂಶ ಸಂಭೂತರೆಂದು ಖ್ಯಾತಿಗೊಂಡ ಮಹಾಯೋಗಿಗಳಿವರು ಮತ್ತು ಶ್ರೀ ಪಾದರಾಜರ ಸಮಕಾಲೀನರು. ಕೃಷ್ಣ ಭೀಮೆಯರ ಸಂಗಮ ಸ್ಥಳದಲ್ಲಿ ತಪೋನಿಷ್ಠರಾಗಿ ಇಂದಿಗೂ ಭಕ್ತರನ್ನು ಅನುಗ್ರಹಿಸುತ್ತಿರುವ ಮಹಾನ್ ಯತಿವರೇಣ್ಯರು ಹಾಗೂ ಜ್ಞಾನ, ಭಕ್ತಿ, ವೈರಾಗ್ಯ ಪ್ರದಾತರು.

## ಶ್ರೀ ಜಿತಾಮಿತ್ರಗಡ್ಡೆ

ಸುಮಾರು 500 ವರ್ಷಗಳ ಹಿಂದೆ ಶ್ರೀ ಜಿತಾಮಿತ್ರರು ತಮ್ಮ ಕರಕಮಲ ಸಂಜಾತರಾದ ಯತಿಶ್ರೇಷ್ಠರಾದ ಶ್ರೀ ರಘುನಂದನ ತೀರ್ಥರಾದಿಯಾಗಿ (ಹಂಪೆ) ಅನೇಕ ಶಿಷ್ಯಂದರಿಗೆ ಸುಧಾದಿ ಗ್ರಂಥಗಳ ಬೋಧನೆ ಮಾಡಿದ ಪುಣ್ಯಸ್ಥಳ ಶ್ರೀ ಜಿತಾಮಿತ್ರ ಗಡ್ಡೆ. ಶ್ರೀ ಜಿತಾಮಿತ್ರರು ಸತತ ಏಳು ದಿವಸಗಳ ಕಾಲ ಕೃಷ್ಣೆ ಮತ್ತು ಭೀಮಾ ನದಿಗಳ ಭೀಕರ ಪ್ರವಾಹದ ಮಧ್ಯೆ ತಪೋನಿಷ್ಠರಾಗಿ ಮಾರನೇ ದಿನ ಅವರ ಪೂರ್ವಾಶ್ರಮದ ಅಕ್ಕ ಹಾಗೂ ಭಕ್ತವೃಂದಕ್ಕೆ ಕಾಣಿಸಿಕೊಂಡು ಮುಂದೆ ತಾವು ಗೋನದ (ಜ್ಞಾನದ) ವೃಕ್ಷದ ರೂಪದಲ್ಲಿ ಇಲ್ಲಿಯೇ ಇರುತ್ತವೆ ಎಂದು ಹೇಳಿ ಅದೃಶ್ಯರಾದ ಪುಣ್ಯಸ್ಥಳ.

ಇಂದಿಗೂ ಗೋನದ ( ಜ್ಞಾನದ) ವೃಕ್ಷದ ರೂಪದಲ್ಲಿ ನೆಲಸಿ ಪ್ರತಿವರ್ಷ ಮಾರ್ಗಶಿರ ಅಮಾವಾಸ್ಯೆಯಂದು ಅವರ ಪೂರ್ವಾಶ್ರಮದ ವಂಶಸ್ಥರಿಂದ ವೈಭವಯುತವಾಗಿ, ಸಾವಿರಾರು ಭಕ್ತ ಸಮೂಹದೊಂದಿಗೆ ಆರಾಧನಾ ಮಹೋತ್ಸವ ಸೇವೆ ಕೈಗೊಳ್ಳುತ್ತಾ ಭಕ್ತರನ್ನು ಉದ್ಧರಿಸುತ್ತಿರುವರು.

ರಾಯಚೂರಿನಿಂದ ಕೇವಲ 30 ಕಿ.ಮೀ. (ಶಕ್ತಿನಗರ-ಕಾಡ್ಲೂರು ಮಾರ್ಗವಾಗಿ) ದೂರವಿದ್ದರೂ ಕೃಷ್ಣ ಮತ್ತು ಭೀಮಾ ನದಿಗಳು ಆವೃತ್ತಗೊಂಡು ಶ್ವೇತ ದ್ವೀಪ ಸದೃಶದಂತೆ ನಡುಗೆಡ್ಡೆಯಾಗಿರುವುದರಿಂದ ಈ ಕ್ಷೇತ್ರದ ದರ್ಶನ ಕಷ್ಟ ಸಾಧ್ಯ. ಆದರೂ ಅವರ ಆರಾಧನಾ ಮಹೋತ್ಸವದಲ್ಲಿ ಅವರ ಸೇವೆ ಮಾಡಲು ಸಹಸ್ರಾರು ಭಕ್ತರು ಅಲ್ಲಿಗೆ ಬರುವುದು ಜಿತಾಮಿತ್ರತೀರ್ಥರ ಮಹಿಮೆಯೇ ಸರಿ. ಶ್ರೀ ಜಿತಾಮಿತ್ರರ ಪೂರ್ವಾಶ್ರಮದ ಮನೆ ಗುಲ್ಬರ್ಗಾ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಚಿಕ್ಕಗ್ರಾಮ "ಶಿವಪುರ" ದಲ್ಲಿದ್ದು ಅಲ್ಲಿ ಅವರ ವಂಶೀಕರು ಇಂದಿಗೂ ವಾಸವಾಗಿದ್ದಾರೆ.

### ಶ್ರೀ ಜಿತಾಮಿತ್ರತೀರ್ಥರು

ಇವರು ಶ್ಯಾನಭೋಗರು.ಗುಲ್ಬರ್ಗಾ ಜಿಲ್ಲೆಯ ಶಹಪೂರ ತಾಲೂಕಿಗೆ ಸೇರಿದ ಕೃಷ್ಣಾ-ಭೀಮಾ ಸಂಗಮ ಕ್ಷೇತ್ರಕ್ಕೆ ಪಶ್ಚಿಮ ಭಾಗದಲ್ಲಿ ನಾಲ್ಕು ಮೈಲಿನ ಮೇಲೆ ಕೃಷ್ಣಾ ತೀರದಲ್ಲಿ ಇರುವ ಶಿವಪುರವೆಂಬ ಗ್ರಾಮದವರು. ಬಾಲ್ಯದಲ್ಲಿಯೇ ಪಿತೃವಿಯೋಗ ಉಳ್ಳವರಾಗಿದ್ದರು.ತಮ್ಮ ಅಕ್ಕ ಮತ್ತು ತಾಯಿಯ ಸಹಾಯದಿಂದ ಸುಖವಾಗಿ ಕೃಷಿ ಜೀವನ ಮಾಡಿಕೊಂಡು ಇದ್ದರು. ಇವರಿಗೆ ಗರ್ಭಾಷ್ಟಮದ ವಯಸ್ಸಿನಲ್ಲೇ ಉಪನಯನವಾಯಿತು.'ಉಂಬುವದಾರ' ಎಂಬ ಜನಿವಾರಕ್ಕೆ ಹಾಸ್ಯಕ್ಕಾಗಿ ಹೇಳಿದ್ದನ್ನು ಅದನ್ನೇ ಸ್ಥಿರವೆಂದು ನಂಬಿ ಊಟದ ಕಾಲಕ್ಕೆ ಮಾತ್ರ ಜನಿವಾರ ಹಾಕಿಕೊಂಡು ಉಳಿದ ಕಾಲಕ್ಕೆ ಗೂಟಕ್ಕೆ ತಗಲಿ ಹಾಕುತ್ತಿದ್ದರಂತೆ. ತಮ್ಮ ಶಿಷ್ಯರಿಂದ ಈ ಪರಿ ಆಚರಿಸತಕ್ಕದ್ದನ್ನು ಜ್ಞಾನದೃಷ್ಟಿಯಿಂದ ಅರಿತು ಶ್ರೀ ವಿಭುದೇಂದ್ರರು ಇವರಿಗೆ ಪರಮ ಅನುಗ್ರಹ ಮಾಡಲೋಸುಗವೇ ಸಂಚಾರ ಮಾಡುತ್ತಾ ಇವರಲ್ಲಿಗೆ ಬಂದು ಯಜ್ಞೋಪವೀತ ಸಂಸ್ಕಾರದ ಮಹಿಮೆಯನ್ನು ಉಪದೇಶಿಸಿ ಮತ್ತು ಶ್ರೀ ಲಕ್ಷ್ಮೀನರಸಿಂಹದೇವರ ಕರಾಳ ವದನದ ಶಾಲಿಗ್ರಾಮವನ್ನು ಅನುಗ್ರಹಿಸಿ ನಿತ್ಯ ಪೂಜಿಸಿ, ಕಡಲೆಹೂರಣಗಳನ್ನು ಉಣಿಸುವುದಕ್ಕೆ ಹೇಳಿ ಶ್ರೀಗುರುಗಳು ಕಾಶೀಯಾತ್ರೆಗೆ ದಿಗ್ವಿಜಯ ಮಾಡಿದರು.ಮುಂದೆ ಕೆಲವು ಕಾಲದ ನಂತರ ಗುರುಗಳ ವಚನಾನುಸಾರ ಶ್ರೀಹರಿಗೆ ಭೋಜನ ಮಾಡಿಸಿದ ಮಹಾನುಭಾವರು.8-10 ವರ್ಷಗಳ ನಂತರ ಪುನಃ ಶ್ರೀವಿಭುದೇಂದ್ರತೀರ್ಥರು ಬಿಜಯಂಗೈದರು. ಭಗವದನುಗ್ರಹಕ್ಕೆ ಪಾತ್ರರಾದದ್ದನ್ನು ಪರಮಾನಂದಭರಿತರಾಗಿ ನೋಡಿ ಅವರಿಗೆ ಯತ್ಯಾಶ್ರಮವನ್ನು ದಯಪಾಲಿಸಿ ಶ್ರೀ ಜಿತಾಮಿತ್ರರೆಂದು ನಾಮಕರಣ ಮಾಡಿ ಸಂಸ್ಥಾನದ ಪೀಠದಲ್ಲಿ ಪಟ್ಟಾಭಿಷಕ್ತರಾಗಿ ಮಾಡಿದರು. ಶ್ರೀ ಗುರುಗಳು ಪಾಠಪ್ರವಚನಾದಿಗಳನ್ನು ಮಾಡುತ್ತ ಪರಮ ಹಂಸೇತ್ಯಾದಿ ಬಿರುದಿನಿಂದ ಪ್ರಖ್ಯಾತರಾಗಿ ಅನೇಕ ಮಹಿಮೆಗಳನ್ನು ತೋರಿಸಿ ಪಾಮರ ಜನರನ್ನು ಉದ್ಧರಿಸಿದ್ದಾರೆ. ಮಾರ್ಗಶಿರ ಅಮಾವಾಸ್ಯೆ ದಿವಸ ಸೋಮವಾರ ವೃಕ್ಷರೂಪದಲ್ಲಿ ಅದೃಶ್ಯರಾದರು. ಈಗಲೂ ಶಿವಪೂರದಲ್ಲಿ ಕೃಷ್ಣಾತೀರದ ಆ ಗೋನವೃಕ್ಷಕ್ಕೆ ಪೂಜಾರಾಧನೆ ಮಹೋತ್ಸವಗಳು ನಡೆಯುತ್ತಾ ಬಂದಿವೆ.

ರಾಮಾವತಾರದ ವೇಳೆಗೆ ಭಗವಂತ ಅನೇಕ ರೂಪಗಳಲ್ಲಿ ಬಂದು ಜಗತ್ತನ್ನು ಚೊಕ್ಕಟ ಮಾಡಿದ್ದ ಮುಂದೆ ಒಬ್ಬ ಮಹನೀಯ ಅವತರಿಸುತ್ತಾರೆ ಎಂದು ತಿಳಿದ ಆಚಾರ್ಯರು ಅನೇಕ ಮಹೋನ್ನತರನ್ನು ಸರ್ವಜ್ಞ ಪೀಠದಲ್ಲಿ ವಿರಾಜಿಸುವಂತೆ ಮಾಡಿ ಪ್ರಕಾಶಗೊಳಿಸಿದ್ದರು. ಅಗ್ನಿಹಾಳಿನ ಅನಂತಪ್ಪ ಜಡಭರತನಂತೆ ಒಳಗೆ ಅಪಾರ ಜ್ಞಾನವಿದ್ದರೂ ಸಹತೋರ್ಪಡಿಸಿಕೊಳ್ಳದೆ ದನವನ್ನು ಮೇಯಿಸಿಕೊಂಡಿದ್ದರು.ಐಹಿಕದಲ್ಲಿ ಯಾವುದರಲ್ಲಿಯೂ ನಂಬಿಕೆ ಇಲ್ಲದ ಅನಂತಪ್ಪ ಜನಿವಾರವನ್ನು ಊಟದ ಕಾಲದಲ್ಲಿ ಮಾತ್ರ ಬಳಸಿ ಬಾಕಿಯ ವೇಳೆಯಲ್ಲಿ ಗೂಟಕ್ಕೆ ನೇತು ಹಾಕುತ್ತಿದ್ದರು.ಅದೇ ವೇಳೆಯಲ್ಲಿ ಅಲ್ಲಿಗೆ ಆಗಮಿಸಿದ ವಿಭುದೇಂದ್ರ ತೀರ್ಥರು ಅನಂತಪ್ಪನ ಅಂತರಂಗ ಜ್ಞಾನಾಗ್ನಿಯನ್ನು ನೋಡಿ ಅವನಿಗೆ ಸಂಧ್ಯಾವಂದನೆ ಮಾಡುವ ವಿಧಾನವನ್ನು ತಿಳಿಸಿ, ನರಸಿಂಹ ಸಾಲಿಗ್ರಾಮವನ್ನು ಕೊಟ್ಟು ನಿತ್ಯವು ಅನ್ನವನ್ನು ನೈವೇದ್ಯ ಮಾಡುವಂತೆ ತಿಳಿಸಿ ನಾನು ಪುನಃ ಬರುವ ವೇಳೆಗೆ ನೀನು ಇದೆಲ್ಲವನ್ನು ಚೆನ್ನಾಗಿ ಅಭ್ಯಾಸ ಮಾಡಿರಬೇಕೆಂದು ತಿಳಿಸಿ ಅಲ್ಲಿಂದ ತೆರಳಿದರು. ಗುರುವಿನ ಅಣತಿಯಂತೆ ಅನಂತಪ್ಪ ಸಂಧ್ಯಾವಂದನೆ ಮಾಡಿ ನರಸಿಂಹನಿಗೆ ನೈವೇದ್ಯ ಮಾಡಿದಾಗ ನರಸಿಂಹ ಸಾಲಿಗ್ರಾಮವು ನೈವೇದ್ಯವನ್ನು ಸ್ವಯಂ ಸ್ವೀಕರಿಸಿತು ಮತ್ತೆ ಗುರುಗಳು ಪುನಃ ಅಲ್ಲಿಗೆ ಬಂದಾಗ ಇದನ್ನು ನೋಡಿ ಅವನ ಭಕ್ತಿಗೆ ಮಾರುಹೋಗಿ ಮಹಾಸಂಸ್ಥಾನಕ್ಕೆ ಜಿತಾಮಿತ್ರರೆಂದು ನಾಮಕರಣ ಮಾಡಿ ಸ್ವೀಕರಿಸಿದರು.



# ಕೃಷ್ಣ ಕಥೆಯನ್ನು ನುಡಿದ ಕುಮಾರವ್ಯಾಸ


- ಡಾ॥ ಪ್ರದೀಪ ಕುಮಾರ್‌ಹೆಬ್ರಿ

98440 18457


ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿ ಜನಕ್ಕೆ ಬುದ್ಧಿ ಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣಿತಕಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ॥

ಎಂದೇ ತನ್ನ ಕಾವ್ಯದ ಹಿರಿಮೆಗರಿಮೆಗಳನ್ನು ಸೊಗಸಾಗಿ ಚಿತ್ರಿರಿಸಿದವನೇ ಕುಮಾರವ್ಯಾಸ ಹದಿನೈದನೇ ಶತಮಾನದ ಉತ್ತರಾರ್ಧದಲ್ಲಿದ್ದು ಇಂದಿಗೂ ಜನಪ್ರಿಯವಾಗಿರುವ ಗದುಗಿನ ಭಾರತ ಅಥವಾ ಕರ್ಣಾಟಭಾರತ ಕಥಾ ಮಂಜರಿಯನ್ನು ರಚಿಸಿದ ಮಹಾಕವಿ ಕುಮಾರವ್ಯಾಸ. ಈತ ಉನ್ನತೋನ್ನತರೆನ್ನ ಬಹುದಾದ ಕನ್ನಡದ ಬೆರಳೆಣಿಕೆಯ ಮಹಾ ಕವಿಗಳಲ್ಲೊಬ್ಬ.

ಕುಮಾರವ್ಯಾಸನ ಊರು, ಮನೆತನದ ಹಿನ್ನೆಲೆ ಹೀಗಿದೆಯೆಂಬುದು ಅನೇಕ ವಿದ್ವಾಂಸರ ಅಭಿಮತ. ಗದುಗಿನ ಹತ್ತಿರವಿರುವ ಕೋಳಿವಾಡ ಈತನ ಊರು. ಇವನು ಕೋಳಿವಾಡದ ಗೌಡರ ಅಥವಾ ಶಾನುಭೋಗರ ಕುಲಕ್ಕೆ ಸೇರಿದವನು. ಕೋಳಿವಾಡದ ಗೌಡರ ಮೂಲಪುರುಷ ಚಿನ್ನದ ಕೈ ಮಾಧವರಸ. ಇವನ ಮಗ ತಿರುಮಲಯ್ಯ. ಇವನ ಮಗ ಲಕ್ಕರಸಯ್ಯ. ಲಕ್ಕರ ಸಯ್ಯನನ್ನು ಲಕ್ಷ್ಮಣಸೇವ ಎಂದೂ ಕರೆಯುತ್ತಿದ್ದರು. ಈತ ವಿಜಯನಗರದ ಒಂದನೆಯ ದೇವರಾಯ (ಕ್ರಿ.ಶ. 1406 - 1422) ನಲ್ಲಿ ಮಂತ್ರಿಯಾಗಿದ್ದು ಆ ದೊರೆಯ ಮರಣಾನಂತರ 1424 ರಲ್ಲಿ ಲಕ್ಕರಸಯ್ಯ ತನ್ನ ಇನಾಮಾದ ಕುರ್ತುಕೋಟೆ ಕೋಳಿವಾಡಕ್ಕೆ ಹಿಂತಿರುಗಿ ಅಲ್ಲಿ ನೆಲೆಸಿದ. ಇವನಿಗೆ ಐದು ಜನ ಗಂಡು ಮಕ್ಕಳು. ಹಿರಿಯವನೇ ವೀರನಾರಾಯಣ. ಇವನೇ ಕವಿನಾರಣಪ್ಪ ಅಂದರೆ ನಮ್ಮ ಕುಮಾರವ್ಯಾಸ. ಶ್ಯಾನುಭೋಗ ವಂಶಸ್ಥನೆನ್ನುವುದು ನಿರ್ವಿವಾದ.

ಗದುಗಿನ ನಾರಣಪ್ಪ ಕುಲಕ್ರಮಾಗತವಾದ ಕರಣಿಕ ವೃತ್ತಿಯಲ್ಲಿದ್ದ ಆದರೆ ಯಾವುದೇ ರಾಜನನ್ನಾಗಲಿ, ಶ್ರೀಮಂತನನ್ನಾಗಲಿ ಆಶ್ರಯಿಸಿರಲಿಲ್ಲ. ನಾರಣಪ್ಪನ ದೈವ ಭಕ್ತಿಯ ದರ್ಪ, ಆತ್ಮವಿಶ್ವಾಸದ ಕೆಚ್ಚು ಅಸದಳ ಈಗಲೂ ಗದುಗಿನ ವೀರನಾರಾಯಣನ ಗುಡಿಯ ಪ್ರಾಕಾರದಲ್ಲಿ ಒಂದು ಕಂಬದ ಮುಂದಿನ ಜಾಗನಾರಣಪ್ಪ ಗದುಗಿನ ಭಾರತವನ್ನು ಬರೆದ ಸ್ಥಳವೆಂದು ಪವಿತ್ರಸ್ಮಾರಕವಾಗಿದೆ.

ನಾರಣಪ್ಪನ ಕಾಲ ಯಾವುದೆಂಬುದು ನಿಶ್ಚಿತವಾಗಿ ತಿಳಿದಿಲ್ಲ. ಆದರೆ ೧೫೧೦ ಕ್ಕಿಂತ ಹಿಂದೆ ಎಂಬುದಾಗಿ ಭಾವಿಸಿದ್ದಾರೆ. ಆದರೆ ಇವನ ಹೆಸರು ಹರಿಹರ, ರಾಘವಾಂಕ, ಕೆರೆಯ ಪದ್ಮಾಸರ ಜೊತೆಯಲ್ಲಿ ಬರುವುದರಿಂದ ಅವರ ಸಮಕಾಲೀನನೆಂದು ಕೆಲವರು ಊಹಿಸಿದ್ದಾರೆ. ಹಲವಾರು ಕಪೋಲಕಲ್ಪಿತ ಕಥೆಗಳೂ ಕುಮಾರವ್ಯಾಸನಿಗೆ ಸಂಬಂಧಿಸಿದಂತೆ ಇವೆ.ಇದು 11 ರಿಂದ 17ನೇ ಶತಮಾನದವರೆಗೂ ಹರಿದಾಡುತ್ತದೆ.ಆದರೆ ಹದಿನೇಳನೇ ಶತಮಾನದ ಹೊತ್ತಿಗೆ ನಾರಣಪ್ಪನ ಭಾರತಕ್ಕೆ ಕರ್ನಾಟಕದಲ್ಲಿ ಬಹಳ ಜನಪ್ರಿಯತೆ ಇತ್ತು, ಎಲ್ಲರಿಗೂ ಆಪ್ಯಾಯಮಾನವಾಗಿತ್ತು, ಗಮಕಿಗಳು ಪ್ರೀತಿಯಿಂದ ವಾಚಿಸುತ್ತಿದ್ದರು. ಕುಮಾರವ್ಯಾಸ ಭಾರತವನ್ನು ಕೇಳದವರಾರೂ ಇಲ್ಲ ಎಂಬಂತೆ ಗುರು ಮನೆಯಿಂದ ಅರಮನೆಯವರೆಗೂ ವ್ಯಾಪಿಸಿತ್ತು.




ಬೇರೆ ಬೇರೆ ಕಾಲಮಾಪನದಿಂದ ಕ್ರಿ.ಶ. 1430ರ ಸುಮಾರು ನಾರಣಪ್ಪ ಬದುಕಿದ್ದ ಅವಧಿಯೆಂದು ಬಹುತೇಕರೀಗ ತೀರ್ಮಾನಕ್ಕೆ ಬಂದಿದ್ದಾರೆ.ಇದರಂತೆಯೇ ಕುಮಾರವ್ಯಾಸನ ಪಾಂಡಿತ್ಯದ ವಿಚಾರವಾಗಿಯೂ ಎರಡು ಉಪಾಖ್ಯಾನಗಳಿವೆ. ಆದರೆ ನಾವಿದನ್ನು ಲಕ್ಷಿಸಬೇಕೆಂದೇನೂ ಇಲ್ಲ. ಕುಮಾರವ್ಯಾಸನ ಕಾವ್ಯವನ್ನು ಗಮನಿಸುವಾಗ ಸ್ಪಷ್ಟವಾಗುವ ವಿಷಯವಿದು. ನಾರಣಪ್ಪ ಘನ ವಿದ್ವಾಂಸ, ಸಂಸ್ಕೃತ ಮಹಾಭಾರತವನ್ನು ಅಮೂಲಾಗ್ರವಾಗಿ ಪಠಿಸಿದ್ದ ಶಾಸ್ತ್ರ, ಸಂಗೀತ, ಜ್ಯೋತಿಷ್ಯ, ಸ್ಮೃತಿ, ಪುರಾಣ ಮರಾಠೀ ಸಾಹಿತ್ಯ, ಭಾಸವೇಣೀ ಸಂಹಾರಾದಿ ಸಂಸ್ಕೃತ ಸಾಹಿತ್ಯ, ಪಂಪಭಾರತ, ಲಕ್ಷಣ ಗ್ರಂಥ,ನಿಘಂಟುಗಳು ಅವನ ನಾಲಗೆಯ ತುದಿಯಲ್ಲಿದ್ದವು. ಕುಮಾರವ್ಯಾಸ ನಿಜಕ್ಕೂ ಸಹಜ ಪ್ರತಿಭಾವಂತ ಅನುಭಾವಿ. ಆತ ಖಚಿತವಾಗಿ ಕವಿಪುಂಗವ.


**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ


**ಕುಮಾರವ್ಯಾಸ ಭಾರತದ ಮೊದಲ ಪದ್ಯವಿದು**

ಶ್ರೀವನಿತೆಯರಸನೆ ವಿಮಲ ರಾ
ಜೀವಪೀಠನೆ ಪಿತನೆ ಜಗತತಿ
ಪಾವನನೆ ಸನಕಾದಿ ಸಜ್ಜನನಿಕರದಾತಾರ
ರಾವಣಾಸುರ ಮಥನ ಶ್ರವಣಸು
ಧಾವಿನೂತನ ಕಥನ ಕಾರಣ
ಕಾವುದಾನತಜನವ ಗದುವಿನ ವೀರನಾರಾಯಣ

ಕುಮಾರವ್ಯಾಸನ ಈ ಮಾತುಗಳನ್ನು ಗಮನಿಸಬೇಕು. ಇವು ಕವಿಯ ಕಾವ್ಯಧೀಮಂತಿಕೆಯನ್ನು ನಿರೂಪಿಸುತ್ತದೆ.

ವೀರನಾರಾಯಣನೇ ಕವಿ ಕುಮಾರವ್ಯಾಸ ಬಲಿಯ ಅಪಿಕಾರ. ಇದನ್ನು ಕೇಳುವ ಪಂಡಿತರು ಸನಕಾದಿ ಋಷಿಗಳು. ಓಡಾಡುವ ಜನಾರ್ದನರು. ಇದು ಮನೋಹರವಾದ ಕವಿತೆ ಮಾತ್ರವಲ್ಲ ವಿಚಾರ ಮಾಡತೊಡಗಿದರೆ ಆ ವಿಚಾರದ ಆಳವಿಗೆ ಮೀರಿದ್ದು. ಇತ್ತ ಕಡೆ ಮನಸ್ಸು ಕೊಡಿ. ಸರ್ವಜ್ಞರಾದವರೇ, ನನ್ನ ಚಿನ್ನಪವಾಲಿಸಿ ವೀರನಾರಾಯಣನ ಕಿಂಕರನಾದ ನನಗೆ ಈ ಅಗ್ಗಳಿಕೆಯುಂಟು; ಹಲಗೆ ಬಳಪಗಳನ್ನು ಹಿಡಿದು ಕರಡು ಬರೆಯುವುದಿಲ್ಲ. ಒಮ್ಮೆ ಇಟ್ಟ ಪದವನ್ನು ಅಳಿಸುವುದಿಲ್ಲ. ಬೇರೆ ಯವರ ನಿರೂಪಣೆಯ ರೀತಿಯನ್ನು ಎತ್ತಿಕೊಳ್ಳುವುದಿಲ್ಲ. ಬರೆಯ ತೊಡಗಿದಾಗ ಕಂಠಪತ್ರದ ಸದ್ದು ನಿಲಗೊಡುವುದಿಲ್ಲ. ಈ ಬಲುಹು ಗದುಗಿನ ವೀರನಾರಾಯಣನ ಕಿಂಕರನಿಗೆ ಸಹಜವಾಗಿದೆ.ಭಾವುಕರೂ, ಪಂಡಿತರೂ ಸುಜನರೂ ಸೂಕ್ತಿ ಕಾರರೂ ಈ ಕೃತಿಯನ್ನು ಅವಧರಿಸಬೇಕು. ಕವಿಯ ಮತಿಗೆ ಮಂಗಳವನ್ನು ಕೊಡಬೇಕು.ಅಧಿಕರಾದವರು ಕೃತಿಯ ವಿಷಯಗಳನ್ನು ವಿಮರ್ಶಿಸಿ ವಿಚಾರ ಮಾಡಬೇಕು. ತಪ್ಪುತಿದ್ದ ಬೇಕು, ಒಪ್ಪುಗಳನ್ನು ಎತ್ತಿ ಹೇಳಿ ಲೇಸು ಮರೆಯಬೇಕು. ಹೀಗೆ ಗುಣ ಸಂಪನ್ನರು ವೀರನಾರಾಯಣನ ಕಿಂಕರನಿಗೆ ಬುದ್ಧಿಯನ್ನು ದಯಪಾಲಿಸಬೇಕು...

ಕುಮಾರವ್ಯಾಸನ ಅಭಿಪ್ರಾಯದಲ್ಲಿ ಭಾರತ ಕೃಷ್ಣಚರಿತ್ರೆ, ಶ್ರೀಕೃಷ್ಣನೇ ಕಥಾನಾಯಕ.ಅವನು ಭಗವಂತ, ನಾರಾಯಣನ ಅವತಾರ, ಸರ್ವಪ್ರೇರಕ ಭಗವತ್ಪ್ರೇರಣೆಯನ್ನು ಸರಿಯಾಗಿ ಅರ್ಥಮಾಡಿಕೊಂಡು,ಭಗವದಿಚ್ಛೆಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಯಾವ ಅತಿಗೂ ಹೋಗದೆ, ತನ್ನ ಪಾಲಿನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದವನು ನರೋತ್ತಮ ನಾದ 'ನರ' ಅರ್ಜುನ! ಈ ಕೃಷ್ಣಾರ್ಜುನರು ನರ-ನಾರಾ ಯಣರು ನಮಗೆ ಮಾರ್ಗದರ್ಶಕರು. ಆರಾಧ್ಯರು "ಸತ್ಪ್ರೇರಣೆ ಅದನ್ನು ಕಾರ್ಯರೂಪಕ್ಕೆ ತರುವ ಪುರುಷಾಕಾರ . ಈ ಎರಡಂಶ ಗಳೂ ಸಮ್ಮಿಳಿತವಾದಾಗ ನಮಗೆ ಸಮಸ್ತ ಸನ್ಮಂಗಳಗಳೂ ಒದಗಿಬರುತ್ತವೆ ಎಂಬ ಪರಮಸತ್ಯ ಸದಾ ನಮ್ಮ ನೆನಪಿ ನಲ್ಲಿರಬೇಕು.

'ಕುಮಾರವ್ಯಾಸ ಭಾರತ ಮೂರು ಮುಖ್ಯ ಕಾರಣ ಗಳಿಂದ ಜನಮನವನ್ನು ಸೂರೆಗೊಂಡಿದೆ. 1.ಅದನ್ನು ಓದು ತ್ತಿದ್ದಂತೆ, ಕೇಳುತ್ತಿದ್ದಂತೆ ಅರ್ಥವಾಗುತ್ತದೆ. 2. ವಿಸ್ತಾರವಾಗಿ ಒಂದು ಕಥೆಯನ್ನು ಹೇಳುವಲ್ಲಿ ಅದು ಮತ್ತೆ ಮತ್ತೆ ರಸಸ್ಥಾನ ಗಳನ್ನು ಮುಟ್ಟುತ್ತದೆ. 3. ಇದು ಜನರ ಮನೋಧರ್ಮದ ಹಲವು ಮುಖಗಳನ್ನು ಪ್ರತಿಬಿಂಬಿಸುತ್ತದೆ.

ಕುಮಾರವ್ಯಾಸ ಭಾರತ ಸುಲಭವಾಗಿ ಅರ್ಥವಾಗು ವುದಕ್ಕೆ ಕಾರಣ ಅದು ಷಟ್ಪದಿಯಲ್ಲಿರುವುದು. ಬಳಕೆಯ ಭಾಷೆಯಲ್ಲಿರುವುದು ಈ ಕಾವ್ಯದಲ್ಲಿ ಹರಿದಿರುವ ಕೃಷ್ಣಭಕ್ತಿ ಇದು ಮತ್ತಷ್ಟು ಜನಪ್ರಿಯವಾಗಲು ಕಾರಣವಾಯಿತು. ಕುಮಾರವ್ಯಾಸನ ಭಕ್ತಿ ಅವನ ಕಾವ್ಯದಲ್ಲಿ ಹೊನಲಾಗಿ ಹರಿ ದಾಗ ಜನರು ಆ ಭಕ್ತಿ ತಮ್ಮ ಹೃದಯವನ್ನು ತುಂಬಿರುವ ಭಕ್ತಿ ಎಂದು ಗುರುತಿಸಿದರು. ಕುಮಾರವ್ಯಾಸನ ಮಾತುಗಳಲ್ಲಿ ತಮ್ಮ ಅರಿತೂ ಆಡಲಾಗದ ಮಾತುಗಳನ್ನೂ ಕಂಡರು. ಕವಿಯ ಕೃತಿ ಜನರ ದೆಯ ಪ್ರತಿಬಿಂಬವಾಯಿತು.ಜನರ ಸಂವೇದನೆಯನ್ನು ಪ್ರಕಟಿಸುವ ನಾಲಗೆ ಕುಮಾರವ್ಯಾಸನಾದ.ಈ ಕಾವ್ಯದಲ್ಲಿ ಕೃಷ್ಣಭಕ್ತಿ ಶಿವ ಭಕ್ತಿ ಎರಡೂ ಪ್ರಮುಖ ಸ್ಥಾನ ಪಡೆಯಿತು.

ಮಹಾಭಾರತವನ್ನು ಸಂಗ್ರಹಿಸುವಲ್ಲಿ ಕವಿ ಮುಖ್ಯವಾಗಿ ಮೂಲ ಭಾರತದ ಕಥೆಯನ್ನು ಜೊತೆಗೆ ಕೃಷ್ಣನ ಮಹಿಮೆಯನ್ನು ಪ್ರಕಟಿಸುವ ಪ್ರಸಂಗಗಳನ್ನು ಎತ್ತಿಕೊಂಡಿದ್ದಾನೆ. ಕುಮಾರ ವ್ಯಾಸ ಭಾರತದಲ್ಲಿ ಕವಿ ದ್ರೌಪದಿ ಸ್ವಯಂವರ, ಅರ್ಜುನನ ಪಾಶುಪತಾಸ್ತ್ರ, ಉತ್ತರ ಪ್ರತಾಪ, ಅಭಿಮನ್ಯುವಿನ ವಿವಾಹ ಮೊದಲಾದುವು ಮಹಾಕಾರ್ಯ ವರ್ಣಿಸಿದ್ದಾನೆ. ಕೃಷ್ಣ ಭಕ್ತಿ ಯನ್ನು ಪ್ರಕಟಿಸಲು ಶಿಶುಪಾಲವಧೆ, ದ್ರೌಪದೀ ವಸ್ತ್ರಾಪಹರಣ, ಶ್ರೀಕೃಷ್ಣ ಸಂಧಾನ-ಮೊದಲಾದುವುಗಳನ್ನು ಮನೋಜ್ಞವಾಗಿ ಸಿದ್ದಾನೆ.

ಕುಮಾರವ್ಯಾಸನ ಈ ಕಾವ್ಯದಲ್ಲಿ ಭಕ್ತಿ ಮುಖ್ಯ ರಸ ವಾಗಿ ಮತ್ತೆ ಮತ್ತೆ ಮಡುಗಟ್ಟಿ, ಮತ್ತೆ ಮತ್ತೆ ಹೊನಲಾಗಿ ಹರಿಯುತ್ತಿದೆ. ಕುಮಾರವ್ಯಾಸ ಪಂಡಿತರ ಪ್ರಪಂಚವನ್ನು ಬಲ್ಲ ರಸಿಕ ಚೇತನ. ಹಾಗಾಗಿ ಇವನ ದೈವಸ್ತವಗಳಲ್ಲಿ ವೇದ, ಉಪ ನಿಷತ್ತುಗಳ ಉಪದೇಶಕನೆ, ಗಿಣ್ಣು ಜೇನು ಎಂಬಂತೆ ಸಿಹಿ ಯಾಗುತ್ತದೆ. ವಿಸ್ತಾರವೇ ಈ ಸ್ತವಗಳ ಹೃದಯ ಶ್ರೀಕೃಷ್ಣನನ್ನು ಮುಖ್ಯ ಮೂರ್ತಿಯಾಗಿ ನಿಲ್ಲಿಸಿ ಕವಿ ಅವನ ಸುತ್ತ ಭೀಷ್ಮ, ಯುಧಿಷ್ಠರ, ಭೀಮ, ಅರ್ಜುನ ಧೃತರಾಷ್ಟ್ರ, ದುರ್ಯೋಧನ, ಶಕುನಿ, ಕರ್ಣ, ವಿದುರ, ಕುಂತಿ, ಗಾಂಧಾರಿ, ದ್ರೌಪದಿ ಮೊದಲಾ ದವರನ್ನು ನಿಲ್ಲಿಸಿದ್ದಾನೆ. ಇವರೆಲ್ಲರೂ ಕೃಷ್ಣನೇ ಶಿಲ್ಪಿಸಿದ

ಮೂರ್ತಿಗಳು ಎಲ್ಲರೂ ಸಹಜವಾಗಿ ಸ್ವತಂತ್ರವಾಗಿ ವರ್ತಿಸುತ್ತಾರೆ. ಕುಮಾರವ್ಯಾಸನ ಶ್ರೀಕೃಷ್ಣ ವಾತ್ಸಲ್ಯವೇ ಎರಕವಾದ ದಿವ್ಯಮಂಗಳ ಮೂರ್ತಿ.

**ಕುಮಾರವ್ಯಾಸನಿಗೆ ತನ್ನ ಕಾವ್ಯ ಕೃಷ್ಣ ಕಥೆ ಮಾತ್ರ:**

ತಿಳಿಯ ಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿಕೆ
ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ...

ಎಂಬ ಮಾತು ಕವಿಯ ಕೃಷ್ಣ ಭಕ್ತಿಯನ್ನು ಸಾದರ ಪಡಿಸಿದೆ. ಕವಿ ತನಗಿರುವ ಕೃಷ್ಣ ಭಕ್ತಿಯನ್ನು ಸಂದರ್ಭ ದೊರೆತಾಗಲೆಲ್ಲ ಮನದಣಿಯೆ ಹಾಡಿ ತೊಡಿಕೊಂಡಿದ್ದಾನೆ. ಬೇರೆ ಬೇರೆ ಪಾತ್ರಗಳ ಮೂಲಕ ನಿರೂಪಿಸಿದ್ದಾನೆ. ಕವಿಯ ಕಣ್ಣಲ್ಲಿ 'ಮಹಾಭಾರತ'ವು 'ಪಂಚಮಶ್ರುತಿ' ಪದುಮನಾಭನ ಮಹಿಮೆಯ ಗದುಗಿನ ಭಾರತದ ಹಿರಿಮೆ.

'ಗದುಗಿನ ಭಾರತ' ದ ಮೂಲಕ ಕುಮಾರವ್ಯಾಸ 'ಕಾವ್ಯಕ್ಕೆಗುರು' ಎನಿಸಿದ. ಇದಕ್ಕವನ ಕೃಷ್ಣಭಕ್ತಿಯ ಪಾರಮ್ಯವೂ ಕಾರಣವಾಗಿರಬಹುದು. ಭಕ್ತಿರಸವನ್ನು ಪೋಷಿಸಿದ ಕನ್ನಡ ಭಾಗವತ ಕವಿಗಳಲ್ಲಿ 'ಶುಕರೂಪ' ನೆನಿಸಿದ ಕುಮಾರವ್ಯಾಸನು ಅಗ್ರಗಣ್ಯ. ಕುಮಾರವ್ಯಾಸನ ಕೃಷ್ಣಭಕ್ತಿ ದುರ್ಯೋಧನನ ಮೂಲಕ ವ್ಯಕ್ತವಾದ ಬಗೆಯಿದು.

"ಎನ್ನ ಹೃದಯದಲಿರ್ದು ಮುರಿವನು
ಗನ್ನದಲಿ ಸಂಧಿಯನು ರಿಪುಗಳೊ
ಳಿನ್ನು ತನ್ನನವ ರೊಳಗೆಯಿರ್ದಾ ನುಡಿವ ನೀ ಹದನ
ಭಿನ್ನನಂತಿರೆ ತೋರಿ ಭಿನ್ನ
ಭಿನ್ನವೆನಿಸಿಯೆ ಮೆರೆವ ತಿಳಿಯಲ
ಭಿನ್ನನೈ ಮುರವೈರಿ ನಾನಿನ್ನಂಜಬೇಕೆಂದ॥"

ಉದ್ಯೋಗಪರ್ವದ ೯ನೇ ಸಂಧಿಯ, 20ನೇ ಪದ್ಯ ವಿದು:

"ಸಂಗಿಯೆನಿಸನು ಜಗವ ಹುಟ್ಟಿ
ನುಂಗಿದೊಡೆ ನಿಷ್ಕರುಣಿಯೆನಿಸನು
ಅಂಗರಕ್ಷೆಯ ಮಾಡಿ ಮೋಡಿತನಲ್ಲ ಮೋಜಗಕ್ಕೆ
ಜಂಗಮ ಸ್ಥಾವರಕೆ ಚೈತ
ನ್ಯಾಂಗ ರಕ್ಷನು ಘನಕೆ ಘನುಅಣು
ವಿಂಗೆ ತಾನಣುವೆನಿಪ ಪರತರವಸ್ತು ನೋಡಿತ॥

ಅಂದರೆ ಕೃಷ್ಣನೇ ಪರಾತ್ಮರ ವಸ್ತು. ಕೃಷ್ಣನೆ ಪರಮಾತ್ಮ. ಕೃಷ್ಣನೆ ಸರ್ವಜೀವಚೇಷ್ಟಕ. ಕೃಷ್ಣನೆ ಪುರುಷೋತ್ತಮನು.

ಕದನದಲಿ ಕೈಯಾರೆ ದೈತ್ಯರ
ಸದೆದು ಭೂಭಾರವನು ಪರಪ
ಸ್ತವಲಿ ಕಟ್ಟಿಸಿಕೊಟ್ಟ ಭಾಷೆಯ ನುತ್ತರಾಯೆನಿಸಿ
ನದಿಯ ನಂದನನು ಪರಾನಂ
ದದಲಿ ಸೇರಿಸಿ ಪರಮ ಪರಿತೋ
ಷದಲಿ ಪಯಣವ ಮಾಡಿದನು ಮುರವೈರಿ ನಿಜಪುರಿಗೆ ॥

ಶ್ರೀ ಕೃಷ್ಣನಲ್ಲಿ ಯುಧಿಷ್ಠರನಿಗೆ ಅಪಾರ ಭಕ್ತಿ ಪ್ರೀತಿ. ಇದನ್ನು ಕುಮಾರವ್ಯಾಸ ತನ್ನ ನುಡಿಗಳಲ್ಲಿ ಯುಧಿಷ್ಠಿರನಿಂದ. ಧನುಜರಲಿ, ಕುರುಸೇನೆಯಲ್ಲಿಲಯವೆನಗೆ ಭಾಲಿಯೆ? ನಿಮ್ಮ ಘನಪದವನಜವಿದು ಸೀಸರವಲೆ ತನ್ನುತ್ತಮಾಂಗದಲಿ ಎಂದು ನುಡಿಸಿದ್ದಾನೆ. ಹಾಗೆಯೇ ಭೀಮನು ಅಜಗರನಿಂದ ಬಿಡುಗಡೆ ಹೊಂದಿದಾಗ ಅಪಾಯದ ಜಲಧಿಗಳು ಬತ್ತುವವು ಯದುಕುಲ ತಿಲಕ ವೀರನಾರಾಯಣನ ಕರುಣದಲಿ ಎಂದು ಯುಧಿಷ್ಠಾರ ನುಡಿಯುತ್ತಾನೆ. ಯುದ್ಧ ಪಂಚಕವು ಶ್ರೀ ಕೃಷ್ಣನು ತನ್ನ ಪಂಚಪ್ರಾಣದಂತಿದ್ದ ಪಾಂಡವರ ಬೆನ್ನಿಗೆ ರಕ್ಷೆಯಾಗಿ ನಿಂತು ಕೊಂಡು ಹೆಜ್ಜೆಹೆಜ್ಜೆಗೆ ಅವರನ್ನು ಅಪಾಯದಿಂದ ಉಳಿಸಿ ಗೆಲುವಿನತ್ತ ಮುನ್ನಡೆಸಿದ ಮಹಾಸಾಹಸಕಾರ್ಯಗಳ ಮಹತ್ ಸಂಗ್ರಹವಾಗಿದೆ.

ಕುಮಾರವ್ಯಾಸ ಮಹಾಭಾರತದಿಂದ ದಿವ್ಯದೃಷ್ಟಿಯನ್ನು ಪಡೆದು ತನ್ನ ಒಳಗೆ ಮತ್ತು ಹೊರಗೆ ಅದರ ಮಹಾಶಕ್ತಿಗಳನ್ನು ಕಂಡು ತನ್ನ ಪಾಲಿಗೆ ಬಂದ ಭಾಗ್ಯವನ್ನು ತನ್ನ ಜನಕ್ಕೆ ಹಂಚಿದ ಮಹಾಚೇತನ,ಉದಾತ್ತ ಭಾವುಕ, ಕುಮಾರವ್ಯಾಸ ತನ್ನ ಕಾವ್ಯದಿಂದ ಕನ್ನಡದ ಸಂಸ್ಕೃತಿಯು ಭರತವರ್ಷದ ಯಾವುದೇ ಭಾಗದ ಸಂಸ್ಕೃತಿಗೂ ಸಮವಾಗಿರುವಂಥದ್ದೆಂದು ಸಾರಿ ತೋರಿದ್ದಾನೆ. ಕುಮಾರವ್ಯಾಸ ಲೋಕದ ಸಂಸ್ಕೃತಿ ಈ ವರೆಗೆ ಮುಟ್ಟಿರುವ ಮಹಾಪೂರವೊಂದರ ಎತ್ತರವನ್ನು ಗುರುತಿಸುವ ಸಾಕ್ಷಿ ರೇಖೆಯಾಗಿದ್ದಾನೆ.

ತಿರುಮಲೆ ತಿರುಪತಿ ದೇವಸ್ಥಾನವು ಚರಿತ್ರೆಯಲ್ಲಿಯೇ ಮೊಟ್ಟ ಮೊದಲ ಬಾರಿ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ವೈಕುಂಠದ್ವಾರವನ್ನು 10 ದಿನಗಳವರೆಗೆ ತೆರೆಯಲು ನಿರ್ಧರಿಸಿತು. ವೈಕುಂಠ ಏಕಾದಶಿಯಿಂದ ಜನವರಿ 3 ನೇ ತಾರೀಖಿನವರೆಗೆ ತೆರೆಯಲು ತೀರ್ಮಾನವನ್ನು ತೆಗೆದುಕೊಂಡಿತು. ಪ್ರತಿ ವರ್ಷವು ವೈಕುಂಠ ಏಕಾದಶಿ ಮತ್ತು ದ್ವಾದಶಿಯಂದು ಮಾತ್ರವೇ ತೆರೆಯಲಾಗುತ್ತಿತ್ತು. ಆದರೆ ಈ ಒಂದು ಬಾರಿ ಮಾತ್ರವೇ 10 ದಿನಗಳ ಕಾಲ ವೈಕುಂಠ ದ್ವಾರವನ್ನು ತೆಗೆಯಲಾಯಿತು. ಇದು ಪ್ರಮುಖ 25 ಮಂದಿ ಪೀಠಾಧಿಪತಿಗಳು ಮತ್ತು ಆಗಮ ಸಲಹಾದಾರರೊಂದಿಗೆ ಸಮಾಲೋಚಿಸಿದ ನಂತರವೇ ಈ ನಿರ್ಧಾರವನ್ನು ತೆಗೆದುಕೊಂಡಂತೆ ತಿ.ತಿ.ದೇ. ತಿಳಿಸಿದೆ.



## ಪದಬಂಧ - 11

**ಎಡದಿಂದ ಬಲಕ್ಕೆ**

1.ಮುದಲ್ ತಿರುವಂದಾದಿ
2.ಪೆರುಮಾಳ್ ತಿರುಮೊಷಿ

**ಬಲದಿಂದ ಎಡಕ್ಕೆ**

3.ತಿರುಪ್ಪಾವೈ
4.ತಿರುವಿರುತ್ತಂ

**ಮೇಲಿಂದ ಕೆಳಕ್ಕೆ**

5.ತಿರುಪ್ಪಳ್ಳಿ ಎಳುಚ್ಚಿ
6.ಶಿರಿಯ
7. ಪೆರಿಯ
8.ತಿರುಚ್ಚಂದ ವಿರುತ್ತಂ

**ಕೆಳಗಿನಿಂದ ಮೇಲಕ್ಕೆ**

9. ಮುಕುಂದಮಾಲೈ
10. ತಿರುಮಾಲೈ
11.ತಿರುವಾಯ್ಮೊಷಿ
12. ತಿರುಪ್ಪಲ್ಲಾಂಡು

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ಮು | ದ | ಲ್ | ತಿ | ರು | ವಂ | ದಾ | ದಿ |
| 2 | | 5 ತಿ | ವೈ | ಪ್ಪಾ | ರು | 3 8 ತಿ | ಷಿ | |
| 3 | 2 ಪೆ | ರು | ಮಾ | ಳ್ | ತಿ | 15 ರು | ಮೊ | 16 ಷಿ |
| 4 | ಲೈ | ಪ್ಪ | 6 ಶಿ | | 7 ಪೆ | ಚ್ಚಂ | ಯ್ | ಡು |
| 5 | ಮಾ | ಳ್ಳಿ | ರಿ | ಲೈ | ರಿ | ದ | ವಾ | ಲ್ಲಾಂ |
| 6 | ದ | ಎ | ಯ | ಮಾ | ಯ | ವಿ | ರು | ಪ್ಪ |
| 7 | ಕುಂ | ಳು | ತ್ತಂ | ರು | ವಿ | ರು | ತಿ 4 11 | ರು |
| 8 | ಮು 9 | ಚ್ಚಿ | | ತಿ 10 | | ತ್ತಂ | | ತಿ 12 |

# ಅಗಸ್ತ್ಯ ಮಹಾ ಮುನಿಗಳು



- ಡಾ॥ ಸಿ. ಎಸ್. ಊರ್ಮಿಳಾ

93804 26830

ಅಗಸ್ತ್ಯ ಮಹರ್ಷಿಗಳು ಎಂದರೆ ಸಾಕು ನಮಗೆ ನೆನಪು ಬರುವುದು ನಮ್ಮ ಭಾರತದ ದಕ್ಷಿಣದಿಕ್ಕು. ಸಾಧಾರಣವಾಗಿ ಎಲ್ಲ ಮಹರ್ಷಿಗಳು ತಪಸ್ಸಿಗಾಗಿ ಉತ್ತರದ ಹಿಮಾಲಯದತ್ತ ಹೋಗಿ ಅಲ್ಲಿ ಪ್ರಶಾಂತವಾದ ವಾತಾವರಣದಲ್ಲಿ ತಪಸ್ಸಿಗೆ ಕುಳಿತುಕೊಳ್ಳುತ್ತಾರೆ. ಜಗದಹಿತಾರ್ಥಕ್ಕಾಗಿಯೇ ಎಲ್ಲ ಋಷಿ ಮುನಿಗಳು ತಪಸ್ಸನ್ನು,ಯಜ್ಞ ಯಾಗಾದಿಗಳನ್ನು ನಡೆಸುವರು ಎಂಬುದು ಸರ್ವವಿದಿತ ಹೀಗಿರುವಲ್ಲಿ ಅಗಸ್ತ್ಯ ಮುನಿಗಳು ಭಾರತದ ದಕ್ಷಿಣ ದೇಶಗಳಿಗೆ, ಅದರಲ್ಲೂ ತಮಿಳು ನಾಡಿನತ್ತ ಬಂದು ಅಲ್ಲಿಯೇ ವಾಸಿಸತೊಡಗಿದರು. ದೇವ ಭಾಷೆಯೆಂದೇ ಪ್ರಸಿದ್ಧವಾದ ಸಂಸ್ಕೃತ ಭಾಷೆಯನ್ನು ಬಿಟ್ಟು ಇಲ್ಲಿನ ತಮಿಳು ನಾಡಿನ ಆಳ್ವಾರ್ ಆಚಾರ್ಯರು ತಮಿಳಿಗೇ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ತಮಿಳಿನಲ್ಲಿ ಗ್ರಂಥಗಳನ್ನು ಪ್ರಬಂಧಗಳನ್ನು ರಚಿಸಲು ಉದ್ಯುಕ್ತರಾದರು. ಇದಕ್ಕೆ ಕಾರಣವೇನು? ಎಂಬ ಪ್ರಶ್ನೆಗಳು ನಮಗೆ ಸಹಜವಾಗಿಯೇ ಹುಟ್ಟುತ್ತದೆ. ಅದಕ್ಕೆ ಮಹಾನುಭಾವರಾದ ಅಗಸ್ತ್ಯಮುನಿಗಳೇ ಎಂದು ಆಳ್ವಾರ್ ಆಚಾರ್ಯರು ಪ್ರತಿಪಾದಿಸಿದ್ದಾರೆ. ಇಂತಹ ಆಚಾರ್ಯರು "ಅಗಸ್ತ್ಯ ಸೇವಿತ ಮಾನ ದೇಶತ್ತಿಲೆ ದೇಶಕಾಪ ದೇಶಿತ್ತಾಲೆ".ಎಂದರೆ ಅಗಸ್ತ್ಯರು ದಕ್ಷಿಣದೇಶದತ್ತ ಬಂದಾಗ ಆ ದಿಕ್ಕಿಗೆ ಪಾವಿತ್ರ್ಯತೆ ಬಂದಿತು. ಇಂತಹ ದಕ್ಷಿಣ ದೇಶದಲ್ಲಿ ಆಚಾರ್ಯ ರೂಪದಿಂದ ಅವತರಿಸಿದರೆಂದು ಹೇಳಿ ಭಾಗವತದ ಶ್ಲೋಕವನ್ನು ಈ ಸಂದರ್ಭದಲ್ಲಿ ಉದಾಹರಿಸುತ್ತಾರೆ.

ಕಲೌಖಲು ಭವಿಷ್ಯಂತಿ ನಾರಾಯಣ ಪರಾಯಣಾಃ
ಕ್ವಚಿತ್ ಕ್ವಚಿತ್ ಮಹಾಭಾಗಾ ದ್ರಮಿಡೇಷು ಚ ಭೂರಿಶಃ
ತಾಮ್ರಪರ್ಣೀ ನದೀ ಯತ್ರ ಕೃತಮಾಲಾ ಪಯಸ್ವಿನೀ
ಕಾವೇರಿ ಚಮಹಾಭಾಗಾ ಪ್ರತೀಚ ಚ ಮಹಾನದೀ

ಎಂದು ಶುಕಮಹರ್ಷಿ ಅನುಗ್ರಹಿಸಿದರು. ಈ ಪ್ರಸಂಗ ಪ್ರಪನ್ನಾಮೃತ' - ಎಂಬ ಕೃತಿಯಲ್ಲಿದೆ.

ಈ ಹಿಂದೆ ಕೈಲಾಸ ಶಿಖರದಲ್ಲಿ ಪಾರ್ವತಿ ಪರಮೇಶ್ವರರ ವಿವಾಹ ಮಹೋತ್ಸವ ನಡೆಸಲು ನಿಶ್ಚಯವಾಯಿತು. ಈ ವಿವಾಹ ಮಹೋತ್ಸವಕ್ಕೆ ಸಪ್ತರ್ಷಿಗಳು ಕಾರಣರಾದರು. ಸಪ್ತರ್ಷಿಗಳು ಪರ್ವತರಾಜನಾದ ಹಿಮವಂತನಲ್ಲಿ ಶಂಕರನಿಗಾಗಿ ವಧುವನ್ನು ಬೇಡಿದರು. ಪರ್ವತ ರಾಜನು ತನ್ನ ಮಗಳಾದ ಪಾರ್ವತಿಯನ್ನು ಶಂಕರನಿಗೆ ಕೊಡಲು ಒಪ್ಪಿದನು.

ಸುಮುಹೂರ್ತದಲ್ಲಿ ಪಾರ್ವತಿ ಪರಮೇಶ್ವರರ ವಿವಾಹ ಮಹೋತ್ಸವವು ನಿಶ್ಚಿತವಾಗಿ ದೇವಾನುದೇವತೆಗಳು, ಋಷಿಗಳು, ಯಕ್ಷರು, ನಾಗರು ಬ್ರಹ್ಮ ಇಂದ್ರ ವರುಣಾದಿದೇವತೆಗಳು ಕೈಲಾಸದಲ್ಲಿ ತುಂಬಿದರು. ಸಮುದ್ರದಲ್ಲಿ ಸಂಚರಿಸುವ ದೋಣಿಯು ಒಂದು ಕಡೆಯಲ್ಲಿ ಭಾರವು ಹೆಚ್ಚಾದರೆ ಅದು ಕುಗ್ಗಿ ನೀರಿನಲ್ಲಿ ಮುಳುಗಿ ಭಾರವಿಲ್ಲದ ಕಡೆ ಮೇಲೇಳುತ್ತದೆ. ಅದೇ ಪರಿಸ್ಥಿತಿ ಇಲ್ಲಿಯೂ ಉಂಟಾಯಿತು. ಪ್ರಕೃತದಲ್ಲಿದ 'ಉತ್ತರ ಭೂಭಾಗವಾದ ಕೈಲಾಸಪರ್ವತದಲ್ಲಿ ಮೂರೂ ಲೋಕದ ಜನರು ತುಂಬಿ ಅದರ ಭಾರದಿಂದಾಗಿ ಕೆಳಗೆ ಕುಸಿಯಲು ಪ್ರಾರಂಭವಾಯಿತು. ಆಗ ಮುನಿಗಳು, ದೇವತೆಗಳು ಕುಸಿಯುತ್ತಿರುವ ಭೂಮಿಯನ್ನು ನೋಡಿ ಹೆದರಿದರು. ದಕ್ಷಿಣದ ಕಡೆ ಜನರಿಲ್ಲದೆ ಆ ಭಾಗವು ಹಗುರವಾಗಿ ಮೇಲಕ್ಕೆ ಏಳಲು ಪ್ರಾರಂಭಿಸಿತು. ಈ ಸಂದರ್ಭದಲ್ಲಿ ದೇವ ಶಿಲ್ಪಿಯಾದ ವಿಶ್ವಕರ್ಮನು ಬಂದು ಎಲ್ಲರ ಮುಂದೆ ಒಂದು ಸಲಹೆಯನ್ನು ಸೂಚಿಸಿದನು. ಪ್ರಕೃತ ಈ ಉಮಾ

ಶಂಕರರ ವಿವಾಹಮಹೋತ್ಸವಕ್ಕೆ ಅಗಸ್ತ್ಯ ಮುನಿಗಳು ಬಂದಿದ್ದಾರೆ.ಅವರೇನು ಸಾಮಾನ್ಯರಲ್ಲ ದೇವತೆಗಳಿಗೆ ಅನೇಕ ಸಂದರ್ಭಗಳಲ್ಲಿ ನೆರವು ನೀಡಿದ್ದಾರೆ.ಹೀಗಾಗಿ ಈ ಮೂರು ಲೋಕವೂ ಒಂದಾದರೂ ಅವರೊಬ್ಬರೇ ಒಂದು ದಕ್ಷಿಣ ದಿಗ್ಭಾಗದಲ್ಲಿದ್ದರೆ ಭೂಮಿಯು ಸಮತೋಲನವಾಗುವುದರಲ್ಲಿ ಸಂಶಯವಿಲ್ಲ ಅಗಸ್ತ್ಯರೊಬ್ಬರೇ ಸಪ್ತರ್ಷಿಗಳಿಗೆ ಸಮಾನರಾದವರು. ಶ್ರುತಿಯಲ್ಲಿಯೂ ಸಹ "ಸರ್ವೇತ್ರಯೋ ಅಗಸ್ತಶ್ಚ" ಎಂಬುದಾಗಿ ಪ್ರಶಂಸಿದ್ದಾರೆ, ಎಂದು ಹೇಳುತ್ತಾ ವಿಶ್ವಕರ್ಮನು ಮತ್ತೊಮ್ಮೆ ಹೀಗೆ ಹೇಳಿದನು.

ಅಗಸ್ತ್ಯೋಯೇ ಭಗವಾನತ್ರ ವರ್ತತೇ ಖಿಲಯೋಗಿರಾಟ್ ।
ತ್ರಯೋ ಲೋಕಾಶ್ಚೈಕ ಭಾಗಃ ಏಕಭಾಗಸ್ಯ ಏವಹಿ ।
ಅದ್ಯ ದಕ್ಷಿಣ ದಿಗ್ಬಾಗೇ ಸೋಗಸ್ತ್ಯೋ ವರ್ತತೇಯದಿ ।
ಪೂರ್ವ ವತ್ಪೃಥಿವೀ ತತ್ರ ಸಮಾನಸ್ಥಾನ ಸಂಶಯಃ॥

ಮೂರು ಲೋಕದ ಜನ ಸಹಿತವಾದ ಭೂಭಾಗ ಒಂದು ಕಡೆ ಅಗಸ್ತ್ಯರೊಬ್ಬರೇ ಒಂದು ಕಡೆ. ಅವರೊಬ್ಬರು ದಕ್ಷಿಣದಿಕ್ಕಿಗೆ ಪ್ರಯಾಣ ಬೆಳಸಿದರೆ ಈ ಅಸಮತೋಲನ ಅನಾಹುತವು ತಪ್ಪಿ ಭೂಮಿಯು ಸಮತೋಲನವಾಗುತ್ತದೆ ಎಂದರು.

ಈ ಮಾತನ್ನು ಕೇಳಿ ಅಗಸ್ತ್ಯರು ಕೋಪಗೊಂಡರು. ವಿಶ್ವಕರ್ಮನು ಬೇಕೆಂತಲೇ ಪಾರ್ವತೀ ಪರಮೇಶ್ವರರ ವಿವಾಹ ಮಹೋತ್ಸವವನ್ನು ನೋಡಲಾಗದಂತೆ ಈ ಮಾತನ್ನು ಹೇಳುತ್ತಿದ್ದಾನೆ. ಅಷ್ಟೇ ಅಲ್ಲ ಹೀಗೆ ಅಡ್ಡಿಯಾಗಿ ನಿಂತ ವಿಶ್ವಕರ್ಮವನ್ನು ಶಪಿಸಿದರು.

ನಿಕೃಷ್ಣಸ್ತೇನ ಧೋಕ್ಷೇಣ ಭವಿಷ್ಯತಿ ಭವಾನ್ ಧ್ರುವಂ
ಯುಷ್ಮದೀಯಾಶ್ಚ ಯೇಲೋಕೇ ಯುಷ್ಮತ್ಕ ರ್ಮರತಾ ನರಾ

ಅಂದರೆ ಈ ವಿವಾಹ ಮಹೋತ್ಸವವನ್ನು ನೋಡಲು ಬಂದ ನನಗೆ ಅಡ್ಡಿಮಾಡಿದ್ದರಿಂದ ದೇವತಾವರ್ಗದಲ್ಲಿ ನೀನು ನಿಕೃಷ್ಟ ನಾನು ಎಂದು ಶಪಿಸಿದರು. ಇದನ್ನು ಕೇಳಿದ ವಿಶ್ವಕರ್ಮನೂ ಸಹ ಪ್ರತಿಶಾಪವನ್ನು ಕೊಟ್ಟನು.

ಅದ್ಯ ಪ್ರಭೃತಿ ಲೋಕೇಷು ದ್ರಾವಿಡೀ ಯಾತ್ವಯಾ ಕೃತಾ
ಪೈಶಾಚತುಲ್ಯಾ ಸಾ ಭಾಷಾ ಭವಿಷ್ಯತಿ ನ ಸಂಶಯಃ
ಯುಷ್ಮತ್ಕೃತ ವ್ಯಾಕರಣಂ ಭವಿಷ್ಯತ್ಯತಿ ಗರ್ಹಿತಮ್
ಬ್ರಹ್ಮ ಕ್ಷೇತ್ರ ವಿಶಾಂ ಲೋಕೇ ಮ್ಲೇಚ್ಛ ಬಾಷಾ ದಿವದ್ಧುವಂ
ಶೂದ್ರ ಜಾತಿ ವ್ಯಾಕರಣಂ ತದ್ಭ ವಿಷ್ಯತಿ ಗರ್ಹಿತಂ
ಸತ್ವಂ ದ್ರಾವಿಡ ದೇಶಸ್ತು ಚೋರದೇಶೋ ಭವಿಷ್ಯತಿ

ಅಂದರೆ ನಿನ್ನಿಂದ ಪ್ರಚಾರವಾದ ತಮಿಳು ಭಾಷೆಯು ಪೈಶಾಚಿಕ ಭಾಷೆಯಾಗಲಿ, ನಿನ್ನಿಂದ ರಚಿಸಲ್ಪಟ್ಟ ತಮಿಳು ಭಾಷೆಯ ವ್ಯಾಕರಣವು ನಿಕೃಷ್ಟತೆಯನ್ನು ಪಡೆಯಲಿ, ನೀನು ವಾಸಿಸುವ ದ್ರಾವಿಡ ದೇಶವು ಅಪವಿತ್ರವಾಗಿರಲಿ ಎಂದು ಶಾಪವಿತ್ತನು ಹೀಗೆ ಸ್ವಲ್ಪ ಕಾಲ ಇಬ್ಬರಿಗೂ ವಾಗ್ಯುದ್ಧವೇ ನಡೆಯಿತು. ಈ ಮಧ್ಯೆ ದೇವತೆಗಳು ಅಗಸ್ತ್ಯರನ್ನು ಸಮಾಧಾನ ಪಡಿಸಿ ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡುವಂತೆ ಪ್ರಾರ್ಥಿಸಿದರು.

ಅಗಸ್ತ್ಯರು ದೇವತೆಗಳಿಗೆ ಅಭಯವನ್ನಿತ್ತು ಅವರ ಪ್ರಾರ್ಥನೆಯಂತೆ ದಕ್ಷಿಣದಿಕ್ಕಿಗೆ ಪ್ರಯಾಣ ಬೆಳೆಸಿದರು. ದಕ್ಷಿಣ ದಿಕ್ಕಿಗೆ ಅಗಸ್ತ್ಯಮುನಿಗಳು ಕಾಲಿಟ್ಟೊಡನೆ ಭೂಮಿಯು ಸಮತೋಲನಗೊಂಡು ಸರಿಯಾಯಿತು. ಕೈಲಾಸಪರ್ವತದಲ್ಲಿ ಪಾರ್ವತೀ ಪರಮೇಶ್ವರರ ವಿವಾಹ ಸಂಭ್ರಮದಿಂದ ನೆರವೇರಿತು.

ವಿಶ್ವಕರ್ಮನ ಶಾಪದಿಂದ ಅಗಸ್ತ್ಯರಿಗೆ ಮನಃಶಾಂತಿ ದೊರಕಲಿಲ್ಲ ಅವನ ಶಾಪಕ್ಕೆ ವ್ಯತಿರಿಕ್ತವಾಗಿ ತಮಿಳು ಭಾಷೆಯನ್ನು ಸರ್ವಭಾಷಾಪ್ರಾಶಸ್ತ್ಯವನ್ನಾಗಿಯೂ, ತಮಿಳುನಾಡನ್ನು ಪವಿತ್ರಭೂಮಿಯನ್ನಾಗಿಯೂ ತಮಿಳು ವ್ಯಾಕರಣ 'ಅಗತ್ತಿಯಮ್ ಎಂಬ ಕೃತಿಯನ್ನು ವಿಶ್ವಮಾನ್ಯವನ್ನಾಗಿ, ವಿದ್ವಜ್ಜನ ಮಾನ್ಯವನ್ನಾಗಿ ಮಾಡಬೇಕೆಂದು ಪಣತೊಟ್ಟರು. ಇದಿಷ್ಟೂ ಕಾರ್ಯವು ಆ ಪರಮ ಪುರುಷನಾದ ಶ್ರೀಮನ್ನಾರಾಯಣನ ಅನುಗ್ರಹದಿಂದಲೇ ಸಾಧ್ಯವೆಂದು ಬಗೆದು ಕಠೋರತಪಸ್ಸಿಗೆ ಕುಳಿತರು. ಹತ್ತು ಸಹಸ್ರ ವರ್ಷಗಳ ಕಾಲ ವಿಷ್ಣುವನ್ನು ಕುರಿತು ತಪಸ್ಸು ಮಾಡಿದರು.ಆಹಾರವನ್ನು ತೊರೆದರು. ಪರಮ ವೈರಾಗ್ಯದಿಂದ ವಿಷ್ಣುವನ್ನೇ ಧ್ಯಾನಿಸಿದರು.ಇವರ ತಪಸ್ಸಿಗೆ ವಿಷ್ಣುವು ತೃಪ್ತನಾದನು.

ಮಹಾವಿಷ್ಣುವು ಅಗಸ್ತ್ಯರನ್ನು ಕುರಿತು "ಮುನಿಯೇ ನಾನು ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ. ನಿನ್ನ ಮನೋರಥವೇನು?

ನಾನು ವರದನಾಗಿ ಬಂದಿರುವೆ. ಯಥೇಚ್ಛವಾಗಿ ಕೇಳು ಎಂದಾಗ ಅಗಸ್ತ್ಯರು ಮಹಾವಿಷ್ಣುವನ್ನು ಕುರಿತು ತಮಿಳು ಭಾಷೆಯನ್ನು ಸರ್ವಭಾಷಾ ಪ್ರಾಶಸ್ತ್ಯವನ್ನಾಗಿಯೂ,ತಮಿಳುನಾಡನ್ನು ಪವಿತ್ರ ಭೂಮಿಯನ್ನಾಗಿಯೂ, ತಮಿಳು ವ್ಯಾಕರಣವನ್ನೂ ವಿದ್ವಜ್ಜನಮಾನ್ಯವನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿದರು.ಅದಕ್ಕೆ ಮಹಾವಿಷ್ಣುವು ನಿನ್ನ ಮನೋರಥಗಳನ್ನು ನಾನು ಪೂರೈಸುವೆ ಎಂದು ಅಭಯವನ್ನಿತ್ತನು.

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್

'ಮಾನವ ಸೇವೆಯೇ ಮಾಧವ ಸೇವೆ' ಎನ್ನುವ ಗುರಿ ಹೊಂದಿರುವ ತಿ.ತಿ.ದೇವಸ್ಥಾನವು ವಿವಿಧ ಸಾಮಾಜಿಕ ಸಂಕ್ಷೇಮ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ಇದರ ಅಂಗವಾಗಿ ಬಾಲಬಾಲೆಯರಿಗೆ ಸಹಾಯಮಾಡುವ ಸಂಕಲ್ಪದೊಂದಿಗೆ 1943 ನೇ ಇಸವಿಯಲ್ಲಿ ಶ್ರೀವೇಂಕಟೇಶ್ವರ ಬಾಲಮಂದಿರ (ತಿರುಪತಿ) ಟ್ರಸ್ಟ್, ತಿ.ತಿ.ದೇ. ಸ್ಥಾಪಿಸಿದೆ. ಈ ಶ್ರೀ ವೇಂಕಟೇಶ್ವರ ಬಾಲಮಂದಿರ ಟ್ರಸ್ಟ್ ಪ್ರಸ್ತುತ ಶ್ರೀವೇಂಕಟೇಶ್ವರ ಜಲನಿಧಿ ಪಥಕಂ, ಕಲ್ಯಾಣಮಸ್ತು ಟ್ರಸ್ಟ್ . ಶ್ರೀ ವೇಂಕಟೇಶ್ವರ ಸಮಾಚಾರ ಸಾಂಕೇತಿಕ ಟ್ರಸ್ಟ್‌ಗಳು ಎಲ್ಲವನ್ನು ಸೇರಿಸಿ 'ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್, ಎಂಬುದಾಗಿ ರೂಪ ತಳೆದಿದೆ.

## ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್‌ನ ಗುರಿಗಳು:

1. ಅನಾಥ ಮಕ್ಕಳು,ವೃದ್ಧರು,ನಿರಾಶ್ರಿತರು,ಅಭಾಗ್ಯರು, ಬಡ-ಬಗ್ಗರು, ಬಲಹೀನರ ಅಭಿವೃದ್ಧಿ, ಅವರ ಸಂರಕ್ಷಣೆ, ಅವರ ಸಂಕ್ಷೇಮಕ್ಕಾಗಿ ಧರ್ಮಶಾಲೆಗಳು, ವಸತಿ ಗೃಹಗಳ ಏರ್ಪಾಟು.

   ಅನಾಥರು, ಆರ್ಥಿಕವಾಗಿ ಹಿಂದುಳಿದವರು, ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಸಹಾಯ ಮಾಡುವುದು.

2. ದಿವ್ಯಾಂಗರು, ಮಾನಸಿಕರೋಗಿಗಳಿಗೆ ಉಚಿತ ವೈದ್ಯಕೀಯ ಅನುಕೂಲಗಳನ್ನು ಒದಗಿಸಿ, ಅವರ ಜೀವನದಲ್ಲಿ ಹೊಸದೊಂದು ಆಯಾಮವನ್ನು ಕಲ್ಪಿಸುವುದು. ಈ ಲಕ್ಷ್ಯದಲ್ಲಿ ಕುಲ, ಮತ, ಜಾತಿ,ವರ್ಗ, ವರ್ಣ ಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಸ್ವೀಕರಿಸುವುದು.

3. ಕಿವುಡು, ಮೂಕಮಕ್ಕಳಿಗೆ, ಹುಟ್ಟಿನಿಂದಲೇ ಲೋಪವಿರುವ ಶಿಶುಗಳಿಗೆ ಶಿಶುವಿಹಾರಗಳನ್ನು ಏರ್ಪಾಟು ಮಾಡುವುದು.

4. ಪ್ರವಾಹ - ಬರ ಬಂದು ಪ್ರಕೃತಿ ವಿಪತ್ತುಗಳ ಸಮಯದಲ್ಲಿ ಅಗ್ನಿ ಅನಾಹುತಗಳಿಂದ ಅನಪೇಕ್ಷಿತ ದುರ್ಘಟನೆಗಳ ವೇಳೆಯಲ್ಲಿ ಯಥೋಚಿತವಾದ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು.

5. ಅಲ್ಲದೇ ವಿಕಲಚೇತನರಾಗಿ ಹುಟ್ಟಿ ತಂತಮ್ಮ ಗ್ರಾಮಗಳಲ್ಲಿ ನೆಲೆಸಿರುವ ಮಕ್ಕಳಿಗೆ ಬೇಕಾಗುವ ಎಲ್ಲಾ ಪರಿಕರಗಳನ್ನು ಒದಗಿಸುವುದು ಮತ್ತು ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು.

6. ಬದುಕಲು ಅತ್ಯಾವಶ್ಯಕವಾದ ಕುಡಿಯುವ ನೀರನ್ನು ಪ್ರತಿನಿತ್ಯ ತಲುಪಿಸುವುದು. ತಿರುಮಲೆ ಪಂಚಾಯಿತಿ, ತಿರುಮಲೆ ಕಾರ್ಪೊರೇಷನ್‌ಗಳಿಗೆ ಬೇಕಾಗುವ ನೀರು ಅಣೆಕಟ್ಟುಗಳನ್ನು ನಿರ್ಮಿಸುವುದು. ನೀರಿನ ಇತರ ಸಮಸ್ಯೆಗಳಿಗೆ ಉಚಿತವಾದ ಕಾರ್ಯಗಳನ್ನು ಮಾಡುವುದು.

7. ಪುಸ್ತಕಗಳಿಂದ ಆರಂಭಿಸಿ ಇಂಟರ್‌ನೆಟ್ ಮತ್ತಿತರ ಆಧುನಿಕ ಉಪಕರಣಗಳಿಂದ ನಮ್ಮ ದೇಶದ ಚರಿತ್ರೆ, ಸಾಂಸ್ಕೃತಿಕ ಸಂಪದಗಳನ್ನು ಮುಂದಿನ ಪೀಳಿಗೆಗೆ ಮುಟ್ಟಿಸುವುದು.

8. ಕ್ರಮಬದ್ಧವಾದ ಶಿಕ್ಷಣ, ನೈತಿಕ ಆದರ್ಶವಾದಗಳಿಂದ ಯುವಕರ ಆತ್ಮವಿಶ್ವಾಸವನ್ನು ಬಲಪಡಿಸುವುದು.

9. ಶ್ರೇಯಸ್ಕರವಾದ ವೈವಾಹಿಕ ಕಾರ್ಯಕ್ರಮಗಳಿಂದ ವಧುವರರು ಗೌರಾವಾಭಿಮಾನಿಗಳಿಂದ ಉನ್ನತ ದಾಂಪತ್ಯ ಜೀವನವನ್ನು ಹೊಂದುವಂತೆ ಮಾಡುವುದು.

10. ಮುಂದಾಗಿ ಕೀರ್ತಿ ಸಾಧನೆಗಳಿಗಾಗಿ ಕಷ್ಟಪಡುತ್ತಿರುವ ವ್ಯಕ್ತಿ ಮತ್ತು ಸಂಘಟನೆಗಳಿಗೆ ಸಹಕಾರ ಕೊಡುವುದು.

11. ಇವೆಲ್ಲವೂ ಅಲ್ಲದೇ, ಮೇಲ್ಕಂಡ ಗುರಿ ಸಾಧಿಸುವಲ್ಲಿ ಯಾವುದೇ ಲಾಭಾಪೇಕ್ಷೆಗೆ ಅವಕಾಶವಿರದಂತೆ ನೋಡುವುದು.

**ಶ್ರೀ ವೆಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್ ದೇಣಿಗೆ ವಿವರಗಳು......**

1) ಈ ಯೋಜನೆಗೆ ದೇಣಿಗೆಯಾಗಿ ಕನಿಷ್ಟ ರೂ. 1000/- ನೀಡಬಹುದು.

2) ರೂ. 1000/- ಗಿಂತ ಕಡಿಮೆ ದೇಣಿಗೆ ಸ್ವಾಮಿಯವರ ಹುಂಡಿಗೆ, ದಾತರಿಗೆ ಯಾವುದೇ ಸಮಾಚಾರವಿಲ್ಲದೆ ಜಮಾ ಮಾಡಲಾಗುತ್ತದೆ. ಎಲ್ಲಾ ದೇಣಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಡಿಪಾಜಿಟ್ ಮಾಡಬೇಕು. ಅದರ ಮೇಲೆ ಬರುವ ಬಡ್ಡಿಯನ್ನು ಈ ಯೋಜನೆಗಾಗಿ ಬಳಸಲಾಗುತ್ತದೆ. "ದಿ ಎಗ್ಜಿಕ್ಯೂಟಿವ್ ಆಫೀಸರ್, ಶ್ರೀವೆಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್, ತಿ.ತಿ.ದೇ. ದೇವಸ್ಥಾನ, ತಿರುಪತಿ,ಎಂಬ ಹೆಸರಿನಿಂದ ಯಾವುದಾದರೂ ಬ್ಯಾಂಕ್‌ನಲ್ಲಿ ಚೆಕ್/ಡಿಮಾಂಡ್ ಡ್ರಾಫ್ಟ್ ಮುಖಾಂತರ ದೇಣಿಗೆಯನ್ನು 'ಚೀಫ್ ಅಕೌಂಟ್ಸ್ ಆಫೀಸರ್, ತಿ.ತಿ.ದೇ., ತಿರುಪತಿ - 517501 ಇವರಿಗೆ ಕಳುಹಿಸಬೇಕು.

ಇತರ ವಿವರಗಳಿಗೆ 0877 - 2264258



# ಆಯುರ್ವೇದ ದಿವ್ಯೌಷಧ ತ್ರಿಕಟು ಚೂರ್ಣ

-ಮೂಲ ಡಾ॥ ಸಿ. ಮಧುಸೂದನ ಶರ್ಮ

ಅನುವಾದ :ಶ್ರೀಮತಿ

ಪ್ರಾಚೀನ ಭಾರತೀಯ ಋಷಿಬಣ್ಣಿತ ಸಂಪ್ರದಾಯಿಕ ವೈದ್ಯಕೀಯ ವಿಧಾನವಾದ ಆಯುರ್ವೇದದಲ್ಲಿ ಆಯಾ ವ್ಯಾಧಿಗಳ ನಿವಾರಣೆ ನಿರೋಧಕಗಳು ಅದಕ್ಕಾಗಿ ಬಗೆಬಗೆಯ ಚೂರ್ಣ ಗಳು, ಕಷಾಯಗಳು, ಲೇಹ್ಯಗಳು, ಮಾತ್ರೆಗಳು, ಭಸ್ಮಗಳು ಪಾನೀಯಗಳು ಅರಿಷ್ಟಗಳು ಘೃತಗಳು, ತೈಲಗಳು, ಲೇಪನಗಳು.. ಹೀಗೆ ಎಷ್ಟೆಷ್ಟೋ ಬಗೆಯ ಔಷಧ ವಿನಿಯೋಗಗಳ ಕುರಿತು ಸಮಗ್ರ ವಿವರಣೆಗಳು ಕೊಟ್ಟಿದೆ.

ಅದರಲ್ಲೂ ಸಾಮಾನ್ಯವಾಗಿಯೇ ಬಳಸಿಕೊಳ್ಳುವ ತ್ರಿಕಟು ಚೂರ್ಣವನ್ನು ಯಾವ್ಯಾವ ಅನಾರೋಗ್ಯ ಸಮಸ್ಯೆ ಗಳಿಗೆ ಹೇಗೇಗೆ ಬಳಸಿಕೊಂಡು ಯಾವ್ಯಾವ ಫಲಿತಾಂಶಗಳನ್ನು ಹೊಂದಬಹುದೆಂಬುದನ್ನು ತಿಳಿದುಕೊಳ್ಳೋಣ.

ಸಂಸ್ಕೃತದಲ್ಲಿ 'ಕಟು' ಎಂದರೆ 'ಕಾರ' ಎಂದರ್ಥ. ಮೂರು ವಿಧವಾದ ಕಾರದ ರುಚಿಗಳನ್ನು ಹೊಂದಿರುವ ಪದಾರ್ಥಗಳ ಸಮ್ಮಿಶ್ರಿತ ಚೂರ್ಣವನ್ನು ತ್ರಿಕಟು ಚೂರ್ಣವೆನ್ನುತ್ತಾರೆ. ಅಂದರೆ ಕರಿಮೆಣಸು, (ಇಂಗ್ಲೀಷ್ ಹೆಸರು - ಪೆಪ್ಪರ್, ಶಾಸ್ತ್ರೀಯನಾಮ-ಪೈಪರ್ ನೈಗ್ರಂ) ಶುಂಠಿ (ಇಂಗ್ಲೀಷ್ ನಾಮಧೇಯ - ಡ್ರೈಜಿಂಜರ್, ಶಾಸ್ತ್ರೀಯ ನಾಮ-ಜಿಂಜಿಬರ್ ಅಫಿಷನಾಲಿಸ್), ಹಿಪ್ಪಲಿ (ಉದ್ದಮೆಣಸು) (ಇಂಗ್ಲಿಷ್ ನಾಮ ಲಾಂಗ್ ಪೆಪ್ಪರ್, ಶಾಸ್ತ್ರೀಯ ನಾಮಧೇಯ, - ಪೆಪ್ಪರ್ ಲಾಂಗಂ) ಚೂರ್ಣಗಳನ್ನು ಸಮಾನವಾಗಿ ಕಲಿಸಿದಲ್ಲಿ ತ್ರಿಕಟು ಚೂರ್ಣ ತಯಾರಾಗುತ್ತದೆ.

ಈ ರೀತಿಯಾಗಿ ತಯಾರು ಮಾಡಿದ ತ್ರಿಕಟು ಚೂರ್ಣ ಆಯುರ್ವೇದ ಔಷಧಾಲಯಗಳಲ್ಲಿ ವರ್ಷ ಪೂರ್ತಿ ಲಭ್ಯವಿರುತ್ತದೆ.

ಈ ಔಷಧಕ್ಕೆ ಶರೀರದ ಉಷ್ಣ, ಪಿತ್ತ ಪ್ರಕೋಪವನ್ನು ತೊಲಗಿಸುವ ಸ್ವಭಾವವಿರುವುದರಿಂದ ಉಷ್ಣ ಶರೀರವನ್ನು ಹೊಂದಿರುವವರು ಜೀರ್ಣ ಪ್ರಕ್ರಿಯೆಯಲ್ಲಿ ವ್ಯತ್ಯಾಸವಿರುವವರು,ಮೂಗು-ಬಾಯಿ-ಮಲದ್ವಾರಗಳಿಂದ ರಕ್ತಸ್ರಾವ ಹೊಂದಿರುವವರು ಇದನ್ನು ನಿರ್ಭಯವಾಗಿ ಉಪಯೋಗಿಸಬಹುದು.

"ಮಾಸದ್ವಯಾತ್ತಥಾ ಚೂರ್ಣಂ ಹೀನ ವೀರ್ಯತ್ವ ಮಾಪ್ನುಯಾತ್" (ಶಾರಂಗಧರ ಸಂಹಿತ) ಎಂಬ ಆಯುರ್ವೇದೋಕ್ತಿಯಂತೆ ಚೂರ್ಣವನ್ನು ತಯಾರಿಸಿದ ಬಳಿಕ ಎರಡು ತಿಂಗಳುಗಳವರೆಗೆ ಅದರಲ್ಲಿ ಔಷಧೀಯ ಗುಣಗಳು ಸಂಪೂರ್ಣವಾಗಿದ್ದು ದಿನಗಳೆದಂತೆ ಕ್ರಮೇಣ ತಮ್ಮ ಶಕ್ತಿಯನ್ನು ಕಳೆದು ಕೊಳ್ಳುತ್ತದೆ. ಆದ್ದರಿಂದ ಅತ್ಯಂತ ಶಕ್ತಿವಂತ ಗುಣಗಳನ್ನು ಹೊಂದಿರುವ ಚೂರ್ಣವನ್ನು ತಯಾರು ಮಾಡಿದ ಎರಡು ತಿಂಗಳುಗಳೊಳಗೆ ಬಳಸುವುದೇ ಶ್ರೇಯಸ್ಕರ.

**ಅಧಿಕ ದೇಹಭಾರವಿಳಿಸಲು :**

60 ಗ್ರಾಂ ತ್ರಿಕಟು ಚೂರ್ಣ, 60 ಗ್ರಾಂ ತ್ರಿಫಲ ಚೂರ್ಣ (ಕಾರ್ಜಿಕಾಯಿ, ತಾರೇಕಾಯಿ ಹಾಗೂ ನೆಲ್ಲಿಕಾಯಿ ಪುಡಿಗಳನ್ನು ಸಮಾನವಾಗಿ ಕಲಿಸಿ ತಯಾರಿಸಿದ ಚೂರ್ಣ) (ಆರ್ಯುವೇದ

ಔಷ ಧಾಲಯಗಳಲ್ಲಿ ಸಹ ದೊರಕುತ್ತದೆ.) 20 ಗ್ರಾಂ ಜೀರಿಗೆಪುಡಿ, 20 ಗ್ರಾಂ ಚಿತ್ರಮೂಲಪುಡಿ 7.5 ಗ್ರಾಂ ಇಂಗುಪುಡಿಯನ್ನು ತುಪ್ಪದಲ್ಲಿ ಕಲಿಸಿಟ್ಟು ಕೊಂಡು ದಿನವೂ ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಾ,ಆಹಾರ ಪಥ್ಯವನ್ನು ಪಾಲಿಸುತ್ತಾ ಉತ್ತಮವಾದ ದೈಹಿಕ ವ್ಯಾಯಾಮಗಳನ್ನು ಮಾಡುತ್ತಿದ್ದರೆ ಶೀಘ್ರದಲ್ಲೇ ದೇಹದಲ್ಲಿ ಅಧಿಕವಾಗಿ ಶೇಖರವಾಗಿರುವ ಕೊಬ್ಬು ಕರಗುತ್ತದೆ. ಕೀಲುನೋವು ಮಾಯವಾಗಿ ಲವಲವಿಕೆ ಅವರಿಸುತ್ತದೆ. ಮಧುಮೇಹ ವ್ಯಾಧಿಗ್ರಸ್ಥರು ಈ ಔಷಧಿಯನ್ನು ಇದೇ ಪ್ರಮಾಣದಲ್ಲಿ 200ಮಿ.ಲೀ. ತಿಳಿ ಮಜ್ಜಿಗೆಯಲ್ಲಿ ಕಲಿಸಿ ಸೇವಿಸಬೇಕು.

**ಮಳೆಗಾಲದಲ್ಲಿ ನೆಗಡಿ - ಕೆಮ್ಮು ಬಾರದಿರಲು :**



100 ಗ್ರಾಂ ಬೆಲ್ಲದಲ್ಲಿ 50 ಗ್ರಾಂ ತ್ರಿಕಟು ಚೂರ್ಣವನ್ನು ಕಲಿಸಿ ಕುಟ್ಟಿಟ್ಟುಕೊಂಡು ಮಳೆಗಾಲದ ಆರಂಭದಲ್ಲಿ ಹಲವು ದಿನಗಳವರೆಗೆ ಬೆಳಿಗ್ಗೆ - ಸಂಜೆ ಬಾರಿಯೊಂದಕ್ಕೆ ಗುಲಗಂಜಿಯಷ್ಟು ಚಪ್ಪರಿಸಿ ಒಂದು ಕಪ್ಪು ಉಗುರು ಬೆಚ್ಚಗಿನ ನೀರು ಕುಡಿಯಬೇಕು.

**ಗರ್ಭಾಶಯ, ಅಂಡಾಶಯ ಗಡ್ಡೆಗಳಿಗೆ ಗರ್ಭಕೋಶದ ಗಂಟುಗಳಿಗೆ :**

90 ಗ್ರಾಂ ತ್ರಿಕಟು ಚೂರ್ಣ, 10 ಗ್ರಾಂ ಕಾರ್ಚಿಕಾಯಿ ಬೀಜದ ಪುಡಿ, 10 ಗ್ರಾಂ ಸೈಂಧವ ಲವಣ ಕಲಿಸಿಟ್ಟುಕೊಳ್ಳಬೇಕು.

ದಿನವೂ ಮುಂಜಾನೆ ಎದ್ದ ಕೂಡಲೇ 100 ಮಿ.ಲೀ. ಕಾಯಿಸಿದ ಹಾಲು ಇಲ್ಲವೇ ನೀರಿನಲ್ಲಿ 20-30 ಗ್ರಾಂ ಕಲಬಂದದ ಲೋಳೆರಸವನ್ನು ಮಿಕ್ಸಿಯಲ್ಲಿ ಹಾಕಿ ತಿರುಗಿಸಿ ಕಡೆಗೆ ಒಂದು ಟೀ ಸ್ಪೂನ್ ಪುಡಿಯನ್ನು ಕಲಿಸಿ ಸೇವಿಸುತ್ತಿದ್ದರೆ ಶೀಘ್ರದಲ್ಲಿ ಪರಿಹಾರ ದೊರಕುತ್ತದೆ.

**ಸೈನಸೈಟಿಸ್‌ಗೆ**

**ಮೂಗಿಗೆ :**

5 ಮಿ.ಲೀ. ನೀರಿನಲ್ಲಿ ಒಂದು ಚಿಟಿಕೆ ತ್ರಿಕಟು ಚೂರ್ಣ ಕಲಿಸಿ ಶೋಧಿಸಿ ದಿನವೂ ಒಂದೆರಡು ಬಾರಿ ಬಾರಿಯೊಂದಕ್ಕೆ 3-4 ಹನಿ ಒಂದೊಂದು ಮೂಗಿನ ಹೊಳ್ಳೆಯಲ್ಲಿ ಹಾಕಿ ಕೊಳ್ಳುತ್ತಿರಬೇಕು.

**ಹೊಟ್ಟೆಯೊಳಗೆ :**

45 ಗ್ರಾಂ ತ್ರಿಕಟು ಚೂರ್ಣದಲ್ಲಿ, 15 ಗ್ರಾಂ ನೆಲ್ಲಿಪುಡಿ,15 ಗ್ರಾಂ ಗಂಧದ ಚೆಕ್ಕೆಯ ಪುಡಿ, ಕಲಿಸಿಟ್ಟುಕೊಂಡು ಬೆಳಗ್ಗೆ - ಸಂಜೆ ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನೊಂದಿಗೆ ಕಲಿಸಿ ಸೇವಿಸುತ್ತಿರಬೇಕು.

ಮೇಲಿನಂತೆ ಔಷಧಗಳನ್ನು ಬಳಸುವುದರಿಂದ ಮೂಗುಕಟ್ಟುವಿಕೆ, ತಲೆಭಾರವಾಗುವುದು ಇಂತಹ ಸಮಸ್ಯೆಗಳು ಶೀಘ್ರದಲ್ಲಿ ಕಡಿಮೆಯಾಗುತ್ತದೆ. ದೀರ್ಘಕಾಲದ ಉಸಿರಾಟದ ತೊಂದರೆಯೂ ಸಹಾ ನಿವಾರಣೆಗೊಳ್ಳುತ್ತದೆ.

**ಹೊಟ್ಟೆಯಲ್ಲಿನ ಕೊಬ್ಬು ಕರಗಲು :**

ತ್ರಿಕಟು ಚೂರ್ಣ 75 ಗ್ರಾಂ,ಜೀರಿಗೆ ಪುಡಿ, 25 ಗ್ರಾಂ, ಸೈಂಧವ ಲವಣ ಪುಡಿ 25 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಬಾರಿಯೊಂದಕ್ಕೆ 200 ಮಿ.ಲೀ. ಕಡೆದ ತಾಜಾ ಮಜ್ಜಿಗೆಯಲ್ಲಿ 2-3 ಗ್ರಾಂ ಪುಡಿಯನ್ನು ಕಲಿಸಿ ಸೇವಿಸುತ್ತಿರಬೇಕು.

**ಚರ್ಮರೋಗಗಳಿಗೆ :**

75 ಗ್ರಾಂ ತ್ರಿಕಟು ಚೂರ್ಣ, 25 ಗ್ರಾಂ ಕಾರ್ಚಿಕಾಯಿ ಬೀಜದ ಪುಡಿ, 25 ಗ್ರಾಂ ಬೆಲ್ಲದ ಪುಡಿ ಕಲಿಸಿಟ್ಟುಕೊಂಡು ದಿನವೂ ಒಂದೆರಡು ಬಾರಿ,ಬಾರಿಯೊಂದಕ್ಕೆ ಅರ್ಧಟೀ ಸ್ಪೂನ್ ಪುಡಿಯಲ್ಲಿ ತಕ್ಕಷ್ಟು ಎಳ್ಳೆಣ್ಣೆ ಕಲಿಸಿ ಸೇವಿಸುತ್ತಿದ್ದರೆ ಕಜ್ಜಿ, ನವೆ, ಸೋರಿಯಾಸಿಸ್‌ನಂತಹ ಚರ್ಮರೋಗಗಳು, ತುರಿಕೆಗಳು ಶಮನಗೊಳ್ಳುತ್ತವೆ.

**ಕೆಮ್ಮು ಕಡಿಮೆಯಾಗಲು :**

30 ಗ್ರಾಂ ತ್ರಿಕಟು ಚೂರ್ಣದಲ್ಲಿ 10 ಗ್ರಾಂ ಲವಂಗದ ಚೂರ್ಣವನ್ನು ಕಲಿಸಿ ಮುಂಜಾನೆ - ಸಂಜೆ ಬಾರಿಯೊಂದಕ್ಕೆ ಅರ್ಧಗ್ರಾಂ ಚೂರ್ಣವನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿರಬೇಕು.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ತಿರುಮಲೆಯಲ್ಲಿ

## ಮಾಡಬೇಕಾದವು; ಮಾಡಬಾರದವುಗಳು ಹಾಗೂ ನಿಷಿದ್ಧವಾದವು.

### ಮಾಡಬೇಕಾದವು :

- ☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
- ☑ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ,
- ☑ ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
- ☑ ದೇವರ ದರ್ಶನಕ್ಕೆ ಸರದಿಯ ಸಾಲು ಸೇರಿರಿ.
- ☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
- ☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು
- ☑ ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
- ☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
- ☑ ತಿರುಮಲೆಗೆ ಬಂದಾಗ ಪ್ರಾಚೀನಪರಂಪರೆಯನ್ನೂ ಆಚಾರವನ್ನೂ ಗೌರವಿಸಿ.
- ☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
- ☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ. ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

### ಮಾಡಬಾರದವು :

- ☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
- ☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
- ☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
- ☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
- ☒ ಹೂವು ಮುಡಿಯದಿರಿ. (ಎಲ್ಲ ಹೂವುಗಳೂ ದೇವರಿಗೇ.)
- ☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
- ☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
- ☒ ಆಲಯದ ಒಳಗೆ, ಹೊರಗೆ ಪಾದರಕ್ಷೆಗಳನ್ನು ಧರಿಸಿ ಓಡಾಡಬೇಡಿರಿ.

### ನಿಷೇಧಿತ ಪದಾರ್ಥಗಳು :( ನಿಷೇಧಿಸಿದವು)

- ☒ ತಿರುಮಲೆಯಲ್ಲಿ ಮಾಂಸಾಹಾರವನ್ನು ಬಳಸಬೇಡಿರಿ. ಮಾದಕ ವಸ್ತು,ಪೇಯಗಳನ್ನು ಬಳಸಬೇಡಿರಿ. ಧೂಮಪಾನ ಮಾಡಬೇಡಿರಿ.
- ☒ ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
- ☒ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
- ☒ ದೇವಾಲಯದಲ್ಲಿ ಉಗುಳುವುದೇ ಮುಂತಾದವುಗಳನ್ನು ಮಾಡದಿರಿ.
- ☒ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
- ☒ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣೆ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ☒ ಪ್ರಾಣಿವಧೆ, ನಿಷೇಧ.
- ☒ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
- ☒ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ.ಆಯುಧಗಳನ್ನು ತರಬಾರದು.
- ☒ ಭಿಕ್ಷೆಯನ್ನು ಪ್ರೋತ್ಸಾಹಿಸದಿರಿ.



# ಶ್ರೀ ಅಕ್ಷೋಭ್ಯ ತೀರ್ಥರ ಆರಾಧನೆ

- ತೀರ್ಥಹಳ್ಳಿ ಅನಂತ ಕಲ್ಲಾಪುರ
91104 58767

ಶ್ರೀಮದಾನಂದತೀರ್ಥರ ನಾಲ್ಕನೇ ಶಿಷ್ಯರು. ಶ್ರೀ ಮದ್ವಾಚಾರ್ಯರ ಜೀವಮಾನದಲ್ಲಿ ಅವರ ಜೊತೆಗಿದ್ದ ಪ್ರಮುಖ ಶಿಷ್ಯರಾದ ಶ್ರೀಪದ್ಮನಾಭತೀರ್ಥರು,ಶ್ರೀನರಹರಿತೀರ್ಥರು ಶ್ರೀಮಾಧವ ತೀರ್ಥರು, ಶ್ರೀ ಅಕ್ಷೋಭ್ಯತೀರ್ಥರು ಈ ಎಲ್ಲಾ ಮಹಾನುಭಾವರು ಒಂದೊಂದು ರೀತಿಯಿಂದ ಶ್ರೀಹರಿವಾಯು ಗುರುಗಳ ಸೇವೆಗೈದಿದ್ದಾರೆ. ಈ ನಾಲ್ಕೂ ಜನ ಯತಿಪುಂಗವರು ಮಧ್ವಮತವು ಅಚಂದ್ರಾರ್ಕವಾಗಿ ಕಂಗೊಳಿಸುವಂತೆ ಭದ್ರವಾದ ತಳಹದಿಯನ್ನು ಹಾಕಿರುವರು.

ಪ್ರಕೃತದಲ್ಲಿ ಈ ನಾಲ್ವರ ಪೈಕಿ ಶ್ರೀಅಕ್ಷೋಭ್ಯತೀರ್ಥರು ಮಧ್ವಮತಕ್ಕೆ ಮಾಡಿದ ಅಪರಿಮಿತ ಉಪಕಾರವನ್ನು ನೆನೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಮಧ್ವಾಚಾರ್ಯರ ನೇರ ಅನುಯಾಯಿಗಳಾಗಿ ಮಾಧ್ವಪೀಠದ ಅಲಂಕಾರ ಮಾಡಿದ ಕೊನೆಯ ಆಚಾರ್ಯರ ಅಕ್ಷೋಭ್ಯತೀರ್ಥರು. ವ್ಯಾಸತೀರ್ಥರು ರಚಿಸಿರುವ ‘ಜಯತೀರ್ಥವಿಜಯ’ ಕೃತಿಯಲ್ಲಿ ಅಕ್ಷೋಭ್ಯತೀರ್ಥರ ಲೀಲೆಗಳ ಕುರಿತು ವರ್ಣಿಸಲಾಗಿದೆ.

ಅಕ್ಷೋಭ್ಯತೀರ್ಥರ ಪೂರ್ವಾಶ್ರಮದ ಹೆಸರು ಗೋವಿಂದ ಭಟ್ಟ.ಮಧ್ವಾಚಾರ್ಯರ ಉಪದೇಶಗಳಿಂದ ಪ್ರಭಾವಿತರಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಅಕ್ಷೋಭ್ಯತೀರ್ಥರಾದರು.ಇವರು 15 ವರ್ಷಗಳ ಕಾಲ ಶ್ರೀಮಧ್ವಾಚಾರ್ಯರ ಸಂಸ್ಥಾನವನ್ನು ಆಳಿದರು.

ಈ ಅವಧಿಯಲ್ಲಿ ಇವರು ನಮ್ಮ ಸಮಾಜಕ್ಕೆ ಅತೀ ಮುಖ್ಯವಾದ ಎರಡು ಮಹಾಕಾರ್ಯಗಳನ್ನು ಸಾಧಿಸಿರುವರು. ಶ್ರೀ ಅಕ್ಷೋಭ್ಯತೀರ್ಥರು ತಮ್ಮ ಶಿಷ್ಯರಾದ ಜಯತೀರ್ಥರಿಗೆ ಸಕಲ ವೇದಾಂತ ಗ್ರಂಥಗಳ ಪಾಠವನ್ನು ಹೇಳಿದರು.

ಮುಳಬಾಗಿಲಿನಲ್ಲಿ ಅಕ್ಷೋಭ್ಯತೀರ್ಥರು ಮತ್ತು ಆ ಕಾಲದಲ್ಲಿ ಮಾಯಾವಾದವನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ಹೆಸರಾಂತ ಆಚಾರ್ಯರಾದ ವಿಜಯನಗರ ಸಾಮ್ರಾಜ್ಯದ ಶ್ರೀ ವಿದ್ಯಾರಣ್ಯರೊಡನೆ ನಡುವೆ ದ್ವೈತ ಮತ್ತು ಅದ್ವೈತ ಸಿದ್ಧಾಂತ ಕುರಿತಂತೆ ಮುಖಾಮುಖಿ ಚರ್ಚೆ ನಡೆಯಿತು.

ಆ ಸುದೀರ್ಘ, ಐತಿಹಾಸಿಕ ಚರ್ಚೆಯಲ್ಲಿ ವಿದ್ಯಾರಣ್ಯರನ್ನು ಅಕ್ಷೋಭ್ಯರು ಸೋಲಿಸಿದರು. ದೇವೋತ್ತಮ ಪರಮ ಪುರುಷ ಶ್ರೀ ಹರಿಯೇ ಈ ಜಗದ ಪರಮ, ನಿತ್ಯ ಸತ್ಯ, ಉಳಿದೆಲ್ಲಾ ಜೀವಿಗಳು ಆತನ ಸೇವಕರು ಎಂಬುದನ್ನು ಅಕ್ಷೋಭ್ಯರು ಸಂಶಯಕ್ಕೆಡೆಯಿಲ್ಲದಂತೆ ನಿರೂಪಿಸಿದರು.ಮಧ್ವಾಚಾರ್ಯರ ಸಿದ್ಧಾಂತ ಪ್ರಚಾರದಲ್ಲಿ ಅಕ್ಷೋಭ್ಯರ ಈ ಗೆಲುವು ಒಂದು ಮಹತ್ವ ತಿರುವು ಎಂದೇ ಭಾವಿಸಲಾಗಿದೆ.

ತತ್ವಮಸಿ ಪದದ ಅರ್ಥವನ್ನು ಜೀವ ಮತ್ತು ಬ್ರಹ್ಮನ ಪ್ರತ್ಯೇಕತೆಯ ಉಪಮೆಯೊಂದಿಗೆ ಹೋಲಿಸಿದರು. ವ್ಯಾಕರಣದ

ರೀತ್ಯ ತೆಗೆದುಕೊಂಡಾಗ,ಜೀವ ಎನ್ನುವುದು ದೇವರ ಸೇವಕ, ದೇವರಿಲ್ಲದೆ ಜೀವನಿಲ್ಲ ಎಂಬ ವಾದವನ್ನು ಮಂಡಿಸಿದರು. ಅಕ್ಷೋಭ್ಯತೀರ್ಥರ ವಾದಕ್ಕೆ ಎದು ರಾಡಲು ವಿದ್ಯಾರಣ್ಯರ ಬಳಿ ಮಾತುಗಳೇ ಇರಲಿಲ್ಲ. ಅವರನ್ನು ಸೋಲಿಸಿ ಜಯಭೇರಿ ಬಾರಿಸಿ ಶ್ರೀ ಮಧ್ವಾ ಚಾರ್ಯರ ಮತವನ್ನು ಹೆಚ್ಚು ಹೆಚ್ಚಾಗಿ ಪ್ರಚಾರ ಮಾಡಿ ದರು.

ಆ ಸಂದರ್ಭದಲ್ಲಿ ಇಡೀ - ಪ್ರತಿ ವಾದಕ್ಕೆ ಸಾಕ್ಷಿ ಯಾಗಿದ್ದ ವಿದ್ವಾಂಸರೊಬ್ಬರು 'ಆಸೀನಾ ತತ್ತ್ವ ಮಸೀನಾ ಪರಜೀವ ಪ್ರಭೋದಿನಾ। ವಿದುಯಾರಣ್ಯಂ ಮ್ಯಹಾ ರಣ್ಯಂ ಅಕ್ಷೋಭ್ಯಮುನಿ ರಾಚ್ಛಿನಮ್' ಎಂದು ಒಕ್ಕಣಿ ಸಿದರು. ಅಂದರೆ,ಅಕ್ಷೋಭ್ಯತೀರ್ಥರು ವಿದ್ಯಾರಣ್ಯರೆಂಬ ಕಾಡನ್ನು ತತ್ತ್ವಮಸಿ ಎಂಬ ಆಯುಧದಿಂದ ನೆಲಸಮ ಮಾಡಿದರು. ಅದರೊಂದಿಗೆ ಜೀವ ಮತ್ತು ಬ್ರಹ್ಮನ ನಡು ವಿನ ಸಂಬಂಧವನ್ನು ವಿಸ್ತೃತವಾಗಿ ವಿವರಿಸಿದರು.

ಮಧ್ವಸಿದ್ಧಾಂತದ ಗೆಲುವಿನ ಸಂಕೇತವಾದ ಈ ವಾದದ ಸ್ಮರಣೆಗೆಂದೇ ಮುಳುಬಾಗಿಲಿನಲ್ಲಿಯೇ ಹಂಚು ಕಲ್ಲು ಬೆಟ್ಟದ ಶಿರೋಭಾಗದಲ್ಲಿ ವಿಜಯ ಸೂಚಕವಾದ ಶಿಲಾಸ್ತಂಭವನ್ನು ಪ್ರತಿಷ್ಠಾಪಿಸಿ ಅದರ ಮೇಲೆ, ಅದರ ಹತ್ತಿರದ ಗುಡ್ಡದ ಮೇಲೂ ಸಂಸ್ಕೃತ, ಕನ್ನಡ ಮತ್ತು ತಮಿಳು ಅಕ್ಷರಗಳಲ್ಲಿ, ಶ್ಲೋಕವನ್ನು ಕೆತ್ತಿಸಿ ಅವರು ಚಿರ ಸ್ಮರಣೆಯರಾಗಿ ಕೆಲಸ ಮಾಡಿದ್ದಾರೆ.

ಇದನ್ನು ಇಂದಿಗೂ ನೋಡಬಹುದು.ಈ ಅಂಶ ವನ್ನು ಟೀಕಾಕೃತ ಪಾದರು ತಮ್ಮ ತತ್ತ್ವ ಪ್ರಕಾಶಿಕಾ ಗ್ರಂಥದ ಮಂಗಳಚರಣ ಶ್ಲೋಕದಲ್ಲಿ ಉಲ್ಲೇಖಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಕೂಡ್ಲಿ ಗ್ರಾಮದಲ್ಲಿ ಒಂದು ಮಠವನ್ನು ಸ್ಥಾಪಿಸಿ "ತ್ರೈಲೋಕ್ಯ ಭೂಷಣತೀರ್ಥರು" ಎಂಬುವವರಿಗೆ ಆಶ್ರಮ ಕೊಟ್ಟು ಮಧ್ವತತ್ವವನ್ನು ಪ್ರಚಾರ ಮಾಡಲು ಯೋಜಿಸಿದರು.

ಅದರಂತೆ ತೀರ್ಥಹಳ್ಳಿ ತಾಲ್ಲೂಕಿನ ದೂರ್ವಾ ಸಪುರದ ತುಂಗಾತೀರದಲಿ ಬಾಣಕರ (ಬಾಳಗಾರ) ಎಂಬಲ್ಲಿಯೂ ಒಂದು ಸ್ವತಂತ್ರ ಮಠವನ್ನು ಸ್ಥಾಪಿಸಿ



ಲೋಕ ಪೂಜ್ಯರು ಎಂಬುವವರಿಗೆ ಆಶ್ರಮ ಕೊಟ್ಟು ತತ್ತ್ವಪ್ರಚಾರ ಮಾಡಿ ದರು.

ಮಧ್ವಾಚಾರ್ಯರ ಬೋಧನೆಗಳನ್ನು ನಾಡಿನ ಮೂಲೆ ಮೂಲೆಗೂ ತಲುಪಿಸಲೆಂದೇ ಅಕ್ಷೋಭ್ಯತೀರ್ಥರು ತಮ್ಮ ಶಿಷ್ಯ ಜಯತೀರ್ಥರಿಗೆ ವಿಶೇಷ ತರಬೇತಿ ನೀಡಿದರು. ಅಕ್ಷೋಭ್ಯರ ಆದೇಶ ದಂತೆ ಮಧ್ವಾಚಾರ್ಯರ ಕೃತಿಗಳ ಮೇಲೆ ವ್ಯಾಖ್ಯಾನಗಳನ್ನು ಬರೆದ ಜಯತೀರ್ಥರೂ, ನಾಡಿದುದ್ದಗಲಕ್ಕೂ ಹರಿಪ್ರಜ್ಞೆ ಪ್ರಚಾರ ಮಾಡಿದರು.

**ಕೃತಿಗಳು:** ಮಧ್ವಾಚಾರ್ಯರ ಬೋಧನೆಗಳನ್ನೊಳಗೊಂಡ 'ಮಾಧ್ವ ತತ್ವಸಾರ ಸಂಗ್ರಹ' ಎಂಬ ಕೃತಿಯನ್ನು ಅಕ್ಷೋಭ್ಯರು ರಚಿಸಿದ್ದಾರೆ. ಆದರೆ ಈಗ ಈ ಕೃತಿ ಲಭ್ಯವಿಲ್ಲ. ಇದಲ್ಲದೇ ವೇದಗಳ ಮುಖ್ಯಾಂಶ ಗಳನ್ನೊಳಗೊಂಡ ವೇದಸಾರ ಸಂಗ್ರಹ' ಎಂಬ ಕೃತಿಯನ್ನು ಇವರು ರಚಿಸಿದ್ದಾರೆ.

ಇವರು 15 ವರ್ಷ ಶ್ರೀಮೂಲಸೀತಾರಾಮರನ್ನು ಪೂಜಿಸಿ 1353 ರಲ್ಲಿ ಶ್ರೀಟೀಕಾರಾಯರಿಗೆ (ಶ್ರೀಜಯತೀರ್ಥರಿಗೆ) ಸಂಸ್ಥಾನ ವನ್ನು ಕೊಟ್ಟು 1367 ನೇ ವಿಶ್ವಾವಸು ನಾಮ ಸಂವತ್ಸರದ ಮಾರ್ಗ ಶೀರ್ಷ ಕೃಷ್ಣ ಪಂಚಮೀ ದಿನ ವೃಂದಾವನಸ್ಥರಾದರು.ಇವರ ವೃಂದಾವನವು ಕಾಗಿನಿ ನದಿಯ ದಂಡೆಯ ಮೇಲೆ ಮಳಖೇಡ ಗ್ರಾಮ ದಲ್ಲಿದೆ.

ಯೋ ವಿದ್ಯಾರಣ್ಯವಿಪಿನಂ ತತ್ತ್ವಮಸ್ಯಾಸಿನಾಚ್ಛಿನತ್।
ಶ್ರೀಮದೋಕ್ಷೋಭ್ಯ ತೀರ್ಥಾಯ ನಮಸ್ತಸ್ಮೈ ಮಹಾತ್ಮನೇ ॥

# ಶ್ರೀ ಗುರು ಪ್ರಾಣೇಶ ವಿಠಲದಾಸರು

- ಡಾ ॥ ರಾಮಚಂದ್ರ ದಾಸ್ ಸಿ.ಜೆ.
9483384584

ದಾಸ ಪರಂಪರೆಯಲ್ಲಿ ಮಹಾನುಭಾವರು ಹಾಗೂ ಅಪರೋಕ್ಷ ಜ್ಞಾನಿಗಳ ಅವತಾರದಿಂದ ಧಾರ್ಮಿಕ ನೆಲೆಗಟ್ಟಿನ ಬುನಾದಿ ಭದ್ರವಾಗಿ , ಸಮಾಜದ ಉನ್ನತಿಗೆ ಕಾರಣವಾಗಿದೆ. ಇದೇ ಭರತ ಭೂಮಿಯ ಇಂಪು, ಸೊಂಪು ದಾಸರ ಮಹಿಮೆಯನ್ನು, ಇವರ ಶಿಷ್ಯರಾದ ಶ್ರೀಶ ಪ್ರಾಣೇಶವಿಠಲದಾಸರು ಕೊಂಡಾಡಿರುವ

"ಶ್ರೀಶ ಭಜಕ ಗುರು ಪ್ರಾಣೇಶ
ದಾಸಾರ್ಯ ಹರಿದಾಸವರ್ಯಾ॥
ಏಸುಪೇಳಲಿ ಇವರ
ಚರಿತೆಯನು ಆಪಾರವು ಇನ್ನೂ।
ಸೋಸಿ ನೋಡಲು ಎನಗೆ
ವಶವಲ್ಲಾ ಇದು ಪುಸಿಯೂ ಅಲ್ಲ।
ಶ್ರೀಶ ಪ್ರಾಣೇಶವಿಠಲ ತಾಬಲ್ಲ।
ವಲಿದಿಹನಲ್ಲಾ ॥

ಎಂಬ ಕೃತಿಯಲ್ಲಿ, ದಾಸರ ಮಹಿಮೆಯು ಅಪಾರ, ಇದು ಊಹೆಗೂ ನಿಲುಕುವುದು ಅಸಾಧ್ಯ, ಆದರೂ ಅವರು ಕರುಣಾಮಯಿಗಳಾದ್ದರಿಂದ ನಮಗೆ ಒಲಿದಿದ್ದಾರೆ ಎಂದು ಸ್ತುತಿಸಿದ್ದಾರೆ.

ಇವರು ಶ್ರೀಪ್ರಾಣೇಶ ದಾಸರ ಮಕ್ಕಳು, ಹೆಸರು ವೆಂಕಟರಾಯ. ಬಾಲ್ಯದಲ್ಲಿಯೇ ಭಗವಂತನ ಮಹಿಮಾ ವಿಶೇಷಗಳನ್ನು ತಂದೆಯವರಿಂದ ಶ್ರವಣಮಾಡುವ ಭಾಗ್ಯ ಪಡೆದಿದ್ದರು. ಮಗನನ್ನು ಉದ್ಧರಿಸಬೇಕೆಂಬ ಇಚ್ಛೆಯಿಂದ, ಅವನನ್ನು ಶ್ರೀ ಜಗನ್ನಾಥದಾಸರ ಬಳಿ ಸೇವಾದಿಗಳಿಗಾಗಿ ಕಳುಹಿಸಿದರು. ಅಲ್ಲಿ ಬಹು ಭಕ್ತಿ, ನಿಷ್ಠೆಯಿಂದ ವಿನಯ ಸಂಪನ್ನರಾಗಿ ಸುಮಾರು ಹನ್ನೆರಡು ವರ್ಷಗಳ ಪರ್ಯಂತರ ರಂಗವಲಿದ ದಾಸರ ಸೇವಾದಿ ಕೈಂಕರ್ಯ ಮಾಡಿದ್ದರ ಫಲವಾಗಿ, ಅವರ ಪರಮಾನುಗ್ರಹದಿಂದ ವಿದ್ಯಾ ವಿನಯ ಸಂಪನ್ನರಾಗಿ ಕಂಗೊಳಿಸಿ, ಆಜ್ಞೆಯಂತೆ ತಂದೆಯವರಾದ ಪ್ರಾಣೇಶ ದಾಸರಿಂದ ಅನುಗ್ರಹೀತರಾಗಿ "ಗುರುಪ್ರಾಣೇಶ ವಿಠಲ" ಎಂಬ ಅಂಕಿತೋಪದೇಶವಾಗಿ ದಾಸ ದೀಕ್ಷೆಯನ್ನು ಹೊಂದಿದರು. ಆ ಸಮಯದಲ್ಲಿ ಶ್ರೀ ಜಗನ್ನಾಥದಾಸರು ಅನುಗ್ರಹ ಪೂರ್ವಕವಾಗಿ ತಂಬೂರಿಯನ್ನು ನೀಡಿದರು. ಅದು ಈಗಲೂ ಇವರ ವಂಶರಿಂದ ಪೂಜೆಗೊಳ್ಳುತ್ತಿದೆ.

ದೇವತೆಗಳು, ಋಷಿಮುನಿಗಳು ಮುಂತಾದವರು ಭೂಮಿಯಲ್ಲಿ ಅವತರಿಸಿದಾಗ, ಅವರನ್ನು ಪರೋಕ್ಷವಾಗಿ ಸರ್ವದಾ, ಭಗವಂತನು, ರಕ್ಷಿಸುತ್ತಿರುತ್ತಾನೆ. ಆದರೆ ಕಾಲ ಪಕ್ವವಾದ ತಕ್ಷಣ ಅವರ ಸಾಧನೆಗೆ ನೇರವಾಗಿ ಪ್ರತ್ಯಕ್ಷವಾಗಿ ಗುರುಗಳು ಅಥವಾ ಅತಿಮಾನುಷ ಘಟನೆಗಳಿಂದ, ಅವರು ಪರಿವರ್ತಿ ತರಾಗುವಂತೆ ಅವಕಾಶಗಳನ್ನು ಕಲ್ಪಿಸಿ ಕೊಡುತ್ತಾನೆ. ಇದನ್ನು ಎಲ್ಲ ಮಹಾನು ಭಾವರ ಜೀವನದ ಘಟ್ಟಗಳಲ್ಲಿ ಕಾಣಬಹುದಾಗಿದೆ. ಒಮ್ಮೆ ಗುರು ಪ್ರಾಣೇಶದಾಸರು ಕಾರ್ಯನಿಮಿತ್ತ ತಮ್ಮ ಕುಲಕರಣಿ ವೃತ್ತಿಯ ಗ್ರಾಮವಾದ ರಾಮಪುರಕ್ಕೆ ಅಶ್ವಾರೂಢರಾಗಿ ಹೋಗುತ್ತಿದ್ದರು.ಮಾರ್ಗ ಮಧ್ಯದಲ್ಲಿ ಆಕಸ್ಮಿಕವಾಗಿ, ಎಲ್ಲಿಂದಲೋ ಒಂದು ವ್ಯಾಘ್ರವು ಪ್ರತ್ಯಕ್ಷವಾಗಿ ದಾಸರ ಕುದುರೆಯನ್ನು ಮಾತ್ರ ಹಿಂಸಿಸಿ, ಅವರಿಗೆ, ಯಾವ ರೀತಿಯ ಅಪಾಯವನ್ನು ಮಾಡದೆ ಹಿಂತಿರುಗಿ ಹೊರಟು ಹೋಯಿತು.ಈ ಅವಾಂತರದಲ್ಲಿ ದಾಸರು ಮೂಕ ವಿಸ್ಮಿತರಾಗಿದ್ದಾಗ, ಅವರ ರುಮಾಲು ತಲೆಯ ಮೇಲಿನಿಂದ ಕೆಳಗೆ ಬಿದ್ದಿತಂತೆ. ಈ ಘಟನೆಯು ಅವರ ಜೀವನದ ಪರಿವರ್ತನೆಗೆ ಮುಖ್ಯ ಕಾರಣವಾಯಿತು. ಸರ್ವದಾ ಭಗವಧ್ಯಾನ ಮಾಡುವತ್ತ ಅವರ ಮನಸ್ಸು ಹಾತೊರೆಯತೊಡಗಿ, ಸಂಸಾರ,ಲೌಕಿಕ ಇತ್ಯಾದಿಗಳು ನಶ್ವರವೆಂಬುದು ಅವರಿಗೆ ಮನದಟ್ಟಾಗಿ ಅವರ ಗುರುಗಳು ಹಾಗೂ ತಂದೆಯಾದ ಶ್ರೀಪ್ರಾಣೇಶ ದಾಸರ ಚರಣ ಕಮಲಗಳಲ್ಲಿ ಭಕ್ತಿಯಿಂದ ಶರಣಾಗತರಾಗಿ ಅಪರೋಕ್ಷ ಜ್ಞಾನಿಗಳ ಸಾಲಿನಲ್ಲಿ ನಿಂತರು. ಆಗ

"ತಂದೆ ಪ್ರಾಣೇಶ ವಿಠಲರಾಯ ಒಲಿದು ಆ -।
ನಂದ ಕೊಡು ಈ ಭಕ್ತಿಗೆ ॥

ಪೊಂದಿಕೊಂಡಿಹ ನಿನ್ನನೆಂದು ನಾ ಪ್ರಾರ್ಥಿಸುವೆ।
ಮಂದರೋದ್ಧರ ಮುಕುಂದಾ। ನಂದಾ ॥ಪ॥

ಎಂಬುದಾಗಿ ಸ್ತೋತ್ರ ಮಾಡಿದರು. ವಾಯುದೇವರ ಅನು ಗ್ರಹ, ಸಾಧನೆಗೆ ಬಹುಮುಖ್ಯ. ಆದ್ದರಿಂದ ಅವರು "ಆನಂದ ತೀರ್ಥರೆಂಬೊ ಆರ್ಥೀಯ ಪೆಸರುಳ್ಳ ಗುರುಮಧ್ವ ಮುನಿರಾಯ.."

"ಪವನಾ ಸಂಭೂತಾ ಒಲಿದು...."

ಎಂಬ ಕೃತಿಗಳ ಜೊತೆಗೆ ಸುಮಾರು 15 ಕೀರ್ತನೆ ಗಳನ್ನು ರಚಿಸಿದ್ದಾರೆ. ಶ್ರೀಪ್ರಾಣೇಶ ವಿಠಲದಾಸರು ತಮ್ಮ ಶಿಷ್ಯರಾದ ಗುರುಪ್ರಾಣೇಶ ವಿಠಲದಾಸರನ್ನು ಕುರಿತು, ಇನ್ನು ಮುಂದೆ ಕೃತಿಗಳನ್ನು ರಚಿಸಬಾರದೆಂದು ಅಪ್ಪಣೆ ಕೊಡಿಸಿದ ನಂತರ, ಈ ಕಾರ್ಯವನ್ನು ನಿಲ್ಲಿಸಿದರೆಂದು ತಿಳಿದು ಬರು ತ್ತದೆ.

ಶ್ರೀಪ್ರಾಣೇಶದಾಸರ ಅಣ್ಣ ರಾಘಪ್ಪನವರ ಮಗಳು ಹಿರೇ ವೆಂಕಮ್ಮನ ಮಗ ರಾಮರಾಯನನ್ನು, ಅವರ ತಂದೆಯ ಅಕಾಲ ಮರಣದ ನಂತರ, ಲಿಂಗಸೂಗೂರಿಗೆ ಕರೆದು ಕೊಂಡು ಬಂದು ಉಪನಯನ ಮಾಡಿದರೂ, ವಿದ್ಯೆಯ ಕಡೆಗೆ ಗಮನವೇ ಇರಲಿಲ್ಲ.ಈತನ ಹುಡುಗಾಟವನ್ನು ಕಂಡ ಗುರು ಪ್ರಾಣೇಶ ವಿಠಲದಾಸರು, ಪೂಜೆಗಾಗಿ ಗಂಧತೇಯುವ ಸಮಯದಲ್ಲಿ ಗಂಧದ ಕೊರಡಿನಿಂದಲೇ ಅವನ ತಲೆಗೆ ಹೊಡೆದಿದ್ದರ ಪರಿಣಾಮ ರಕ್ತ ಸೋರಲಾರಂಭಿಸಿತು. ದಾಸರು ಆಗ, ಇವನಲ್ಲಿದ್ದ ದುಷ್ಟ ರಕ್ತ ಹರಿದು ಹೋಗಲೆಂದು ಸ್ವಲ್ಪ ಹೊತ್ತು ಸುಮ್ಮನಿದ್ದು, ತಾವೇ ಅವನಿಗೆ ಸ್ನಾನಾದಿಗಳನ್ನು ಮಾಡಿಸಿ ಶುದ್ಧಗೊಳಿಸಿ ಶ್ರೀ ವರದೇಂದ್ರ ಗುರುರಾಜರ ಸನ್ನಿಧಿಗೆ ಕರೆದೊಯ್ದು ಮಂತ್ರೋಪದೇಶ ಮಾಡಿ, ದಾಸ ದೀಕ್ಷೆಯನ್ನಿತ್ತು, "ಶ್ರೀಶ ಪ್ರಾಣೇಶ ವಿಠಲ" ಎಂಬ ಅಂಕಿತ ಪ್ರದಾನ ಮಾಡಿದರು. ಪರಶೂಶಿಲೆ ತಾಕಿದ ಲೋಹವು ಬಂಗಾರವಾಗುವಂತೆ, ಶ್ರೀ ಗುರುಪ್ರಾಣೇಶ ದಾಸರ ಅನುಗ್ರಹದಿಂದ ಸುಪ್ತವಾಗಿದ್ದ ಜ್ಞಾನವು ಹೊರಚಿಮ್ಮಿ, ಕೂಡಲೇ "ದಾಸರ ಭಾಗ್ಯವಿದು। ಹರಿ ದಾಸರ ಭಾಗ್ಯವಿದು" ಎಂಬ ಕೀರ್ತನೆ ಹೊರಹೊಮ್ಮಿತು. ಗುರು ಗಳ ಮಾರ್ಗದರ್ಶನದಲ್ಲಿಯೇ ಶ್ರೀಶ ಪ್ರಾಣೇಶ ವಿಠಲರಿಗೆ ಮಧ್ವ ಶಾಸ್ತ್ರದ ಅಧ್ಯಯನವಾಗಿ ಸುಜ್ಞಾನ ಹಾಗೂ ಸತ್ಕರ್ಮಾ ಚರಣೆ ಯಿಂದ ಅಪರೋಕ್ಷಿಗಳ ಸಾಲಿನಲ್ಲಿ ಆಸೀನರಾದರು. ನಂತರ ಇವರ ಗುರುಗಳೇ, ಇವರಿಗೆ ರಾಘಮ್ಮನವರೊಂದಿಗೆ ವಿವಾಹ ನೆರವೇರಿಸಿ,ವಾಸಕ್ಕೆ ಒಂದು ಮನೆ ಹಾಗೂ ಸ್ವಲ್ಪ ಹೊಲವನ್ನು ಅನುಗ್ರಹಿಸಿದರು. ಶ್ರೀ ಗುರು ಪ್ರಾಣೇಶ ವಿಠಲ ದಾಸರು ತಮ್ಮ ಶಿಷ್ಯ ಪರಂಪರೆಯನ್ನು ಶ್ರೀಶ ಪ್ರಾಣೇಶ ದಾಸರ ಮೂಲಕ ಮುಂದುವರೆಸಿದ್ದಾರೆ.

ಶ್ರೀಗುರುಪ್ರಾಣೇಶ ವಿಠಲದಾಸರು ಅಪರೋಕ್ಷ ಜ್ಞಾನಿ ಗಳಾಗಿದ್ದರಿಂದ ತಮ್ಮ ಅವತಾರ ಸಮಾಪ್ತಿಯ ಕಾಲವನ್ನು ಬಲ್ಲವ ರಾಗಿದ್ದು, ಸುಮಾರು ಆರು ತಿಂಗಳು ಮೊದಲೇ ತಮ್ಮ ನಿರ್ಯಾಣದ ದಿನವನ್ನು ತಿಳಿಸಿ,ತಮ್ಮ ಅಂತ್ಯಸಂಸ್ಕಾರದ ಕ್ರಿಯೆಗಳಿಗೆ, ಬೇಕಾದ ಸ್ಥಳವನ್ನು ಸ್ವಚ್ಛಗೊಳಿಸಿ,ಗಚ್ಚಿನ ಕಟೆ ಯನ್ನು ಕಟ್ಟಿಸಿ, ತುಳಸಿ, ಚಂದನ ಕಾಷ್ಠಗಳನ್ನು ಸಂಗ್ರಹಿಸಿ ಡುವಂತೆ ಆಜ್ಞಾಪಿಸಿದರು.

ರೌದ್ರಿನಾಮ ಸಂವತ್ಸರದ, ಶಿಶಿರ ಋತುವಿನ, ಮಾಘ ಮಾಸದ ಕೃಷ್ಣಪಕ್ಷದ ಅಮಾವಾಸ್ಯೆಯ ತಿಥಿಯ, ಸೋಮ ವಾರ, ಪೂರ್ವಾಭಾದ್ರ ನಕ್ಷತ್ರ, ದ್ವಿತೀಯ ಯಾಮಕ್ಕೆ ಸರಿ ಯಾಗಿ, ಲಿಂಗಸೂಗೂರಿಗೆ ಹತ್ತಿರದಲ್ಲಿ ಪ್ರವಹಿಸುತ್ತಿದ್ದ ಕೃಷ್ಣಾ ಭಾಗೀರಥಿಯ ಪವಿತ್ರ ಜಲದಿಂದ ಶುಭ್ರಸ್ನಾತರಾಗಿ, ಊರ್ಧ್ವ ಪುಂಡ್ರಗಳನ್ನು ಧಾರಣ ಮಾಡಿ,ತಮ್ಮ ಪ್ರಿಯಶಿಷ್ಯರಾದ ಶ್ರೀಶ ಪ್ರಾಣೇಶದಾಸರಿಂದ ತೀರ್ಥವನ್ನು ತೆಗೆದುಕೊಂಡು,ತಾವು ಹನ್ನೆರಡು ವರ್ಷ ಶ್ರೀಜಗನ್ನಾಥದಾಸರ ಮತ್ತು ಪ್ರಾಣೇಶದಾಸರ ಸೇವೆಗೈದ ತಮ್ಮ ಹಸ್ತಗಳನ್ನು ಅವರ ತಲೆಯ ಮೇಲೆ ಇಟ್ಟು, ಆಶೀರ್ವದಿಸಿದರು, ನಂತರ ಪದ್ಮಾಸನದಲ್ಲಿ ಕುಳಿತು, ಹರಿಧ್ಯಾನ ಗೈಯ್ಯುತ್ತಾ,ಲಯ ಚಿಂತನೆ ಮಾಡಿ,ಇಚ್ಛಾಮರಣಿಗಳಾಗಿ ವಾಸು ದೇವನ ಪುರಕ್ಕೆ ತೆರಳಿದರು. ಆಗ ಶ್ರೀಶ ಪ್ರಾಣೇಶ ವಿಠಲದಾಸರು ದುಃಖಾಶ್ರುಪೂರಿತರಾಗಿ

"ವಾಸುದೇವನ ಪುರಕೆ ತೆರಳಿದರು।
ಶ್ರೀಶನಾಪ್ರಿಯ ಗುರು ಪ್ರಾಣೇಶ ದಾಸಾರ್ಯ ॥ಪ॥
ಮೋಕ್ಷರೌದ್ರೀ ಅಬ್ಧ ಮಾಘದರ್ಶಾ ಪೂರ್ವಾಭಾದ್ದರ।
ನಕ್ಷತ್ರ ಸೋಮವಾರದಿನದ ದ್ವಿತೀಯ ಯಾಮದಿ॥
ಲಕ್ಷ ಇಟ್ಟಾಲಯದ ಚಿಂತನೆ ಗೈಯ್ಯುತಲಿ।
ಪಕ್ಷಿವಾಹನ ಶ್ರೀಶಪ್ರಾಣೇಶ ವಿಠಲನುತ॥

ಎಂಬುದಾಗಿ ಸ್ತೋತ್ರಗೈದರು. ಇಂತಹ ಒಂದು ಮಹಾನ್ ಚೇತನ ಭೌತಿಕ ಜಗತ್ತಿನಿಂದ ಮರೆಯಾಯಿತೆಂದು ದುಃಖಿಸಿದ ಆಸ್ತಿಕರು ಇರಲು ಸಾಧ್ಯವೇ. ಇವರು ತೋರಿದ ಮಾರ್ಗದಲ್ಲಿ ಧರ್ಮಾಚರಣೆಯನ್ನು ಮಾಡಿದರೆ ಅದೇ ದಾಸರಿಗೆ ನಾವು ತೋರುವ ಭಕ್ತಿ, ಗೌರವ,

ಶ್ರೀಕೃಷ್ಣಾರ್ಪಣಮಸ್ತು.

# ಸಂಸ್ಕೃತ ಕಲಿಯೋಣ...

# तृतीयः पाठः ಮೂರನೆಯ ಪಾಠ

ರಚನೆ :- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ :- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

एषः = ಇವನು? वा = ಆ, ಓ आसीत् = ಇದ್ದನು कः = ಯಾವನು ? न = ಇಲ್ಲ, ಅಲ್ಲ
आसीः= ಇದ್ದೀರಿ सर्वः = ಪ್ರತಿಯೊಬ್ಬನೂ बत = ಅಯ್ಯೋ! आसं = ಇದ್ದೆನು


१. एषः तदा कुत्र आसीत्? २. सः तदा अत्र नासीत्। ३. त्वं कुत्र आसीः
४. अहं तत्रासम् ५. कः तत्रासीत्? ६. वयं तत्र न स्मः।
७. ते तत्र न सन्ति। ८. बत सः तत्रास्ति वा ९. एषः तत्र नास्ति वा
१०. सर्वः तत्रास्ति।

1. ಇವನು ಆವಾಗ ಎಲ್ಲಿ ಇದ್ದನು? 2. ಅವನು ಆವಾಗ ಇಲ್ಲಿ ಇಲ್ಲ 3. ನೀವು ಎಲ್ಲಿ ಇದ್ದೆ ?
4. ನಾನು ಅಲ್ಲಿ ಇದ್ದೆ 5. ಯಾವನು ಅಲ್ಲಿ ಇದ್ದನು? 6. ನಾವು ಅಲ್ಲಿ ಇಲ್ಲ
7. ಅವರು ಅಲ್ಲಿ ಇಲ್ಲ 8. ಅಯ್ಯೋ ಅವನು ಅಲ್ಲಿ ಇದ್ದಾನಾ?
9. ಇವನು ಅಲ್ಲಿ ಇಲ್ವಾ? 10. ಪ್ರತಿಯೊಬ್ಬನೂ ಅಲ್ಲಿ ಇದ್ದಾನೆ

१. त्वं तदा कुत्र आसीः? २. अहं तदा तत्र आसम् ३. बत ते तत्र सन्ति वा?
४. अहं अत्र नासम् ५. सः कः? ६. त्वं कः ?
७. त्वं इदानीं कुत्र असि? ८. ते अत्र सन्ति वा? ९. यूयं इदानीं कुत्र स्थ?
१०. वयं इदानीं अत्र न स्मः

1. ನೀನು ಆವಾಗ ಎಲ್ಲಿ ಇದ್ದೆ ? 2. ನಾನಾವಾಗ ಅಲ್ಲಿ ಇದ್ದೆ 3. ಅಯ್ಯೋ ಅವರಲ್ಲಿದ್ದಾರಾ?
4. ನಾನು ಇಲ್ಲಿರಲಿಲ್ಲ 5. ಅವನ್ಯಾರು? 6. ನೀನ್ಯಾರು?
7. ನೀನಿವಾಗ ಎಲ್ಲಿದ್ದೀಯ ? 8. ಅವರಿಲ್ಲಿದ್ದಾರಾ ? 9. ನೀವೀಗ ಎಲ್ಲಿದ್ದೀರಾ ?
10. ನಾವೀಗ ಅಲ್ಲಿಲ್ಲ

# ಪುಸ್ತಕಾವಲೋಕನ




ಲೇಖಕರು : ಡಾ॥ ಪ್ರಕಾಶ್ ಕೆ. ನಾಡಿಗ್

98455 29789

ಬೆಲೆ : ರೂ. 150/- ಪುಟ : 260

ಪ್ರಕಟಿತ ವರ್ಷ : 2020

ಪ್ರಕಾಶಕರು : ಅಭಯ್‌ರಾಘವಿ ಪ್ರಕಾಶನ, ತುಮಕೂರು

**ಹನುಮ !!**

ಭಾರತ ಕಂಡ ಹೋಲಿಕೆಯಿಲ್ಲದ ಮಹಾ ಪುರುಷ. ಅಂದಿಗೂ, ಇಂದಿಗೂ, ಮುಂದೆಂದಿಗೂ ಅಚ್ಚಳಿಯದ ನಾಮವದು. ಪುರುಷ ಸಾಮರ್ಥ್ಯದ ಉನ್ನತ್ತೋನ್ನತ ಶಿಖರ. ಅಪ್ರತಿಮ ಸಾಮರ್ಥ್ಯ ಶಾಲಿಯಾಗಿಯೂ ದಾಸ ಭಾವದ ಪರಾಕಾಷ್ಠೆಯಲ್ಲಿ ಬದುಕಿದವ. ಅಸೀಮ ಕರ್ತೃತ್ವ ಶಕ್ತಿ. ಅಮಿತೋತ್ಸಾಹ. ಅನುಪಮ ಸೇವಾಭಾವ, ಅದಮ್ಯಜೀವಕಾರುಣ್ಯ. ಅನವರತ ಪ್ರಭುಕಾರ್ಯ ನಿಷ್ಠೆ, ಅಸದೃಶ್ಯವಾಕ್ ಕೌಶಲ, ಹಿತವೆನಿಸುವ ನಡವಳಿಕೆ. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಮುಗಿಯಲಾರದ ಸದ್ಗುಣಗಳ ಗಣಿಯಾತ.

ಹನುಮಂತನ ಪೂಜೆ ನಮ್ಮ ನಾಡಿನಲ್ಲಿ ಬಹುವ್ಯಾಪಕವಾಗಿದೆ. 'ಹನುಮನಿಲ್ಲದ ಹಳ್ಳಿಯಿಲ್ಲ' ಎಂಬಂತೆ ನಮ್ಮನ್ನು ಅನಾದಿ ಕಾಲದಿಂದ ಕಾಪಾಡಿಕೊಂಡು ಬಂದಿರುವ ಸಂರಕ್ಷಣ ದೇವತೆ. ಅವನು ಯಾವುದೇ ವಿಶಿಷ್ಟ ಪಂಥದ ದೇವರಲ್ಲ. ಇವನ ಭಕ್ತ ಕೋಟಿಯಲ್ಲಿ ಜಾತಿಭೇದ, ಲಿಂಗಭೇದ ವಯೋಭೇದಗಳಿಲ್ಲ ನಿಷ್ಕಾಮ ಕರ್ಮಕ್ಕೆ ಪರ್ಯಾಯನಾಮ 'ಮಾರುತಿ'.

ಈತ ವಿಷ್ಣುವಿನ ಭಕ್ತ, ಪವನಸುತ, ಶಿವಾಂಶ ಸಂಭೂತ, ಹೃದಯವಂತ, ಧೀಮಂತ ಆರಾಧ್ಯದೈವ. ದೀರ್ಘಾಯುವರ್ಧಕ, ಈತನ ಪೂಜೆ ಎಡಬಿಡದೆ ಈ ಲೋಕದಲ್ಲಿ ನಡೆಯುತ್ತಿರುವುದನ್ನು ಕುರಿತು ತಿಳಿದವರು 'ಬ್ರಹ್ಮನಿಗೆ ನೇರ ಪೂಜೆಯಿಲ್ಲ. ಆದುದರಿಂದ ಬ್ರಹ್ಮನಾಗುವ ಹನುಮಂತನಿಗೆ ಈ ಪೂಜೆಯೆಲ್ಲಾ ನಡೆಯುತ್ತದೆ ಎಂದು ಹೇಳುತ್ತಾರೆ.

ಸೂಕ್ಷ್ಮಾಣು ಜೀವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾಗಿ ವೃತ್ತಿಯಲ್ಲಿ ಔಷಧ ತಯಾರಿಕಾ ಕಂಪನಿಯಲ್ಲಿ ಗುಣಮಟ್ಟ ಖಾತ್ರಿ ವಿಭಾಗದ ಮುಖ್ಯಸ್ಥರಾಗಿ, ಪ್ರವೃತ್ತಿಯಲ್ಲಿ ಬರಹಗಾರರಾಗಿರುವ ಲೇಖಕ ಡಾ॥ ಪ್ರಕಾಶ್ ಕೆ. ನಾಡಿಗ್‌ರು ಜೀವೋತ್ತಮನಾದ ಮುಖ್ಯಪ್ರಾಣ ಕುರಿತು "ಭಕ್ತರ ಪ್ರಾಣ ಮುಖ್ಯಪ್ರಾಣ" ಕೃತಿಯಲ್ಲಿ ಹನುಮನ ಉಗಮ, ವಿಕಾಸ ವಿಶೇಷತೆ ಹಾಗೂ ಹನುಮನ ಬಗ್ಗೆ ಜನಸಾಮಾನ್ಯರಿಗೆ ಗೊತ್ತಿಲ್ಲದ ವಿಶೇಷ ಸಂಗತಿಗಳು ಹಾಗೂ ಕರ್ನಾಟಕದಲ್ಲಿರುವ ಸುಮಾರು 48 ವಿಶಿಷ್ಟವಾದ ಹನುಮಪ್ಪ ಗುಡಿಗಳ ಬಗ್ಗೆ ಓದುಗರಿಗೆ ಪರಿಚಯಿಸಿದ್ದಾರೆ. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಅನೇಕ ಕೃತಿ ರಚಿಸಿರುವ ಹಾಗೂ ನಾಡಿನ ವಿವಿಧ ದಿನಪತ್ರಿಕೆಗಳಲ್ಲಿ ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಬರೆದಿರುವುದು ಶ್ಲಾಘನೀಯ. ಶ್ರೀಯುತರ ಬರವಣಿಗೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಅನೇಕ. ಭಾರತೀಯರಿಗೆ ಗುರುವೂ ಧರ್ಮಾದರ್ಶನವೂ ಆದ ಅಂಜನಾಸುತ ಅನುಗ್ರಹ ಅನವರತವಿರಲಿ ಎಂಬ ಶುಭಹಾರೈಕೆಗಳೊಡನೆ ಹಾರ್ದಿಕ ಅಭಿನಂದನೆಗಳು.

– ಪ್ರಣವ

9035618076

ನೀತಿ ಕಥೆ

# ದುರಾಸೆಯ ಫಲ



- ಶ್ರೀಮತಿ.ಸುಧಾಮಧುಸೂದನ್

ಒಮ್ಮೆ ಒಬ್ಬ ಬಡರೈತನು ಕಷ್ಟಪಟ್ಟು ಒಂದು ಸೇಬುಮಾವನ್ನು ನೆಟ್ಟನು. ಆ ಮರವು ಬೆಳೆದು ದೊಡ್ಡದಾಗಿ ಒಂದೇ ಒಂದು ಸೇಬು ಹಣ್ಣು ಬಿಟ್ಟಿತು. ಆ ರೈತನು ಬಹಳ ಸಂತೋಷ ದಿಂದ ಆ ಹಣ್ಣನ್ನು ಕಿತ್ತನ್ನು. ಯಾರಾದರು ಪ್ರೀತಿಪಾತ್ರರಿಗೆ ಈ ಮೊದಲನೆಯ ಹಣ್ಣನ್ನು ಸಮರ್ಪಿಸಬೇಕೆಂದು ಅಂದುಕೊಂಡು ಆ ಊರಿನ ರಾಜನೇ ದೇವರ ಸಮಾನವೆಂದು ತಿಳಿದು ರಾಜನ ಆಸ್ಥಾನಕ್ಕೆ ಹೋದನು.

ರಾಜನು ಆ ರೈತನನ್ನು ಬರಮಾಡಿ ಕೊಂಡು ಏನು ಎಂದು ಕೇಳಿದಾಗ ರೈತನು ತಾನು ಬೆಳೆದ ಮೊದಲ ಸೇಬಿನ ಹಣ್ಣನ್ನು ನಿಮಗೆ ಕೊಡಬೇಕೆಂದು, ರಾಜನೇ ಪ್ರತ್ಯಕ್ಷ ದೇವರು ಎಂದು ತಿಳಿದು ತಂದೆ ಎಂದನು. ರಾಜನು ಆ ರೈತನ ನಿಷ್ಠೆ ಹಾಗೂ ಉತ್ಸಾಹ ನೋಡಿ ಅವನನ್ನು ನಿರಾಸೆಗೊಳಿಸದೆ," ನಿನಗೆ ಏನು ಬೇಕು" ಎಂದಾಗ ರೈತನು ನನಗೇನು ಬೇಡವೆಂದನು. ಆದರು ರಾಜನು ನಾನು ಹಾಗೇ ಬರಿಕೈಯಲ್ಲಿ ಕಳಿಸಲ್ಲ ಎಂದು ಹೇಳಿ ಅಪಾರವಾದ ಚಿನ್ನ, ಬೆಳ್ಳಿ, ದುಡ್ಡು ಎಲ್ಲವನ್ನು ಒಂದು ಕುದುರೆಯ ಮೇಲೆ ಹೇರಿ ರೈತನನ್ನು ಕುಳ್ಳಿರಿಸಿ ಕಳಿಸಿದನು. ರೈತನನು ಸಂತೋಷ ದಿಂದ ಹೊರಟನು.

ಅವನ ಆ ಅಪಾರ ಐಶ್ವರ್ಯವನ್ನು ಅವನ ಪಕ್ಕದ ಮನೆಯ ರೈತನು ನೋಡಿದನು. ಅವನು ರೈತನನ್ನು ವಿಚಾರಿಸಲು ಬಡ್ಡರೈತನು ಯಾವ ಮುಚ್ಚು ಮರೆ ಇಲ್ಲದೆ ಎಲ್ಲವನ್ನೂ ಹೇಳಿದನು. ಈ ಶ್ರೀಮಂತ ರೈತನೋ ಬಹಳ ಜಿಪುಣ ಒಂದು ಕೊಳೆತ ಹಣ್ಣು ಸಹ ಎಸೆಯುತ್ತಿರಲಿಲ್ಲ. ಅಂತಹವನು ತಾನು ಏನು ಮಾಡಿದಾ ಎಂದರೆ ತನ್ನ ತೋಟದಲ್ಲಿ ಬಿಟ್ಟಿದ್ದಾ ಒಳ್ಳೆಯ ಸೇಬುಹಣ್ಣುಗಳನ್ನು ಗಾಡಿಯಲ್ಲಿ ತುಂಬಿ, ತಾನೂ ಒಳ್ಳೆಯ ಪೋಷಾಕನ್ನು ತೊಟ್ಟು ರಾಜನಲ್ಲಿಗೆ ಹೋದನು.


"ಹೇ ರಾಜನ್ ನನ್ನ ತೋಟದಲ್ಲಿ ಬೆಳೆದ ತಾಜಾ ಸೇಬುಗಳನ್ನು ನಿಮಗೆ ತಂದಿದ್ದೀನಿ, ತೆಗೆದುಕೊಳ್ಳಿ" ಎಂದನು ರಾಜನು ಆ ರೈತನನ್ನು ತಲೆಯಿಂದ ಕಾಲವರೆಗೆ ನೋಡಿದನು. ಅವನ ಉಡುಗೆ ಶುಭ್ರವಾಗಿತ್ತು, ಕೈಯಿಗಳು ಕೋಮಲ ವಾಗಿ ಇತ್ತು, ಬೆರಳುಗಳಲ್ಲಿ ಎರಡೆರಡು ಉಂಗುರ ಹೊಳೆಯುತ್ತಿತ್ತು ಅದೂ ಗಾಡಿ ಭರ್ತಿಹಣ್ಣನ್ನು ನೋಡಿ ಈ ರೈತ ದುರಾಸೆಯಿಂದ ಬಂದಿರುವುದಾಗಿ ಯಾವುದೇ ಸ್ವಾಮಿ ನಿಷ್ಠೆಯಿಂದ ಅಲ್ಲ ಎಂದುಕೊಂಡನು. ಅವನು ರೈತನನ್ನು "ನಿನಗೇನು ಬೇಕು" ಎಂದು ಕೇಳಿದನು. ರೈತನು ತನಗೇನು ಬೇಡ ಎಂದನು ರಾಜನು "ನಾನು ನನ್ನ ಆಸ್ಥಾನಕ್ಕೆ ಬರುವವರನ್ನು ಬರೀ ಕೈಯಲ್ಲಿ ಕಳಿಸಲ್ಲ" ಎಂದು ಹೇಳಿ ಬಡ್ಡ ರೈತನು ಕೊಟ್ಟ ಸೇಬನ್ನು ಈ ಶ್ರೀಮಂತ ರೈತನಿಗೆ ಉಡುಗೊರೆ ಕೊಟ್ಟನು. "ಇದು ನನ್ನ ಪ್ರೀತಿ ಪಾತ್ರನು ಕೊಟ್ಟದು" ಎಂದನು.


ಶ್ರೀಮಂತನು ತನಗೆ ರಾಜನು ನಿಧಿ ಕೊಡುವನು ಎಂದು ಅಂದುಕೊಂಡಿದ್ದ ನಿರಾಶೆಯಾಗಿ ಹೇಪು ಮೋರೆ ಹಾಕಿ ಮನೆಗೆ ಹೋದನು. ನೋಡಿದಿರಾ ದುರಾ ಸೆಯ ಫಲ.

# ಶ್ರೀ ಗೋದಾ ಕಲ್ಯಾಣ

ಚಿತ್ರಕಥೆ

ಕಥೆ:ತೆಲುಗು ಮೂಲ : ಡಿ. ಶ್ರೀನಿವಾಸ ದೀಕ್ಷಿತರು
ಅನುವಾದ : ಶ್ರೀಮತಿ. ಆರ್. ಕೃಷ್ಣವೇಣಿ
ಚಿತ್ರಗಳು : ಕೆ.ತುಲಸೀ ಪ್ರಸಾದ್









**ಮುಂಬರುವ ಸಂಚಿಕೆಯಲ್ಲಿ ಶ್ರೀ ವೆಂಕಟೇಶ್ವರನ ಮತ್ತೊಂದು ದಿವ್ಯಲೀಲೆಯನ್ನು ದರ್ಶಿಸೋಣ...**

ಸ್ವಸ್ತಿ

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

**ರಸಪ್ರಶ್ನೆಗಳು :**

**1. ಸಂಕ್ರಾಂತಿ ಹಬ್ಬವನ್ನು ಯಾವ ಮಾಸದಲ್ಲಿ ಆಚರಿಸುತ್ತಾರೆ?**

1. ಚೈತ್ರಮಾಸ 2. ಆಷಾಢ ಮಾಸ 3. ಪುಷ್ಯಮಾಸ 4.ಮಾಘಮಾಸ

**2. ಸಂಕ್ರಾಂತಿ ಹಬ್ಬದಲ್ಲಿ ಯಾವ ದೇವರನ್ನು ಮುಖ್ಯವಾಗಿ ಪೂಜಿಸುತ್ತೇವೆ?**

1. ಸೂರ್ಯ 2. ಚಂದ್ರ 3. ಇಂದ್ರ 4. ವರುಣ

**3. ಸಂಕ್ರಾಂತಿ ಹಬ್ಬವನ್ನು ಎಷ್ಟು ದಿನಗಳ ಕಾಲ ಆಚರಿಸುತ್ತೇವೆ?**

1. ಒಂದು 2. ಮೂರು 3. ನಾಲಕ್ಕು 4. ಐದು

**4. ಸಂಕ್ರಾಂತಿಯಂದು ಯಾವ ಬೆಳೆಯನ್ನು ವಿಶೇಷವಾಗಿ ಉಪಯೋಗಿಸುತ್ತೇವೆ?**

1. ಜೀರಿಗೆ 2. ಬೆಲ್ಲ 3. ಕಬ್ಬು 4. ಅಕ್ಕಿ

**5. ಸಂಕ್ರಾಂತ್ರಿಯಂದು ಈ ಕ್ರೀಡೆಯನ್ನು ಹೆಚ್ಚಾಗಿ ನೋಡಬಹುದು.**

1. ಚೆಂಟಾಟ 2. ಮರಕೋತಿ 3. ಗಾಳಿಪಟ ಹಾರಿಸುವುದು 4. ಲಗೋರಿ

**6. ಮಕರ ಸಂಕ್ರಾಂತಿಯಿಂದ ಸೂರ್ಯನು ಯಾವ ದಿಕ್ಕಿಗೆ ತನ್ನ ಪಯಣವನ್ನು ಸಾಗಿರಸುತ್ತಾನೆ?**

1. ದಕ್ಷಿಣ 2. ಉತ್ತರ 2. ಉತ್ತರ 3. ಪೂರ್ವ 4. ಪಶ್ಚಿಮ

**7. ಸಂಕ್ರಾಂತಿಯಂದು ಸೂರ್ಯನು ಯಾವ ರಾಶಿಗೆ ಪ್ರೇಶಿಸುತ್ತಾನೆ.?**

1. ಕರ್ಕಾಟಕ 2. ಸಿಂಹ 3. ಮಕರ 4. ಮೇಷ


ಉತ್ತರಗಳು:

1)3 2)1 3)2 4)4 5)3 6)2 7)3

## ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**

**ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju**, M.A.,Special Officer (Press & Publications ), T.T.D. Press, Tirupati - 517 507.



ಧನುರ್ಮಾಸ ಸಂದರ್ಭವಾಗಿ ತಿರುಮಲೆ ಶ್ರೀ ಶ್ರೀ ಶ್ರೀ ದೊಡ್ಡಜೀಯರ್ ಸ್ವಾಮಿಯವರ ನೇತೃತ್ವದಲ್ಲಿ "ತಿರುಪ್ಪಾವೈ" ಪ್ರವಚನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀ ಶ್ರೀ ಶ್ರೀ ಚಿಕ್ಕಜೀಯರ್ ಸ್ವಾಮಿಯವರು ಮತ್ತು ತಿ.ತಿ.ದೇ. ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ ಯವರು "ತಿರುಪ್ಪಾವೈ" ಪ್ರವಚನ ಮಾಡುತ್ತಿರುವ ಆಳ್ವಾರರ ದಿವ್ಯಪ್ರಬಂಧ ಪ್ರಾಜೆಕ್ಟ್ ಪ್ರತ್ಯೇಕಾಧಿಕಾರಿ ಆಚಾರ್ಯ ಶ್ರೀ ಕೆ. ರಾಜಗೋಪಾಲನ್ ರವರು.



ತಿರುಪತಿ ಅನ್ನಮಾಚಾರ್ಯ ಕಳಾಮಂದಿರದಲ್ಲಿ "ತಿರುಪ್ಪಾವೈ" ಪ್ರವಚನ ಕಾರ್ಯಕ್ರಮವನ್ನು 15-12-2020 ರಂದು ಪ್ರಾರಂಭಿಸಿದ ತಿ.ತಿ.ದೇ. ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸದಾ ಭಾರ್ಗವಿ, ಐ.ಎ.ಎಸ್., (ಆರೋಗ್ಯ ಮತ್ತು ಶಿಕ್ಷಣ) ರವರು ಇತರ ತಿ.ತಿ.ದೇ. ಉನ್ನತಾಧಿಕಾರಿಗಳು




ತಿರುಮಲೆಗೆ 27-12-2020 ರಂದು ಆಗಮಿಸಿದ ಆಂಧ್ರಪ್ರದೇಶದ ಹೈಕೋರ್ಟ್ ಪ್ರಧಾನ ನ್ಯಾಯಮೂರ್ತಿ ಶ್ರೀ ಜೆ. ಕೆ. ಮಹೇಶ್ವರಿ ಯವರಿಗೆ ಸ್ವಾಮಿಯವರ ಕ್ಯಾಲೆಂಡರ್ ಮತ್ತು ಡೈರಿಯನ್ನು ನೀಡುತ್ತಿರುವ ತಿ.ತಿ.ದೇ. ತಿರುಮಲೆ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ.ಎ.ವಿ.ಧರ್ಮಾರೆಡ್ಡಿ ಯವರು



ತಿರುಮಲೆಗೆ 24-12-2020 ರಂದು ಆಗಮಿಸಿದ ಭಾರತದ ಸುಪ್ರಿಂಕೋರ್ಟ್ ಪ್ರಧಾನ ನ್ಯಾಯಮೂರ್ತಿ ಶ್ರೀ ಅರವಿಂದ್ ಬಾಬ್ಡೆಯವರಿಗೆ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ. ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ, ತಿ.ತಿ.ದೇ ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್‌ರೆಡ್ಡಿ ಐ.ಎ.ಎಸ್. ರವರು




ದೆಹಲಿ ಶ್ರೀ ವೇಂಕಟೇಶ್ವರ ಕಳಾಶಾಲೆಯಲ್ಲಿ ನೂತನ ಭವನವನ್ನು 29-12-2020 ರಂದು ಪ್ರಾರಂಭಿಸಿದ ತಿ.ತಿ.ದೇ. ಅಧ್ಯಕ್ಷರು. ಶ್ರೀ ವೈ.ವಿ. ಸುಬ್ಬಾರೆಡ್ಡಿ, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ರವರು, ಈ ಕಾರ್ಯಕ್ರಮದಲ್ಲಿ ತಿ.ತಿ.ದೇ. ಆರ್ಥಿಕ ಸಲಹೆದಾರರು ಮತ್ತು ಮುಖ್ಯಗಣಾಂಕಾಧಿಕಾರಿ ಶ್ರೀ ಓ. ಬಾಲಾಜಿ ಯವರು, ಆಡಳಿತ ಮಂಡಳಿ ಸದಸ್ಯರು ಶ್ರೀಮತಿ. ವೇಮಿರೆಡ್ಡಿ ಪ್ರಶಾಂತಿ, ಡಾ॥ ಮುಪ್ಪವರಪು ನಿಶ್ಚಿತ, ಶ್ರೀ ಡಿ.ಪಿ. ಅನಂತ ಮತ್ತು ಶ್ರೀ ರಾಕೇಶ್ ಸಿನ್ಹಾ ರವರು ಪಾಲ್ಗೊಂಡರು.



"ವಾತ್ಸಲ್ಯಾದಿ ಗುಣೋಜ್ಜ್ವಲಾಂ ಭಗವತೀಂ ವಂದೇ ಜಗನ್ಮಾತರಂ"